ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಜನವರಿ 18 ಭಾನುವಾರ 2026

46

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 270 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಇಂದು ಮಣಿಪಾಲ್ ಆಸ್ಪತ್ರೆಯಲ್ಲಿ ತುರ್ತು ಸ್ಪಂದನೆ ಕುರಿತ ಆರೋಗ್ಯ ಸಭೆ

ಮೈಸೂರು, ಜ.17– ಹೃದಯಾಘಾತ, ಪಾರ್ಶ್ವವಾಯು ಅಥವಾ ಅಪಘಾತದಂತಹ ತುರ್ತು ಸಂದರ್ಭಗಳಲ್ಲಿ ತಕ್ಷಣ ಸ್ಪಂದನೆಯಿಂದ ಜೀವ ಉಳಿಸಬಹುದು. ಈ ನಿಟ್ಟಿನಲ್ಲಿ ಸಾರ್ವಜನಿಕರಿಗೆ ಅಗತ್ಯ ಮಾಹಿತಿ ನೀಡುವ ಉದ್ದೇಶದಿಂದ ಮೈಸೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ಭಾನುವಾರ (ಜ.18) ಬೆಳಗ್ಗೆ 10.30ರಿಂದ ಮಧ್ಯಾಹ್ನ 1 ಗಂಟೆವರೆಗೆ ವಿಶೇಷ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ತುರ್ತು ಸಂದರ್ಭಗಳಲ್ಲಿ ತಜ್ಞ ವೈದ್ಯರ ನೆರವು ಸಿಗುವ ಮುನ್ನ ರೋಗಿಯ ಜೀವ ಉಳಿಸಲು ಅಗತ್ಯವಿರುವ ಪ್ರಾಯೋಗಿಕ ಜ್ಞಾನವನ್ನು ಸಾರ್ವಜನಿಕರಿಗೆ ಒದಗಿಸುವುದು ಈ ಆರೋಗ್ಯ ಸಭೆಯ ಮುಖ್ಯ ಉದ್ದೇಶವಾಗಿದ್ದು, 'ತುರ್ತು ಸ್ಪಂದನೆ ಮತ್ತು ಬೇಸಿಕ್ ಲೈಫ್ ಸಪೋರ್ಟ್' ಬಗ್ಗೆ ಮಾಹಿತಿ ನೀಡಲಾಗುವುದು.

ಆಸ್ಪತ್ರೆಯ ಸೀನಿಯರ್ ಕನ್ಸಲ್ಟೆಂಟ್ ನ್ಯೂರೋಸರ್ಜನ್ ಡಾ.ಎ.ಆರ್.ಮಕ್ಸೂದ್ ಅಹ್ಮದ್ ಅವರು ಆಘಾತದಿಂದ ಉಂಟಾಗುವ ತಲೆ ಗಾಯಗಳು ಮತ್ತು ಪಾರ್ಶ್ವವಾಯುವಿನಂತಹ ನರಮಂಡಲದ ತುರ್ತುಸ್ಥಿತಿ ಕುರಿತು ಹಾಗೂ ಕನ್ಸಲ್ಟೆಂಟ್ ಇಂಟರ್ವೆನ್ಷನಲ್ ಕಾರ್ಡಿಯಾಲಜಿ ಡಾ.ಶರತ್ ಬಾಬು ಅವರು ಹೃದಯಕ್ಕೆ ಸಂಬಂಧಿಸಿದ ತುರ್ತು ಪರಿಸ್ಥಿತಿಗಳು, ಹೃದಯಾಘಾತದ ಮುನ್ಸೂಚನೆಗಳು ಹಾಗೂ ತಕ್ಷಣದ ಚಿಕಿತ್ಸೆ ಕುರಿತು ವಿವರಣೆ ನೀಡಲಿದ್ದಾರೆ.

ಇದೇ ವೇಳೆ ತುರ್ತು ಚಿಕಿತ್ಸಾ ತಜ್ಞರಾದ ಡಾ.ಸೈಯದ್ ಮುಶೀರುದ್ದೀನ್, ಡಾ.ಅಮೀನಾ ಹುಸ್ನಾ, ಡಾ.ಗೌತಮ್ ಚಂದ್ರ ಮತ್ತು ಡಾ.ರಾಯಲ ಸಗುಣ ದತ್ತ, ಮೂಲಭೂತ ಜೀವ ಬೆಂಬಲ ಮತ್ತು ಪ್ರಥಮ ಚಿಕಿತ್ಸೆ ಬಗ್ಗೆ ಪ್ರಾತ್ಯಕ್ಷಿಕೆ ಮೂಲಕ ತರಬೇತಿ ನೀಡಲಿದ್ದಾರೆ. ಸಾರ್ವಜನಿಕರಲ್ಲಿ ತುರ್ತು ಸಂದರ್ಭಗಳನ್ನು ಎದುರಿಸುವ ಸಾಮರ್ಥ್ಯ ಹೆಚ್ಚಿಸುವುದು ಮತ್ತು ಆರೋಗ್ಯಕರ ಸಮಾಜ ನಿರ್ಮಾಣ ಮಣಿಪಾಲ್ ಆಸ್ಪತ್ರೆಯ ಧ್ಯೇಯವಾಗಿದೆ ಎಂದು ಆಸ್ಪತ್ರೆಯು ಪ್ರಕಟಣೆ ತಿಳಿಸಿದೆ.

ಅಭಿನಂದನೆ...




ಮೈಸೂರು ನಗರ (ಜಿಲ್ಲೆ) ಬಿಜೆಪಿ ಅಧ್ಯಕ್ಷರಾಗಿ 2 ವರ್ಷಗಳ ಪೂರೈಸಿದ ಮಾಜಿ ಶಾಸಕ ಎಲ್.ನಾಗೇಂದ್ರ ಅವರನ್ನು ಬಿಜೆಪಿ ಮೈಸೂರು ನಗರ ಜಿಲ್ಲಾ ಎಸ್ಸಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ಕಾರ್ತಿಕ್ ಮರಿಯಪ್ಪ, ಮುಖಂಡರಾದ ಚೆಲುವರಾಜ್, ಸರ್ವೇಶ್, ಮಂಜುನಾಥ್, ಶಿವರಾಜ್, ಕೃಷ್ಣ ಅಭಿನಂದಿಸಿದರು.

ಕ್ಯಾಲೆಂಡರ್ ಬಿಡುಗಡೆ...



ಮೈಸೂರು ತಾಲೂಕು ಹುಯಿಲಾಳು ಗ್ರಾಮದ ಶ್ರೀ ಮನೆ ಮಂಚಮ್ಮ ದೇವಸ್ಥಾನ ಸೇವಾ ಟ್ರಸ್ಟ್ ವತಿಯಿಂದ ಪ್ರಕಟಿಸಿರುವ ನೂತನ ವರ್ಷದ ಕ್ಯಾಲೆಂಡರ್ ಅನ್ನು ಟ್ರಸ್ಟ್‌ನ ಅಧ್ಯಕ್ಷ ಹುಯಿಲಾಳು ರಾಮಸ್ವಾಮಿ ಬಿಡುಗಡೆ ಮಾಡಿದರು. ಈ ವೇಳೆ ಹುಯಿಲಾಳು ಮಂಜುನಾಥ್, ಪ್ರಸಾದ್, ಸಿದ್ದರಾಜು, ಶರತ್, ಸಮಂತ್, ಮೋಹಿತ್, ತೋಷಿತ್ ರಾಮಸ್ವಾಮಿ ಮತ್ತಿತರರು ಉಪಸ್ಥಿತರಿದ್ದರು.

ಹಿರಿಯ ಕಾಂಗ್ರೆಸ್ ಮುಖಂಡ ನರಸೇಗೌಡ ನಿಧನ



ಮೈಸೂರು,ಜ.17(ಆರ್‌ಕೆ)–ಮೈಸೂರು ತಾಲೂಕು ಹೊಸಹುಂಡಿ ಗ್ರಾಮದ ನಿವಾಸಿ, ಹಿರಿಯ ಕಾಂಗ್ರೆಸ್ ಮುಖಂಡ ಸಿ.ನರಸೇಗೌಡ (84) ಇಂದು ಬೆಳಿಗ್ಗೆ ಕುವೆಂಪುನಗರದ ಅವರದೇ ಮಾಲೀಕತ್ವದ ಭಾನವಿ ಆಸ್ಪತ್ರೆಯಲ್ಲಿ ನಿಧನರಾಗಿದ್ದಾರೆ.

ಅವರು ಪುತ್ರ, ಡಾ.ಎನ್.ವಿಜಯ್ ಚೆಲುವರಾಜು, ನಾಲ್ವರು ಪುತ್ರಿಯರು, ಸೊಸೆ, ಅಳಿಯಂದಿರು, ಮೊಮ್ಮಕ್ಕಳು, ಸ್ನೇಹಿತರು ಹಾಗೂ ಅಪಾರ ಬಂಧು–ಬಳಗ ಅಗಲಿದ್ದಾರೆ. ನಾಳೆ (ಜ.18) ಮೈಸೂರು ತಾಲೂಕು ಹೊಸಹುಂಡಿ ಸ್ವಗ್ರಾಮದ ಜಮೀನಿನಲ್ಲಿ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಕೆಪಿಸಿಸಿ ಸದಸ್ಯರಾಗಿದ್ದ ನರಸೇಗೌಡರು ಗ್ರಾಮ ಪಂಚಾಯ್ತಿ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದರು. ಮೈಸೂರಿನ ಕುವೆಂಪುನಗರದ ಭಾನವಿ ಆಸ್ಪತ್ರೆ, ಲಲಿತಾದ್ರಿಪುರದ ರಿಂಗ್‌ರಸ್ತೆಗೆ ಹೊಂದಿಕೊಂಡಂತೆ ಭಾನವಿ ಕಲ್ಯಾಣ ಮಂಟಪ ನಿರ್ಮಿಸಿದ್ದರು.

ಮೈಸೂರು ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಜಿಲ್ಲಾಧ್ಯಕ್ಷ ಡಾ.ಬಿ.ಜೆ. ವಿಜಯಕುಮಾರ್, ಮುಡಾ ಮಾಜಿ ಅಧ್ಯಕ್ಷ ಕೆ.ಮರೀಗೌಡ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಸೇರಿದಂತೆ ಅನೇಕ ಮುಖಂಡರು ಅಗಲಿದ ನರಸೇಗೌಡ ಅವರ ಪಾರ್ಥೀವ ಶರೀರದ ಅಂತಿಮ ದರ್ಶನ ಪಡೆದು, ಸಂತಾಪ ಸೂಚಿಸಿದರು.

ಶ್ರೀಮತಿ ಶಾರದ



ಮೈಸೂರು, ಜ.17– ನಗರದ ಅಶೋಕಪುರಂನ ಲೇಟ್ ಪುಟ್ಟವೀರಯ್ಯ ಅವರ ಧರ್ಮಪತ್ನಿ, ಸದ್ಯ ವಿದ್ಯಾರಣ್ಯಪುರಂನಲ್ಲಿ ವಾಸವಿದ್ದ ಶ್ರೀಮತಿ ಶಾರದ(74) ಅವರು ಶನಿವಾರ ನಿಧನರಾದರು.

ಇವರು ಮಕ್ಕಳಾದ ಶೋಭಾ, ಬಿಎಸ್‌ಪಿ ಮುಖಂಡ ಸುನೀಲ್ ಕುಮಾರ್, ಸ್ವಾಗತ್ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಶಾರದ ಅವರು ಹಿರಿಯ ಸಹಕಾರಿ ಹೆಚ್.ವಾಸು ಅವರ ಹಿರಿಯ ಸಹೋದರಿ. ವಿಶ್ವೇಶ್ವರನಗರ ಮೊದಲನೇ ಹಂತದಲ್ಲಿರುವ ಅಶೋಕಪುರಂ ರುದ್ರಭೂಮಿಯಲ್ಲಿ ಭಾನುವಾರ(ಜ.18) ಮಧ್ಯಾಹ್ನ 12ಕ್ಕೆ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮಹದೇವಮ್ಮ




ತಾಂಡವಪುರದ ಕೃಷಿ ಪತ್ತಿನ ಸಾಗರ ಸಂಘದ ಮಾಜಿ ಅಧ್ಯಕ್ಷ ಬಿ.ಬಸವಣ್ಣ ಅವರ ಸಹೋದರಿ, ಕೊಪ್ಪಲು ಬೀರಪ್ಪ ಅವರ ಪತ್ನಿ ಮಹದೇವಮ್ಮ(62) ಶನಿವಾರ ನಿಧನರಾದರು.

ಮೃತರು ಪತಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶನಿವಾರ ಸಂಜೆ ಗ್ರಾಮದ ರುದ್ರಭೂಮಿ ನೆರವೇರಿಸಲಾಯಿತು.

ಇವರ ನಿಧನಕ್ಕೆ ಜಿಲ್ಲಾ ಪಂಚಾಯತಿ ಮಾಜಿ ಅಧ್ಯಕ್ಷ ಬಿ.ಎಂ.ರಾಮು, ಮಾಜಿ ಮೇಯರ್ ಟಿ.ಬಿ.ಚಿಕ್ಕಣ್ಣ, ಪುಷ್ಪಲತಾ ಚಿಕ್ಕಣ್ಣ, ಕೃಷಿ–ಪತ್ತಿನ ಸಹಕಾರ ಸಂಘದ ಮಾಜಿ ಅಧ್ಯಕ್ಷ ಬಿ.ಎಂ.ನಾಗರಾಜು, ಬಸವಣ್ಣ, ಹುಚ್ಚೇಗೌಡ, ಬಸವರಾಜು, ಜಿಲ್ಲಾ ಪಂಚಾಯತಿ ಮಾಜಿ ಸದಸ್ಯ ರೇವಮ್ಮ, ತಾಲೂಕು ಪಂಚಾಯಿತಿ ಮಾಜಿ ಸದಸ್ಯರಾದ ಲಕ್ಷ್ಮಿ, ಬಿ.ಪಿ.ಮಹದೇವ್, ಪಾಲಿಕೆ ಸದಸ್ಯ ಗೋಪಿ, ಕಡಕೋಳ ಬಿ.ನಾಗರಾಜ್, ಮುಖಂಡರಾದ ದಕ್ಷಿಣಮೂರ್ತಿ, ಬಿ.ಆರ್.ರಾಕೇಶ್, ಗ್ರಾಪಂ ಸದಸ್ಯ ಪ್ರಭುಸ್ವಾಮಿ, ಕೆ.ರಾಜು ಸೇರಿದಂತೆ ಅನೇಕ ಮುಖಂಡರು ಮೃತರ ದರ್ಶನ ಪಡೆದು ಸಂತಾಪ ವ್ಯಕ್ತಪಡಿಸಿದರು.


ಮಹದೇವಮ್ಮ



ಮೈಸೂರು, ಜ.17– ನಗರದ ಅಗ್ರಹಾರ ನಿವಾಸಿ ಮಹದೇವಮ್ಮ(96) ಅವರು ಜ.15ರಂದು ನಿಧನರಾದರು.

ಅಪಾರ ಸಾಮಾಜಿಕ ಕಳಕಳಿ ಹೊಂದಿದ್ದ ಇವರು, ಪೊಲೀಸ್ ಇಲಾಖೆಯ ನಿವೃತ್ತ ಸಿಬ್ಬಂದಿ ಎಸ್.ಕೃಷ್ಣಮೂರ್ತಿ ಸೇರಿದಂತೆ ಮಕ್ಕಳು, ಮೊಮ್ಮಕ್ಕಳು ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಚಾಮುಂಡಿಬೆಟ್ಟ ತಪ್ಪಲಿನ ರುದ್ರಭೂಮಿಯಲ್ಲಿ ಜ.16ರಂದು ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವಿಶ್ವನಾಥ್ ಬಿ.ಬಸೆಟ್ಟಿ



ಮೈಸೂರು, ಜ.17– ಮೈಸೂರಿನ ಚಾಮುಂಡಿ ವಿಹಾರ ಬಡಾವಣೆಯ ನಿವಾಸಿ ವಿಶ್ವನಾಥ್ ಬಿ.ಬಸೆಟ್ಟಿ(71) ಶನಿವಾರ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರಿಯರು, ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಬನ್ನಿಮಂಟಪದ ವೀರಶೈವ ಲಿಂಗಾಯತ ರುದ್ರಭೂಮಿಯಲ್ಲಿ ಭಾನುವಾರ ಬೆಳಗ್ಗೆ 11 ಗಂಟೆ ನೆರವೇರಿಸಲಾಗುವುದು ಎಂದು ಕುಟುಂಬ ಮೂಲಗಳು ತಿಳಿಸಿವೆ.

ಮೈಸೂರಲ್ಲಿ ಸರಣಿ ಮನೆಗಳವು; ಕುಖ್ಯಾತ ಅಂತಾರಾಜ್ಯ ಖದೀಮನ ಸೆರೆ

ಮೈಸೂರು, ಜ.17 (ಆರ್‌ಕೆ)– ಮೈಸೂರಲ್ಲಿ ಸರಣಿ ಮನೆಗಳವು ಮಾಡಿ ತಲೆ ಮರೆಸಿಕೊಂಡಿದ್ದ ಕುಖ್ಯಾತ ಅಂತರರಾಜ್ಯ ಖದೀಮನನ್ನು ಪ್ರಕರಣ ನಡೆದ ಮೂರೇ ದಿನದಲ್ಲಿ ಕುವೆಂಪುನಗರ ಠಾಣೆ ಪೊಲೀಸರು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಆಂಧ್ರಪ್ರದೇಶದ ಡಾ.ಬಿ.ಆರ್.ಅಂಬೇಡ್ಕರ್ ಕೋಣಸೀಮ (ಈ ಹಿಂದೆ ಪೂರ್ವ ಗೋದಾವರಿ) ಜಿಲ್ಲೆ, ರಾವುಲಾಪಾಲೆಂ ನಿವಾಸಿ ಲೇ॥ ಕೃಷ್ಣರೆಡ್ಡಿಯ ಮಗ ದ್ವಾರಕಪುರಿ ವೆಂಕಟೇಶ್ವರ ರೆಡ್ಡಿ (34) ಬಂಧಿತ ಆರೋಪಿಯಾಗಿದ್ದು, ಆತನಿಂದ 310 ಗ್ರಾಂ ಬೆಳ್ಳಿ ಪದಾರ್ಥ, 67,000 ನಗದು, 3 ಸಿಸಿಟಿವಿ ಕ್ಯಾಮರ ಹಾಗೂ ಕೃತ್ಯಕ್ಕೆ ಬಳಸಿದ್ದ 1 ಫೋರ್ಡ್ ಫಿಗೋ ಕಾರನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಸರಣಿ ಮನೆಗಳವು: 2025ರ ಡಿಸೆಂಬರ್ 31ರಂದು ಮೈಸೂರಿನ ರಾಮಕೃಷ್ಣನಗರದ ವಾಸು ಬಡಾವಣೆಯ ಪ್ರೊ. ನಾಗಭೂಷಣ್ ಎಂಬುವರ ಮನೆ ಬೀಗ ಮುರಿದು 150 ಗ್ರಾಂ ಬೆಳ್ಳಿ ಪದಾರ್ಥಗಳು, ಮನೆಗೆ ಅಳವಡಿಸಿದ್ದ 3 ಸಿಸಿ ಟಿವಿ ಕ್ಯಾಮರಗಳನ್ನ ಖದೀಮ ಕದ್ದಿದ್ದ. ಅದೇ ದಿನ ರಾತ್ರಿ ಕುವೆಂಪುನಗರ ಹೆಚ್ ಬ್ಲಾಕ್ 5ನೇ ಮೇನ್, 1ನೇ ಕ್ರಾಸ್‌ನಲ್ಲಿರುವ ನಿವೃತ್ತ ಬ್ಯಾಂಕ್ ನೌಕರ ಅನಂತ ಪದ್ಮನಾಭ ಅವರ ಮನೆಯ ಕಿಟಕಿ ಸರಳು ಮುರಿದು ಒಳನುಗ್ಗಿದ್ದ ದ್ವಾರಕಪುರಿ ವೆಂಕಟೇಶ್ವರ ರೆಡ್ಡಿ 40 ಗ್ರಾಂ ತೂಕದ ಬೆಳಿ ನಾಣ್ಯಗಳು ಹಾಗೂ 60,000 ರೂ ನಗದನ್ನು ಕಳವು ಮಾಡಿದ್ದ.

ಮತ್ತೊಂದು ಪ್ರಕರಣದಲ್ಲಿ 2026ರ ಜನವರಿ 2ರಂದು ರಾತ್ರಿ ಶ್ರೀರಾಂಪುರ 2ನೇ ಹಂತ, 2ನೇ ಕ್ರಾಸ್‌ನಲ್ಲಿರುವ ಮೇಘನಾ ಎಂಬುವರ ಮನೆಗೆ ನುಗ್ಗಿ 120 ಗ್ರಾಂ ಬೆಳ್ಳಿ ಆಭರಣಗಳನ್ನು ದೋಚಿ ತಲೆಮರೆಸಿಕೊಂಡಿದ್ದ. ಸ್ಥಳ ಪರಿಶೀಲಿಸಿದ ಕುವೆಂಪು ನಗರ ಠಾಣೆ ಇನ್ಸ್‌ಪೆಕ್ಟರ್ ಯೋಗೇಶ್ ಮತ್ತು ಸಿಬ್ಬಂದಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದರು. ಸುತ್ತಲಿನ ಪ್ರದೇಶದಲ್ಲಿದ್ದ ಸಿಸಿ ಕ್ಯಾಮರ ದೃಶ್ಯಾವಳಿಗಳನ್ನು ಸಂಗ್ರಹಿಸಿ ಸುಳಿವಿನ ಜಾಡು ಹಿಡಿದು ಆರೋಪಿ ಪತ್ತೆಗೆ ವ್ಯಾಪಕ ಶೋಧ ನಡೆಸುತ್ತಿದ್ದರು.

ಈ ಕಳ್ಳ ಸಾಮಾನ್ಯನಲ್ಲ!; ಕಾಲ್ ಸೆಂಟರ್‌ನಲ್ಲಿ ಉದ್ಯೋಗಿ, ಬಿಎಸ್ಸಿ ಕಂಪ್ಯೂಟರ್ ಸೈನ್ಸ್ ಪದವೀಧರ

ಹಾಸನದಲ್ಲಿ ಸೆರೆ: ಪೊಲೀಸರು ತಮಗೆ ದೊರೆತ ಖಚಿತ ಮಾಹಿತಿ ಆಧರಿಸಿ 2026ರ ಜನವರಿ 6 ರಂದು ಮಧ್ಯರಾತ್ರಿ ಹಾಸನ ನಗರದಲ್ಲಿ ದೂರದಲ್ಲಿ ಕಾರು ನಿಲ್ಲಿಸಿ ಮನೆಯೊಂದರಲ್ಲಿ ಕಳ್ಳತನಕ್ಕೆ ಹೊಂಚು ಹಾಕುತ್ತಿದ್ದ ಕುಖ್ಯಾತ ಕಳ್ಳ ಸೆರೆಸಿಕ್ಕಿದ. ಆತನನ್ನು ಠಾಣೆಗೆ ಕರೆ ತಂದು ತೀವ್ರ ವಿಚಾರಣೆಗೊಳಪಡಿಸಿ ಕಳವು ಮಾಲನ್ನು ವಶಪಡಿಸಿಕೊಂಡಿದ್ದಾರೆ. ಮರು ದಿನ ಜನವರಿ 7 ರಂದು ಆತನನ್ನು ನ್ಯಾಯಾಧೀಶರ ಮುಂದೆ ಹಾಜರುಪಡಿಸಿದಾಗ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಯಿತು.

ಚಾಮುಂಡಿ ದರ್ಶನ ಪಡೆದಿದ್ದ: ಮನೆ ಕಳ್ಳತನಕ್ಕೆಂದು ಮೈಸೂರಿಗೆ ಬಂದಿದ್ದ ದ್ವಾರಕಪುರಿ ವೆಂಕಟೇಶ್ವರ ರೆಡ್ಡಿ, 2025ರ ಡಿ.30ರಂದು ಸಂಜೆ ಚಾಮುಂಡಿ ಬೆಟ್ಟಕ್ಕೆ ತೆರಳಿ ತಾಯಿ ಶ್ರೀ ಚಾಮುಂಡೇಶ್ವರಿ ದರ್ಶನ ಪಡೆದು, ತನ್ನ ಪ್ರಯತ್ನ ಫಲಿಸಲಿ ಎಂದು ಬೇಡಿಕೊಂಡಿದ್ದ.

ಪುದುಚೇರಿ ಜೈಲಿನಿಂದ ಬಂದಿದ್ದ: ಆಂಧ್ರಪ್ರದೇಶ, ಪುದುಚೇರಿ, ಕೇರಳ, ಹೈದರಾಬಾದ್, ಹುಬ್ಬಳ್ಳಿ–ಧಾರವಾಡಗಳಲ್ಲಿ ಮನೆಗಳ್ಳತನ ಮಾಡಿದ್ದ ರೆಡ್ಡಿ, ಒಮ್ಮೆ ಬಂಧಿತನಾಗಿ ಪುದುಚೇರಿ ಜೈಲಿನಲ್ಲಿದ್ದ. ಜಾಮೀನಿನ ಮೇಲೆ 20 ದಿನಗಳ ಹಿಂದಷ್ಟೇ ಬಿಡುಗಡೆಯಾಗಿ ಮೈಸೂರಿನಲ್ಲಿ ಮತ್ತೆ ತನ್ನ ಹಳೆ ಚಾಳಿ ಆರಂಭಿಸಿದ್ದ.



ವೆಂಕಟೇಶ್ವರ ರೆಡ್ಡಿ

ಕೃತ್ಯವೆಸಗುವ ಮುನ್ನ...: ಕೃತ್ಯವೆಸಗುವ ಮುನ್ನ ತನ್ನ ಕಾರಿನಲ್ಲಿ ಸುತ್ತಾಡಿ ಯಾವ ಮನೆ ಬೀಗ ಹಾಕಿದೆ, ಸಿಸಿ ಕ್ಯಾಮರಗಳಿರುವುದಿಲ್ಲ ಹಾಗೂ ತಪ್ಪಿಸಿಕೊಳ್ಳಲು ಸರಿಯಾದ ಮಾರ್ಗ ತಿಳಿದುಕೊಂಡು ಯಾರು ಇಲ್ಲವೆಂಬುದನ್ನು ಖಚಿತ ಪಡಿಸಿಕೊಂಡ ಬಳಿಕವೇ ಮಧ್ಯರಾತ್ರಿ 1ರಿಂದ ಮುಂಜಾನೆ 4 ಗಂಟೆವರೆಗೆ ಕಾರ್ಯಾಚರಣೆ ನಡೆಸಿ ಮನೆಗಳವು ಮಾಡುತ್ತಿದ್ದ.

ದೇವರ ಮನೆ ಆಭರಣ ಬೇಡ...!: ಈ ಖದೀಮ ಮನೆಯ ದೇವರ ಕೋಣೆಯಲ್ಲಿ ಬೆಲೆಬಾಳುವ ಪದಾರ್ಥ ಅಥವಾ ಇನ್ನಿತರ ಆಭರಣಗಳು ಇದ್ದರೂ ಅತ್ತ ಸುಳಿಯುತ್ತಿರಲಿಲ್ಲ. ದೇವರ ಮೇಲೆ ಭಕ್ತಿ ಕಾರಣ ಅತ್ತ ಕಾಲಿಡುತ್ತಿರಲಿಲ್ಲವೆಂದೂ ಆತ ಪೊಲೀಸರಿಗೆ ವಿಚಾರಣೆ ವೇಳೆ ತಿಳಿಸಿದ್ದಾನೆ.

ನನ್ನನ್ನು ಹೇಗೆ ಪತ್ತೆ ಮಾಡಿದ್ದೀರಿ!?: ಪೊಲೀಸರು ವಿಚಾರಣೆ ಮಾಡಿದಾಗ ನಾನು ಕಂಪ್ಯೂಟರ್ ಸೈನ್ಸ್ ವಿಷಯದಲ್ಲಿ ಬಿಎಸ್ಸಿ ಪದವಿಧರ. ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಪ್ರಾವೀಣ್ಯತೆ ಪಡೆದಿರುವ ನಾನು ಕಳ್ಳತನ ಕೃತ್ಯವೆಸಗಿದಾಗ ಯಾವುದೇ ಸುಳಿವು ಬಿಡದಂತೆ ತಪ್ಪಿಸಿಕೊಳ್ಳುತ್ತಾ ಬಂದಿದ್ದೇನೆ. ಆದರೆ, ಇದೀಗ ನನ್ನನ್ನು ಹೇಗೆ ಹಿಡಿಯಲು ನಿಮಗೆ ಸಾಧ್ಯವಾಯಿತು ಎಂದು ಆತ ಪೊಲೀಸರನ್ನೇ ಪ್ರಶ್ನೆ ಮಾಡಿ ಪೇಚಿಗೆ ಸಿಲುಕಿಸಿದ್ದಾನೆ.

ನಗರ ಪೊಲೀಸ್ ಕಮಿಷ್ನರ್ ಸೀಮಾ ಲಾಟ್ಕರ್ ನಿರ್ದೇಶನದಂತೆ ಅಪರಾಧ ಮತ್ತು ಸಂಚಾರ ವಿಭಾಗದ ಡಿಸಿಪಿ ಕೆ.ಎಸ್. ಸುಂದರ್‌ರಾಜ್ ಮಾರ್ಗದರ್ಶನದಲ್ಲಿ ಕೆ.ಆರ್. ಉಪ ವಿಭಾಗದ ಎಸಿಪಿ ರಮೇಶ್ ಕುಮಾರ್ ಅವರ ಸಲಹೆ ಮೇರೆಗೆ ಕುವೆಂಪುನಗರ ಠಾಣೆ ಇನ್ಸ್‌ಪೆಕ್ಟರ್ ಯೋಗೇಶ್ ಹಾಗೂ ಕ್ರೈಂ ಸಿಬ್ಬಂದಿ ಈ ಪತ್ತೆ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಪೊಲೀಸರಿಗೆ ಅಭಿನಂದನೆ

ಕುಖ್ಯಾತ ಅಂತರರಾಜ್ಯ ಖದೀಮನ ಕ್ಷಿಪ್ರ ಕಾರ್ಯಾಚರಣೆ ನಡೆಸಿ ಬಂಧಿಸಿರುವ ಕುವೆಂಪುನಗರ ಠಾಣೆ ಪೊಲೀಸರನ್ನು ಮೈಸೂರಿನ ವಾಸು ಬಡಾವಣೆ ಮತ್ತು ರಾಮಕೃಷ್ಣನಗರ ನಿವಾಸಿಗಳು ಅಭಿನಂದಿಸಿದ್ದಾರೆ.

ನಿವಾಸಿಗಳ ಪರವಾಗಿ ಅಚ್ಯುತ ರಾವ್ ಎಂಬುವವರು ಇ–ಮೇಲ್ ಮೂಲಕ 'ಮೈಸೂರು ಮಿತ್ರ'ನಿಗೆ ಬರೆದ ಪತ್ರದಲ್ಲಿ ಕುವೆಂಪುನಗರ ಪೊಲೀಸರ ದಕ್ಷತೆ ಮತ್ತು ವೃತ್ತಿಪರತೆ ಅನುಕರಣೀಯ. ಇತ್ತೀಚೆಗೆ ನಡೆದ ಸರಣಿ ಮನೆ ಕಳ್ಳತನ ಪ್ರಕರಣಕ್ಕೆ ಸಂಬಂಧಿಸಿದಂತೆ ಆಂಧ್ರಪ್ರದೇಶದ ಖದೀಮನನ್ನು ಮೂರೇ ದಿನದಲ್ಲಿ ಬಂಧಿಸುವ ಮೂಲಕ ಆತಂಕದಲ್ಲಿದ್ದ ನಿವಾಸಿಗಳ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಅವರ ನಿರ್ಣಾಯಕ ಕ್ರಮವು ತ್ವರಿತ ನ್ಯಾಯವನ್ನು ಖಚಿತಪಡಿಸುವುದಲ್ಲದೇ, ನಿವಾಸಿಗಳಲ್ಲಿ ಭದ್ರತೆ ಮತ್ತು ವಿಶ್ವಾಸವನ್ನು ಪುನಃ ಸ್ಥಾಪಿಸಿದೆ ಎಂದು ತಿಳಿಸಿದ್ದಾರೆ.

ಶ್ರೀ ಸಿದ್ದರಾಮಾನಂದಪುರಿ ಮಹಾಸ್ವಾಮಿಗೆ ಶ್ರದ್ಧಾಂಜಲಿ



ಶ್ರೀ ಕಾಗಿನೆಲೆ ಮಹಾಸಂಸ್ಥಾನ ಕನಕ ಗುರುಪೀಠ ಶಾಖಾ ಮಠ ತಿಂಥಣಿ ಬ್ರಿಜ್ ಕಲಬುರ್ಗಿ ವಿಭಾಗೀಯ ಪೀಠದ ಪೀಠಾಧಿಪತಿ ಶ್ರೀ ಸಿದ್ದರಾಮಾನಂದಪುರಿ ಮಹಾಸ್ವಾಮಿ ಅವರಿಗೆ ಮೈಸೂರಿನ ಕನಕ ಭವನದಲ್ಲಿ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಕರ್ನಾಟಕ ಪ್ರದೇಶ ಕುರುಬರ ಸಂಘದ ಮಾಜಿ ಅಧ್ಯಕ್ಷ ಬಿ.ಸುಬ್ರಹ್ಮಣ್ಯ, ಮಾಜಿ ಮೇಯರ್‌ಗಳಾದ ಟಿ.ಬಿ.ಚಿಕ್ಕಣ್ಣ, ಪುಷ್ಪಲತಾ ಚಿಕ್ಕಣ್ಣ, ಜಿಲ್ಲಾ ಪಂಚಾಯ್ತಿ ಮಾಜಿ ಸದಸ್ಯ ಬೀರಿಹುಂಡಿ ಬಸವಣ್ಣ, ಪಾಲಿಕೆ ಮಾಜಿ ಸದಸ್ಯರಾದ ಗೋಪಿ, ಶಿವಣ್ಣ, ಮುಖಂಡರಾದ ಬಸವರಾಜ್, ರವಿ, ದೊಡ್ಡೇಗೌಡ, ಕಮಲ, ಹರೀಶ್ ಬೀರೇಶ್, ನಾಗರಾಜ್, ಪ್ರಭು, ಕರಿಗೌಡ, ಮಹೇಶ್, ಸಿದ್ದಪ್ಪ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

18.1.2026 ಭಾನುವಾರ, ಮಳೆ ನಕ್ಷತ್ರ: ಉಷಾ, 11.01.2026 ರಿಂದ 23.01.2026
ವಿಶ್ವಾವಸು ನಾಮ ಸಂವತ್ಸರ, ಉತ್ತರಾಯಣ, ಹೇಮಂತ ಋತು, ಪುಷ್ಯ ಮಾಸ, ಕೃಷ್ಣ ಪಕ್ಷ,
ತಿಥಿ: ಅಮಾವಾಸ್ಯೆ, ನಕ್ಷತ್ರ: ಪೂರ್ವಾಷಾಢ, ರಾಹುಕಾಲ: ಸಂಜೆ 4.30ರಿಂದ 6ರವರೆಗೆ



ಬಾಬಾ ಸಾಹೇಬ್ ಸಮತೆಯೆಡೆಗೆ ನಡಿಗೆ
ಬಹುರೂಪಿ ರಾಷ್ಟ್ರೀಯ ನಾಟಕೋತ್ಸವ–2026

ಚಲನಚಿತ್ರೋತ್ಸವ–2026

(ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ರಂಗಾಯಣ, ಮೈಸೂರು)


- **ಶ್ರೀರಂಗ ರಂಗಮಂದಿರ:** ಬೆಳಗ್ಗೆ 10 ರಿಂದ ಗಾಂಧಿ ಜಯಂತಿ (ಕನ್ನಡ), ನಿರ್ದೇಶನ : ರವೀಂದ್ರನಾಥ್ ಸಿರಿವರ; ಮಧ್ಯಾಹ್ನ 12 ರಿಂದ ಭಾರತದ ಪ್ರಜೆಗಳಾದ ನಾವು (ಕನ್ನಡ), ನಿರ್ದೇಶನ : ಕೃಷ್ಣಮೂರ್ತಿ ಚಮರಂ; ಮಧ್ಯಾಹ್ನ 2 ರಿಂದ ಹೇಮಾವತಿ (ಕನ್ನಡ), ನಿರ್ದೇಶನ : ಸಿದ್ದಲಿಂಗಯ್ಯ.
- **ಭೂಮಿಗೀತ :** ಕವನ್ ಆನ್ ಅಂಬೇಡ್ಕರೈಟ್ ಒಪೆರಾ (ಹಿಂದಿ), ರಚನೆ : ಸುಧೇಶ್ ಜಾದವ್, ನಿರ್ದೇಶನ : ಅಭಿಷೇಕ್ ಮಜೂಂದಾರ್, ತಂಡ : ಯಲ್ಗಾರ್ ಸಾಂಸ್ಕೃತಿಕ್ ಮಂಚ್ ಮತ್ತು ನಳಂದ ಆರ್ಟ್ಸ್ ಸ್ಟುಡಿಯೋ, ಮುಂಬೈ, ಸಂಜೆ 6.30ಕ್ಕೆ
- **ವನರಂಗ :** ರುಮು ರುಮು ರುಮು (ಕನ್ನಡ), ರಚನೆ : ಶ್ರದ್ಧಾರಾಜ್, ಬಿ.ಕೆ. ನರಸಿಂಹರಾಜು, ನಿರ್ದೇಶನ : ಶ್ರದ್ಧಾರಾಜ್ ಹೆಚ್.ಆರ್., ತಂಡ : ಜಿಗುರು ಅಕಾಡೆಮಿ ಆಫ್ ಪರ್ಫಾಮಿಂಗ್ ಆರ್ಟ್ಸ್, ಸಂಜೆ 7ಕ್ಕೆ
- **ಕಿರು ರಂಗಮಂದಿರ :** ಬಹುರೂಪಿ ಬಾಬಾ ಸಾಹೇಬ್–ಸಮತೆಯೆಡೆಗೆ ನಡಿಗೆ– ಎರಡು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣದ ಸಮಾರೋಪ ಸಮಾರಂಭ, ಸಮಾರೋಪ ನುಡಿ : ಸಾಹಿತಿ ಕೋಟಿಗಾನಹಳ್ಳಿ ರಾಮಯ್ಯ, ಮುಖ್ಯ ಅತಿಥಿಗಳು : ಮೈಸೂರು ವಿವಿ ಕುಲಸಚಿವೆ ಶ್ರೀಮತಿ ಎಂ.ಕೆ. ಸವಿತಾ, ಉಪಸ್ಥಿತರು : ಡಾ. ಸಾಬೀರ ಅಹ್ಮದ್ ಮುಲ್ಲಾ, ಪ್ರೊ. ಎಸ್. ನರೇಂದ್ರಕುಮಾರ್, ರಂಗಾಯಣ ಉಪನಿರ್ದೇಶಕ ಡಾ. ಎಂ.ಡಿ. ಸುದರ್ಶನ್, ಅಧ್ಯಕ್ಷತೆ : ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು, ಸಂಜೆ 5 ರಿಂದ.

- **ಶ್ರೀ ಪತ್ಯಂಗೀರ ಯೋಗೇಶ್ವರಿ ಭಗವತಿ ದೇವಸ್ಥಾನ ಶಾರದಾನಿಕೇತನ:** ವಾರ್ಷಿಕ ಉತ್ಸವ, ಬೆಳಗ್ಗೆ 5ರಿಂದ ಸ್ಮಶಾನಕಾಳಿ ತೆರ, ನಾಗಕಾಳಿ ತೆರ, ಕುಟ್ಟಿಚಾತ್ತನ್ ತೆರ, ಗುಳಿಕನ್ ತೆರ, ಚಾಮುಂಡಿ ತೆರ, ಭಗವತಿ ತೆರ, ಗುರಥಿ, ಕಾಲಭೈರವನ ತೆರ, ಸ್ಥಳ: ಶ್ರೀ ಪತ್ಯಂಗೀರ ಯೋಗೇಶ್ವರಿ ಭಗವತಿ ದೇವಸ್ಥಾನ, ಶೆಟ್ಟಿನಾಯಕನಹಳ್ಳಿ.
- **ಸುರಕ್ಷಾ ಫೌಂಡೇಷನ್ :** ಪರಿಸರಕ್ಕಾಗಿ ಅಂಧ ವಿದ್ಯಾರ್ಥಿನಿಯರ ಕ್ರಿಕೆಟ್ ಪಂದ್ಯಾವಳಿ, ಸ್ಥಳ: ಎಸ್‌ಜೆಸಿಇ ಕ್ರೀಡಾ ಮೈದಾನ, ಮಾನಸಗಂಗೋತ್ರಿ, ಬೆಳಗ್ಗೆ 9 ರಿಂದ.
- **ಪಂಚಗರುಡೋತ್ಸವ ಸೇವಾ ಸಮಿತಿ :** ಗರುಡೋತ್ಸವ ಸಂಭ್ರಮ, ಸಾನ್ನಿಧ್ಯ : ಶ್ರೀ ಯದುಗಿರಿ ಯತಿರಾಜ ನಾರಾಯಣ ರಾಮಾನುಜ ಜೀಯರ್, ಅಧ್ಯಕ್ಷತೆ : ಶಾಸಕ ಟಿ.ಎಸ್.ಶ್ರೀವತ್ಸ, ಬೆಳಗ್ಗೆ 10ರಿಂದ ವಿಷ್ಣು ಸಹಸ್ರನಾಮ ಪಾರಾಯಣ, ಬೆಳಗ್ಗೆ 11.05ರಿಂದ ವಿದ್ವಾನ್ ಎಂ.ಜಿ. ರಂಗನಾಥ್ ಮತ್ತು ತಂಡದವರಿಂದ ಹಾಡುಗಾರಿಕೆ, ಮ. 12.30ರಿಂದ ವಿದುಷಿ ರಾಜ್ಯಶ್ರೀ ಜ್ಯೋಷ್ಯರ್ ಮತ್ತು ವಿದುಷಿ ಕುಮಾರಿ ಐಶ್ವರ್ಯ ಮಣಿಕರ್ಣಿಕೆ ಅವರಿಂದ ಯುಗಳ ವೀಣಾವಾದನ, ಮ. 2ರಿಂದ ಕಲಾಂದಿಕ ಅಕಾಡೆಮಿ ಆಫ್ ಆರ್ಟ್ಸ್ ವಿದ್ಯಾರ್ಥಿಗಳಿಂದ ಭರತನಾಟ್ಯ, ಮ. 3.05ರಿಂದ ಮೈಸೂರು ಶ್ರೀ ಲಕ್ಷ್ಮೀನರಸಿಂಹಸ್ವಾಮಿ ಮತ್ತು ಪುಸ್ತಕಂ ದೇವಸ್ಥಾನದ ಗೋಷ್ಠಿಯವರಿಂದ ನೃತ್ಯರೂಪಕ, ಸಂಜೆ 4.05ರಿಂದ ಸಭಾ ಕಾರ್ಯಕ್ರಮ, ಸಂಜೆ 5.31 ರಿಂದ ಪಂಚಗರುಡೋತ್ಸವ ಮೆರವಣಿಗೆ, ಸ್ಥಳ: ಮಹಾಜನ ವಿದ್ಯಾಸಂಸ್ಥೆ ಕ್ರೀಡಾಂಗಣ, ಜಯಲಕ್ಷ್ಮೀಪುರಂ.
- **ಸಪ್ತಗಿರಿ ಕ್ಷೇಮಾಭಿವೃದ್ಧಿ ಸಂಘ :** ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ ಸಮಾರಂಭ, ಉದ್ಘಾಟನೆ : ನಿವೃತ್ತ ದೈಹಿಕ ಶಿಕ್ಷಣ ಪರಿವೀಕ್ಷಕ ಸಿ.ಎಂ. ಶಿವಯ್ಯ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಆರ್. ರಾಜೇಶ್, ಉಪಸ್ಥಿತರು : ಡಾ. ಬಿ. ಲಕ್ಷ್ಮಣ, ಬಿ. ಬಾಲಕೃಷ್ಣ, ಎಂ. ಶಿವಕುಮಾರ್, ಶ್ರೀಮತಿ ಕೆ. ಜಯಂತಿ, ಸ್ಥಳ: ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣ, ಜೆಎಲ್‌ಬಿ ರಸ್ತೆ, ಬೆಳಗ್ಗೆ 10ಕ್ಕೆ
- **ಅಖಿಲ ಭಾರತೀಯ ಸಾಹಿತ್ಯ ಪರಿಷದ್, ಜಿಲ್ಲಾ ಸಮಿತಿ :** ಮೈಸೂರು ಜಿಲ್ಲಾ ಅಧಿವೇಶನ, ಅಧ್ಯಕ್ಷತೆ : ಕೆಎಂಎಫ್ ನಿವೃತ್ತ ಸಿಇಓ ಅಶೋಕ್, ಸಂಕ್ರಾಂತಿ ಕುರಿತು: ಅಭಾಸಾಪ ಉಪಾಧ್ಯಕ್ಷ ಬಿ.ಕೆ. ಜಗದೀಶ್, ಉಪಸ್ಥಿತರು : ಡಾ.ಪಿ.ಹೆಚ್.ರಾಘವೇಂದ್ರ ಶೆಟ್ಟಿ, ನಾರಾಯಣ ಶೇವಿರೆ, ಡಾ.ವಿ. ರಂಗನಾಥ್, ಎಸ್. ಸುಬ್ರಹ್ಮಣ್ಯ, ಸ್ಥಳ: ಡಾ.ಪಿ.ಹೆಚ್.ರಾಘವೇಂದ್ರ ಶೆಟ್ಟಿ ಅವರ ನಿವಾಸದ ಸಭಾಂಗಣ, ವಿನಯ ಮಾರ್ಗ, ಸಿದ್ದಾರ್ಥನಗರ, ಬೆಳಗ್ಗೆ 10.30 ರಿಂದ.
- **ಅಂತರರಾಷ್ಟ್ರೀಯ ಮಾನವ ಏಳಿಗೆ ಮತ್ತು ಅಭಿವೃದ್ಧಿ ಸಂಸ್ಥೆ :** ಸುಗ್ಗಿ ಸಂಭ್ರಮ, ಉಪಸ್ಥಿತರು : ನಟ ಚೇತನ್, ಸಿದ್ದನಗೌಡ ಪಾಟೀಲ್, ತೇಜಸ್ವಿನಿ ನಿರಂಜನ, ಟಿ. ಪದ್ಮಶ್ರೀ, ಸ್ಥಳ: ರಮಾಗೋವಿಂದ ರಂಗ ಮಂದಿರ, ರಾಮಕೃಷ್ಣನಗರ, ಬೆಳಗ್ಗೆ 10.30ಕ್ಕೆ.
- **ಭಗವಾನ್ 1008 ಕೋಟಿ ಶ್ರೀ ಶಾಂತಿನಾಥ ಬಸದಿ :** ಮಂಡಲ ಪೂಜಾ ಮಹೋತ್ಸವ, ಸಾನ್ನಿಧ್ಯ: ಶ್ರೀ ಭುವನಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮೀಜಿ, ಡಾ. ನಂಜಾವಧೂತ ಮಹಾ ಸ್ವಾಮೀಜಿ, ಮುಖ್ಯ ಅತಿಥಿಗಳು : ಶಾಸಕರಾದ ಟಿ.ಎಸ್. ಶ್ರೀವತ್ಸ, ಹೆಚ್. ವಿಶ್ವನಾಥ್, ಉಪಸ್ಥಿತರು : ಶ್ರೀ ದಿಗಂಬರ ಜೈನ ಸಮಾಜದ ಅಧ್ಯಕ್ಷ ಎಂ.ಆರ್.ಸುನೀಲ್‌ಕುಮಾರ್, ಎಸ್.ಬಿ.ಸುರೇಶ್ ಜೈನ್, ಶ್ರೀಮತಿ ಜೆ.ಎನ್. ನಂದಿನಿ ಸಂಯಜ್, ಸ್ಥಳ: ಶ್ರೀ ಶಾಂತಿನಾಥ ಬಸದಿ, ನ್ಯೂ ಸಯ್ಯಾಜಿರಾವ್ ರಸ್ತೆ, ಬೆಳಗ್ಗೆ 11ಕ್ಕೆ.
- **ಮೈಸೂರು, ಮಂಡ್ಯ ಮತ್ತು ಕೊಡಗು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ :** ದೇಶೀಯ, ತಮಾಷೆಯ ಆಟೋಟ ಸ್ಪರ್ಧೆ, ಗೀತಗಾಯನ ಸ್ಪರ್ಧೆ, ಪ್ರಬಂಧ ಮತ್ತು ಚರ್ಚಾ ಸ್ಪರ್ಧೆ, ಉದ್ಘಾಟನೆ : ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಒಕ್ಕೂಟದ ನಿರ್ದೇಶಕ ಬಿ. ಮಹದೇವಸ್ವಾಮಿ, ಒಕ್ಕೂಟದ ಅಧ್ಯಕ್ಷ ಎಸ್.ಆರ್. ನಾರಾಯಣರಾವ್, ಉಪಾಧ್ಯಕ್ಷ ಇ.ಕೆ. ರಾಜನ್, ಸ್ಥಳ: ಪ್ರಮತಿ ಹಿಲ್ ವ್ಯೂ ಅಕಾಡೆಮಿ, ಕುವೆಂಪುನಗರ, ಬೆಳಗ್ಗೆ 11ಕ್ಕೆ.
- **ಕರ್ನಾಟಕ ಸೇನಾ ಪಡೆ :** ಡಾ. ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರ 81ನೇ ಜಯಂತ್ಯೋತ್ಸವ, ಸಾನ್ನಿಧ್ಯ : ಪ್ರೊ. ಭಾಷ್ಯಂ ಸ್ವಾಮೀಜಿ, ಉಪಸ್ಥಿತರು : ಶಾಸಕ ಟಿ.ಎಸ್. ಶ್ರೀವತ್ಸ, ರಾಜ್ಯ ಒಕ್ಕಲಿಗರ ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಜಿ. ಗಂಗಾಧರ್, ಮುಡಾ ಮಾಜಿ ಅಧ್ಯಕ್ಷ ಯಶಸ್ವಿನಿ ಎಸ್. ಸೋಮಶೇಖರ್, ಚಲನಚಿತ್ರ ನಟ ಜಯಪ್ರಕಾಶ್, ಡಾ. ಕೆ. ರಘುರಾಂ ವಾಜಪೇಯಿ, ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ರಾಜ್ಯ ಒಕ್ಕಲಿಗರ ಸಂಘದ ಗೌರವಾಧ್ಯಕ್ಷ ಡಾ. ಸಿ.ವೈ. ಶಿವೇಗೌಡ, ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಡಾ. ಎಂ.ಬಿ. ಮಂಜೇಗೌಡ, ರಾಜ್ಯ ಗೌರವಾಧ್ಯಕ್ಷ ಗೋವಿಂದೇಗೌಡ, ಗೋಲ್ಡನ್ ಸುರೇಶ್, ನಜರ್‌ಬಾದ್ ನಟರಾಜ್, ಸ್ಥಳ: ಅಗ್ರಹಾರ ವೃತ್ತ, ಮಧ್ಯಾಹ್ನ 12ಕ್ಕೆ.
- **ಕೆಪಿಟಿಸಿಎಲ್ ಶ್ರೀ ಕನಕ ನೌಕರರ ಹಿತರಕ್ಷಣಾ ಸಮಿತಿ:** ಸಂತ ಶ್ರೇಷ್ಠ ಕವಿ ಶ್ರೀ ಕನಕದಾಸರ ಜಯಂತ್ಯೋತ್ಸವ, ಪ್ರತಿಭಾ ಪುರಸ್ಕಾರ, ಸನ್ಮಾನ ಸಮಾರಂಭ, ಸಾನ್ನಿಧ್ಯ : ಡಾ. ಶಿವಾನಂದಪುರಿ ಸ್ವಾಮೀಜಿ, ಶ್ರೀ ಈಶ್ವರಾನಂದಪುರಿ ಸ್ವಾಮೀಜಿ, ಉದ್ಘಾಟನೆ: ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ, ಮುಖ್ಯ ಅತಿಥಿಗಳು: ಶಾಸಕರಾದ ಡಿ.ರವಿಶಂಕರ್, ಕೆ.ಎಸ್.ಆನಂದ್, ಜಿಪಂ ಮಾಜಿ ಸದಸ್ಯ ರಾಕೇಶ್ ಪಾಪಣ್ಣ, ಅಧ್ಯಕ್ಷತೆ : ಸಮಿತಿ ಅಧ್ಯಕ್ಷ ಕೆ. ಗಿರೀಶ್, ಸ್ಥಳ: ಕನಕ ಸಮುದಾಯ ಭವನ, ಸಿದ್ದಾರ್ಥನಗರ, ಸಂಜೆ 4ಕ್ಕೆ
- **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀ ರಾಮಕೃಷ್ಣ ವಚನವೇದ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.
- **ಗಾನಭಾರತೀ :** ಕಾಶಿ ಸುಂದರದಾಸ ಸಂಸ್ಮರಣಾ ಮೌನಿ ಅಮಾವಾಸ್ಯೆ ಸಂಗೀತ, ದಾಸರ ಪದಗಳ ಗಾಯನ, ವಿದುಷಿ ಸುನೀತಾ ಹಿರೇಮಠ್ ಅವರಿಂದ ಗಾಯನ, ವಿದ್ವಾನ್ ರಮೇಶ್ ಧನ್ನೂರ್–ತಬಲಾ, ವಿದ್ವಾನ್ ವೀರಭದ್ರಯ್ಯ ಹಿರೇಮಠ್–ಹಾರ್ಮೋನಿಯಂ, ಸ್ಥಳ: ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6 ರಿಂದ.

ಸುತ್ತೂರು ಜಾತ್ರಾ ಮಹೋತ್ಸವ (ಜ. 18)

- **ಸುತ್ತೂರು ಶ್ರೀ ಕ್ಷೇತ್ರ** ಕೃಷಿ ವಿಚಾರ ಸಂಕಿರಣದ ಸಮಾರೋಪ ಸಮಾರಂಭ, ದಿವ್ಯ ಸಮ್ಮುಖ: ಡಾ.ಶ್ರೀ ಬಸವಕುಮಾರ ಸ್ವಾಮೀಜಿ, ಶ್ರೀ ಅರ್ಜುನ ಅವಧೂತ ಗುರೂಜಿ, ಅಧ್ಯಕ್ಷತೆ: ಕಂದಾಯ ಸಚಿವ ಕೃಷ್ಣಬೈರೇಗೌಡ, ಸಮಾರೋಪ ಭಾಷಣ: ಕೃಷಿ ಸಚಿವ ಎನ್.ಚೆಲುವರಾಯಸ್ವಾಮಿ, ಮುಖ್ಯ ಅತಿಥಿಗಳು: ಶಾಸಕರಾದ ಡಾ.ಯತೀಂದ್ರ, ಶ್ರೇಯಸ್ ಎಸ್. ಪಟೇಲ್, ಹೆಚ್.ಎಂ.ಗಣೇಶ್‌ಪ್ರಸಾದ್, ಜೆಎಸ್‌ಎಸ್ ಸಲಹಾ ಸಮಿತಿ ಅಧ್ಯಕ್ಷ ಡಾ. ಸುಭಾಷ್ ಮಲ್ಗನ್, ಚಾ.ನಗರ ಜಿಲ್ಲಾಧಿಕಾರಿ ಶ್ರೀಮತಿ ಶ್ರೀರೂಪ, ಚಲನಚಿತ್ರ ನಟರಾದ ಡಾಲಿ ಧನಂಜಯ, ನೀನಾಸಂ ಸತೀಶ್, ಎನ್.ಎಂ. ನಾಗಭೂಷಣ್, ಗಾಯಕ ವಾಸುಕಿ ವೈಭವ್, ಶ್ರೀಮತಿ ರಾಜೇಶ್ವರಿ ವಿ. ಪಾಟೀಲ್, ಯೋಗೀಶ್ ಅಪ್ಪಾಜಯ್ಯ, ಸಂಜೆ 4.30ಕ್ಕೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಮಾರುತಿ.ಪಿ.ದಾಸಣ್ಣವರ್, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಿನೆಮಾ ಯಾನ–ಜನ ಮೆಚ್ಚಿದ ಕನ್ನಡ ಚಿತ್ರಗಳ ನೆನಪಿನ ಮಾಲೆ, ಪ್ರಸ್ತುತಿ : ಶ್ರೀನಿವಾಸ್ ಪ್ರಸಾದ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ: ಎಂ.ಎಸ್. ಲಕ್ಷ್ಮೀಶ, ವ್ಯಾಖ್ಯಾನ:ಡಾ.ಕಬ್ಬಿನಾಲೆ ವಸಂತಭಾರದ್ವಾಜ, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ– ಡಾ.ಎಸ್.ಎಲ್.ಭೈರಪ್ಪ ಅವರ ದೂರ ಸರಿದರು ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ–ಉಮೇಶ್ ಎಸ್.ಎಸ್., 8.30 ಚಿತ್ರಗೀತೆಗಳು, 9.40 ನಮ್ಮ ಆರೋಗ್ಯ– ಮಲಬದ್ಧತೆ ಹಾಗೂ IBS ಲಕ್ಷಣಗಳು ಮತ್ತು ಪರಿಹಾರ ಈ ಕುರಿತು ತಿಳಿಸಿಕೊಡಲಿದ್ದಾರೆ Proctologist ಹಾಗೂ Colorectal surgeon ಡಾ.ರಾಜಶೇಖರ್, ಮೈಸೂರು. ಇವರೊಂದಿಗೆ ಭಾಗವಹಿಸುತ್ತಾರೆ–ತೇಜಸ್ವಿನಿ ಗಿರೀಶ್, 10.00 ಕೇಳಿಗಿಳಿಗಳೇ–ಕಥೆ ಹೇಳ್ತಿಯೋ ಹಾಡು ಹೇಳ್ತಿಯೋ ನೇರ ಫೋನ್ ಇನ್ ಕಾರ್ಯಕ್ರಮ, 10.30 ಮಕ್ಕಳ ಮಂಟಪ ಪರೀಕ್ಷೆಗೆ ಸಿದ್ಧರಾಗೋಣ ಬನ್ನಿ ಎಸ್.ಎಸ್.ಎಲ್.ಸಿ ಪರೀಕ್ಷಾ ಸಿದ್ಧತೆ ಕುರಿತು ಬಾನುಲಿ ಸರಣಿ ಕಾರ್ಯಕ್ರಮ, ವಿಷಯ–ಸಾಮಾನ್ಯ ವಿಜ್ಞಾನ (ಭೌತಶಾಸ್ತ್ರ ಮತ್ತು ರಸಾಯನಶಾಸ್ತ್ರ), ಭಾಗವಹಿಸುವವರು–ಸದ್ವಿದ್ಯಾ ಪ್ರೌಢಶಾಲೆಯ ಶಿಕ್ಷಕರಾದ ಅನಿಲ್ ಕುಮಾರ್.ಎಸ್, ಇವರೊಂದಿಗೆ ಭಾಗವಹಿಸುತ್ತಾರೆ–ದಿಗ್ವಿಜಯ್.ಬಿ., 11.15 ಮಿಶ್ರಮಾಧುರ್ಯ

ಮಧ್ಯಾಹ್ನ: 12.05 ವನಿತಾ ವಿಹಾರ, ಕನಸಿಗೆ ಕಟ್ ಇಲ್ಲ, ಚಿತ್ರ ನಿರ್ದೇಶಕಿ ಗೌರಿ ಶ್ರೀನಿವಾಸ್–ಪರಿಚಯ, 12.35 ಭಕ್ತಿಗೀತೆಗಳು, 12.45 ಜನಪದ ಸಂಗೀತ : ನಾಗಮಂಗಲ ತಾಲೂಕು ಎಲೆಕೊಪ್ಪ ಗ್ರಾಮದ ಹುಚ್ಚಮ್ಮ ಮತ್ತು ಸಂಗಡಿಗರು, 1.00 ಪ್ರಗತಿಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ – ಪ್ರಧಾನಮಂತ್ರಿ ರಾಷ್ಟ್ರೀಯ ಖಾದ್ಯತೈಲ ಮತ್ತು ಎಣ್ಣೆಕಾಳು ಅಭಿಯಾನ, 1.20 ಭಾವಗೀತೆಗಳು– ಕೆ.ಪಿ.ರೇವತಿ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ಕನ್ನಡ ಚಲನಚಿತ್ರ ಧ್ವನಿವಾಹಿನಿ–ಬಂಧನ, 3.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.45 ಯಕ್ಷಗಾನ ತಾಳಮದ್ದಲೆ – ಪ್ರಸಂಗ ತೀರ್ಥಯಾತ್ರೆ, ಪ್ರಸ್ತುತಿ–ತಂಕುತಿಟ್ಟು ಯಕ್ಷಗಾನ ವೇದಿಕೆ, ಕುಕ್ಕುವಳ್ಳಿ, ಬೆಟ್ಟಂಪಾಡಿ, 6.51 ಕೃಷಿರಂಗ : ತೋರಣ ಹೂರಣ–ಸಾಪ್ತಾಹಿಕ ಸರಣಿ ಕಾರ್ಯಕ್ರಮ, ಪ್ರಸ್ತುತಿ: ಎನ್. ಕೇಶವಮೂರ್ತಿ, ಆರ್. ಲೋಕೇಶ್ವರಿ, ಡಾ.ಮೈಸೂರು ಉಮೇಶ್, ಕೃಷಿಲೋಕ, ಕೃಷಿ ದರ್ಪಣ– ವಾರದ ಕೃಷಿರಂಗ, ಕಿಸಾನ್‌ವಾಣಿ ಕಾರ್ಯಕ್ರಮಗಳ ಮುನ್ನೋಟ ಪ್ರಸ್ತುತಿ: ಆರ್. ಲೋಕೇಶ್ವರಿ, 7.45 ಕನ್ನಡದಲ್ಲಿ ಭಾಷಣ– ಕುವೆಂಪು ಕಂಡ ಕುಕ್ಕರಹಳ್ಳಿ ಕೆರೆ ಸೌಂದರ್ಯ ಈ ಕುರಿತು ಮಾತನಾಡುತ್ತಾರೆ ಕನ್ನಡ ಸಹಪ್ರಾಧ್ಯಾಪಕರಾದ ಡಾ.ಶಿಲ್ಪಶ್ರೀ ಹರವು, 8.00 ಫಸ್ಟ್ ಫಿಲ್ಮ್– ಪ್ರಸ್ತುತಿ–ಶ್ರೀಮಾನ್.ಎಸ್., 8.30 ಹಿಂದಿ ಚಿತ್ರಗೀತೆಗಳು, 9.15 ರಂಗಗೀತೆಗಳು–ಎಚ್ಚಮ್ಮ ನಾಯಕ ನಾಟಕದ ಹಾಡುಗಳು, 9.30 ರಾಷ್ಟ್ರೀಯ ನಾಟಕ– ಪಂಡಿತ್ ದೀನ್ ದಯಾಳ್ ಉಪಾಧ್ಯಾಯ, 10.00 ಆಕಾಶವಾಣಿ ಸಂಗೀತ ಸಮ್ಮೇಳನ–2025, ಪಂಡಿತ್ ನಕುಲ್ ಮಿಶ್ರ–ತಬಲಾ ವಾದನ, ರಫೀಕ್ ಖಾನ್– ವೈಯೋಲಿನ್ ವಾದನ

ಭಾವಪೂರ್ಣ ಶ್ರದ್ಧಾಂಜಲಿ



ಭಾನವಿ ಚಾರಿಟೆಬಲ್ ಟ್ರಸ್ಟ್ ಹಾಗೂ ಭಾನವಿ ಆಸ್ಪತ್ರೆಯ ಸಂಸ್ಥಾಪಕರು,
ಒಕ್ಕಲಿಗರ ಸಂಘದ ಮಾಜಿ ಅಧ್ಯಕ್ಷರು ಮತ್ತು ಹಿರಿಯ ಕಾಂಗ್ರೆಸ್ ನಾಯಕರೂ ಆದ,

ಶ್ರೀಯುತ ನರಸೇಗೌಡ ಸಿ

ಅವರು ದಿನಾಂಕ 17-01-2026 ರಂದು ವಿಧಿವಶರಾಗಿರುವುದನ್ನು ಅತ್ಯಂತ ದುಃಖದಿಂದ ತಿಳಿಸುತ್ತೇವೆ.

ಭಗವಂತನು ಮೃತರ ಆತ್ಮಕ್ಕೆ ಚಿರಶಾಂತಿ ನೀಡಲಿ ಎಂದು ಪ್ರಾರ್ಥಿಸುತ್ತೇವೆ.

ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 18-01-2026 ಭಾನುವಾರದಂದು
ಸ್ವಗ್ರಾಮ ಹೊಸಹುಂಡಿಯಲ್ಲಿ ಮಧ್ಯಾಹ್ನ 2 ಗಂಟೆಗೆ ಏರ್ಪಡಿಸಲಾಗಿದೆ.

ದುಃಖತಪ್ತರು
ಡಾ. ವಿಜಯ್ ಚೆಲುವರಾಜ್ ಎನ್.
(ವೈದ್ಯಾಧಿಕಾರಿಗಳು, ಭಾನವಿ ಆಸ್ಪತ್ರೆ)
ಹಾಗೂ ಕುಟುಂಬದವರು,
ಭಾನವಿ ಚಾರಿಟೆಬಲ್ ಟ್ರಸ್ಟ್ ಮತ್ತು ಭಾನವಿ ಆಸ್ಪತ್ರೆಯ ಸಿಬ್ಬಂದಿ ವರ್ಗ.

ನಕ್ಕರೆ ಅದೇ ಸ್ವರ್ಗ

ವ್ಯಕ್ತಿಯೊಬ್ಬರ ಕಾರು ರಸ್ತೆ ಮಧ್ಯೆ ಗುಂಡಿಯಲ್ಲಿ ಸಿಕ್ಕಿ ಹಾಕಿಕೊಂಡಿತ್ತು. ಅಲ್ಲಿಗೆ ಬಂದ ಗುಂಡ ಮತ್ತು ಅವನ ಗೆಳೆಯರು ಕಾರನ್ನು ದೂಡಿ ಅದು ಮೇಲೆ ಬರಲು ಸಹಾಯ ಮಾಡಿದರು.

ವ್ಯಕ್ತಿ (ಖುಷಿಯಿಂದ ಬೆನ್ನು ತಟ್ಟಿ 500 ರೂ. ಕೊಟ್ಟು) : ಏನ್ ಕೆಲ್ಸ ಮಾಡ್ತೀಯಾ ನೀನು?
ಗುಂಡ : ನಂಗೆ ರೋಡಿನಲ್ಲಿ ಗುಂಡಿ ತೋಡುವುದೇ ಕೆಲ್ಸ!

ಮೈಸೂರು ಮಿತ್ರ

ಭಾನುವಾರ, ಜನವರಿ 18, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ..........

ಹುಟ್ಟು ಎಲ್ಲೋ ಸಾವು ಎಲ್ಲೋ, ಬದುಕಿನ ಪಯಣ ಇನ್ನೆಲ್ಲೋ, ಆದರೆ ಪಯಣದ ದಾರಿಯಲ್ಲಿ ಸಿಗುವ ಸ್ನೇಹ, ಪ್ರೀತಿ, ವಿಶ್ವಾಸ ಮಾತ್ರ ಮನಸ್ಸಿಗೆ ತುಂಬಾ ಹತ್ತಿರವಾಗಿರುತ್ತದೆ. ನೆನಪುಗಳೊಂದೆ ಇಲ್ಲಿ ಶಾಶ್ವತ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹಾಗಲಕಾಯಿಗೆ ಬೇವಿನಕಾಯಿ ಸಾಕ್ಷಿ ಹೇಳಿದ ಹಾಗೆ.

ನಿಮ್ಮ ಪತ್ರಗಳು

ಒಳ್ಳೆಯ ಲೇಖನ

ಮಾನ್ಯರೆ,

'ಮೈಸೂರು ಮಿತ್ರ'ದಲ್ಲಿ ಮಿರ್ಲೆ ಚಂದ್ರಶೇಖರ ಅವರು ಬರೆದ **'ಆಸ್ಪತ್ರೆ, ಜೈಲು, ಸ್ಮಶಾನದಲ್ಲಿ ಜೀವನ ದರ್ಶನ'** ಲೇಖನ ಮನ ಮುಟ್ಟುವಂತಿತ್ತು. ರಾಕೇಶ್ ರಾದೇಶ್ಯಾಮ್ ಜುಂಜುನ್ವಾಲಾ ಮತ್ತು ವಾರೆನ್ ಬಫೆಟ್ ತಾವು ಕಷ್ಟಪಟ್ಟು ತಮ್ಮ ಬುದ್ಧಿಶಕ್ತಿಯಿಂದ ದುಡಿದ ಹಣದ ಬಹುಪಾಲು ದಾನ ಮಾಡಿರುವುದು ಶ್ಲಾಘನೀಯ. ಅದೇ ರೀತಿ ಆಸ್ಪತ್ರೆಯಲ್ಲಿದ್ದಾಗ ಜುಂಜುನ್ವಾಲಾ ಅವರು ಆಡಿದ ಮಾತುಗಳು ಯಾವುದೇ (ಅಡ್ಡ) ದಾರಿ ಆದರೂ ಸರಿ ಅದನ್ನು ಬಳಸಿ ಹಣ ಮತ್ತು ಅಧಿಕಾರಕ್ಕಾಗಿ ಹಪಹಪಿಸುವ ಪ್ರತಿಯೊಬ್ಬರಿಗೂ ಎಚ್ಚರಿಕೆಯ ಕಿವಿ ಮಾತುಗಳಾಗಿವೆ. ಲೇಖಕರು ಬರೆದಂತೆ ಆಸ್ಪತ್ರೆ, ಜೈಲು, ಸ್ಮಶಾನ ದರ್ಶನ ಕಣ್ಣು ತೆರೆಸುತ್ತವೆ. ಜೀವನದ ನಿಜವಾದ ಮೌಲ್ಯ ಅರ್ಥ ಮಾಡಿಸುತ್ತದೆ.

–ರಾಘವೇಂದ್ರ ಜೋಯಿಸ್, ಮೈಸೂರು

ಪಠ್ಯಪುಸ್ತಕದಲ್ಲಿ ಪುನೀತ್ ಜೀವನಗಾಥೆ ಸೇರ್ಪಡೆ: ಸ್ವಾಗತಾರ್ಹ

ಮಾನ್ಯರೆ,

ಮುಂಬರುವ ಪಠ್ಯಪುಸ್ತಕ ತಯಾರಿ ಅಥವಾ ಪರಿಷ್ಕರಣೆ ಪ್ರಕ್ರಿಯೆಯಲ್ಲಿ ಪುನೀತ್ ರಾಜ್‌ಕುಮಾರ್ ಅವರ ಜೀವನ ಮತ್ತು ಸಾಧನೆಗಳ ಪಾಠಗಳನ್ನು ಸೇರಿಸುವ ಪ್ರಸ್ತಾಪವನ್ನು ಪರಿಗಣಿಸುವುದಾಗಿ ಕರ್ನಾಟಕ ಪಠ್ಯಪುಸ್ತಕ ಸೊಸೈಟಿ ದೃಢಪಡಿಸಿರುವುದು ಸ್ವಾಗತಾರ್ಹ. ಲೋಕೋಪಕಾರಿ ಮತ್ತು ಮೌಲ್ಯಗಳಿಗೆ ಹೆಸರುವಾಸಿಯಾದ ಸಾಮಾಜಿಕ ಪ್ರಜ್ಞೆಯ ವ್ಯಕ್ತಿಯಾಗಿರುವ ಅವರ ಬದುಕಿನ ಪಯಣ ಭವಿಷ್ಯದ ಪೀಳಿಗೆಗೆ ಸ್ಫೂರ್ತಿ ನೀಡುವ ರೀತಿ ಇದ್ದು ಅದನ್ನು ಮಕ್ಕಳಿಗೆ ಸೇರಿಸಿದರೆ ಉತ್ತಮವಾಗಿದೆ.

ಪುನೀತ್ ಅವರ ಜೀವನವು ಶಿಸ್ತು, ಶ್ರಮ, ಸರಳತೆ ಮತ್ತು ಮಾನವೀಯ ಮೌಲ್ಯಗಳ ಪ್ರತೀಕ. ಪುನೀತ್ ಅವರು ಭೌತಿಕವಾಗಿ ನಮ್ಮೊಂದಿಗೆ ಇಲ್ಲವಾದರೂ ಅವರ ಸಾಧನೆ ಮತ್ತು ಮೌಲ್ಯಗಳು ಇಂದಿಗೂ ಕೋಟ್ಯಾಂತರ ಕನ್ನಡಿಗರಿಗೆ ಸ್ಫೂರ್ತಿಯಾಗಿದೆ. ವಿಭಿನ್ನ ಪಾತ್ರಗಳ ಮೂಲಕ ಪ್ರೇಕ್ಷಕರ ಮನ ಗೆದ್ದಿರುವ ಅವರು ಸಿನಿಮಾ ಮಾತ್ರವಲ್ಲದೆ ಶಿಕ್ಷಣ, ಆರೋಗ್ಯ, ದಾನ ಧರ್ಮ ಕಾರ್ಯಗಳು ಹಾಗೂ ಸಮಾಜಮುಖಿ ಚಟುವಟಿಕೆಗಳ ಮೂಲಕವೂ ಜನಮನದಲ್ಲಿ ಅಚ್ಚಳಿಯದ ಸ್ಥಾನ ಪಡೆದಿದ್ದಾರೆ. ಪ್ರಸ್ತುತ ಪುನೀತ್ ಅವರ ಜೀವನಗಾಥೆಯು ಪಠ್ಯಪುಸ್ತಕದಲ್ಲಿ ಸೇರ್ಪಡೆಯಾಗುತ್ತಿರುವುದು ಅವರ ನಟನಾ ವೃತ್ತಿ ಜೀವನವನ್ನು ಮೀರಿ ಯಾವ ರೀತಿಯ ವ್ಯಕ್ತಿಯಾಗಿದ್ದರು ಎಂಬುದನ್ನು ಮಕ್ಕಳು ತಿಳಿದುಕೊಳ್ಳಲು ಇದರಿಂದ ಸಹಾಯವಾಗುತ್ತದೆ. ಒಟ್ಟಾರೆಯಾಗಿ ಅಪ್ಪು ಅವರ ಜೀವನ ಪಾಠಗಳು ಮುಂದಿನ ಪೀಳಿಗೆಯ ಮಕ್ಕಳಿಗೆ ದಾರಿದೀಪವಾಗಲಿ.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

ಕುಕ್ಕರಹಳ್ಳಿ ಕೆರೆಯಲ್ಲಿ ವಿದ್ಯುತ್ ದೀಪ ಬೆಳಗಲಿ



ಮಾನ್ಯರೆ,

ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ನೆಲೆಸಿರುವ ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿರುವ ಕುಕ್ಕರಹಳ್ಳಿ ಕೆರೆ ಪರಿಸರದಲ್ಲಿ ವಾಯುವಿಹಾರ, ಓಟ, ವ್ಯಾಯಾಮ, ಗಾಯನ, ಯೋಗ, ಧ್ಯಾನ ಮಾಡುವುದಕ್ಕೆ ಪ್ರತಿದಿನ ಸಾವಿರಾರು ಸಂಖ್ಯೆಯಲ್ಲಿ ಚಿಕ್ಕ ಮಕ್ಕಳಿಂದ ಹಿಡಿದು ವಿದೇಶಿಯರು, ಮಹಿಳೆಯರು, ಹಿರಿಯ ನಾಗರಿಕರು ಬರುತ್ತಾರೆ. ಕೆಲವು ವಿಶೇಷ ದಿನಗಳಲ್ಲಿ ಮತ್ತು ಸರ್ಕಾರಿ ರಜೆ ದಿನಗಳಲ್ಲಿ ಸಹ ಹೆಚ್ಚಿನ ಸಂಖ್ಯೆಯಲ್ಲಿ ಹೊರ ರಾಜ್ಯ, ದೇಶಗಳಿಂದಲೂ ಪ್ರವಾಸಿಗರು ಆಗಮಿಸುತ್ತಾರೆ. ಈ ನಡುವೆ ಮುಂಜಾನೆ 5.30ರ ವೇಳೆಗೆ ಕುಕ್ಕರಹಳ್ಳಿ ಕೆರೆಯ ಬಾಗಿಲು ತೆರೆಯುತ್ತದೆ. ಈ ಸಮಯದಲ್ಲಿ ಮತ್ತು ಸಂಜೆ 5.40ರ ಸಮಯಕ್ಕೆ ಕುಕ್ಕರಹಳ್ಳಿ ಕೆರೆಯ ಕೆಲ ಭಾಗಗಳಲ್ಲಿ ಕತ್ತಲಾವರಿಸುತ್ತದೆ. ಆದ್ದರಿಂದ ಸಂಬಂಧಪಟ್ಟ ಮೈಸೂರು ವಿಶ್ವವಿದ್ಯಾನಿಲಯದ ಅಧಿಕಾರಿಗಳು ಕುಕ್ಕರಹಳ್ಳಿ ಕೆರೆಯ ಸಂರಕ್ಷಣೆ ಮತ್ತು ಸಾರ್ವಜನಿಕರ ಹಿತಕ್ಕಾಗಿ ಕೆರೆಯಲ್ಲಿರುವ ವಿದ್ಯುತ್ ಕಂಬಗಳಿಗೆ ವಿದ್ಯುತ್ ದೀಪಗಳನ್ನು ಅಳವಡಿಸಬೇಕೆಂದು ಹಾಗೂ ಕೆರೆಯಲ್ಲಿರುವ ಕೆಲ ವಿದ್ಯುತ್ ಕಂಬಗಳಲ್ಲಿ ದೀಪಗಳಿದ್ದರೂ ಸಹ ಬೆಳಗುತ್ತಿಲ್ಲ. ಆದ್ದರಿಂದ ಇರುವ ವಿದ್ಯುತ್ ದೀಪಗಳು ಬಳಕೆಯಾಗುವಂತೆ ಅಭಿವೃದ್ಧಿ ಮಾಡಬೇಕೆಂದು ಈ ಮೂಲಕ ಮನವಿ.

–ನಾಗೇಶ್, ಮಾನಸಗಂಗೋತ್ರಿ, ಮೈಸೂರು.

ಅಂದು ಮೌಲ್ಯ, ಇಂದು ಮಾಲಿನ್ಯ

ಮಾನ್ಯರೆ,

ಹಿಂದೆ ಕಿರುತೆರೆಯಲ್ಲಿ ಶಂಕರ್ ನಾಗ್ ಅವರ ಮಾಲ್ಗುಡಿ ಡೇಸ್, ಫಣಿ ರಾಮಚಂದ್ರ ಅವರ ಹಾಸ್ಯಭರಿತ ಕೌಟುಂಬಿಕ ಕಥೆಗಳು ಹಾಗೂ ಟಿ.ಎನ್. ಸೀತಾರಾಮ್ ಅವರ ಸಾಮಾಜಿಕ ಕಾಳಜಿಯ ಧಾರವಾಹಿಗಳು ಮೂಡಿಬರುತ್ತಿದ್ದವು. ಅಂತಹ ಕಥೆಗಳಲ್ಲಿ ಬದುಕಿನ ಸತ್ವ, ಸಾಹಿತ್ಯದ ಸೊಗಡು ಮತ್ತು ಉತ್ತಮ ಜೀವನ ಮೌಲ್ಯಗಳಿರುತ್ತಿದ್ದವು. ಆದರೆ ಇಂದಿನ ಬಹುತೇಕ ಧಾರವಾಹಿಗಳು ಗಂಡನ ಅಕ್ರಮ ಸಂಬಂಧ, ಸುಪಾರಿ ಕೊಲೆ, ಅತ್ತೆ–ಸೊಸೆಯರ ವಿಷಪೂರಿತ ಕಲಹ ಹಾಗೂ ವಿಚ್ಛೇದನದ ಸುತ್ತಲೇ ಸುತ್ತುತ್ತಿರುವುದು ವಿಷಾದನೀಯ.

ಕರ್ಕಶ ಹಿನ್ನೆಲೆ ಸಂಗೀತದೊಂದಿಗೆ ಸದಾ ಸಿಟ್ಟು, ದ್ವೇಷ ಮತ್ತು ಮನೆಹಾಳು ಬುದ್ಧಿಯನ್ನೇ ಇಲ್ಲಿ ವೈಭವೀಕರಿಸಲಾಗುತ್ತಿದೆ. ಮನರಂಜನೆಯ ಹೆಸರಿನಲ್ಲಿ ಇಂತಹ ನಕಾರಾತ್ಮಕ ಅಂಶಗಳನ್ನು ಬಿತ್ತುತ್ತಿರುವ ಧಾರವಾಹಿಗಳ ನಿಜವಾದ ಉದ್ದೇಶವಾದರೂ ಏನು ಎಂಬುದು ಯಕ್ಷಪ್ರಶ್ನೆಯಾಗಿದೆ. ಮನೆಯವರೆಲ್ಲರೂ ಕುಳಿತು ನೋಡಲಾಗದಂತಹ ಈ ವಾತಾವರಣವು ಎಳೆಯ ಮನಸ್ಸುಗಳ ಮೇಲೆ ಕೆಟ್ಟ ಪರಿಣಾಮ ಬೀರುತ್ತಿದೆ. ಸಮಾಜವನ್ನು ಸುಧಾರಿಸಬೇಕಾದ ಮಾಧ್ಯಮವು ದಾರಿ ತಪ್ಪುತ್ತಿರುವುದು ಆತಂಕಕಾರಿ ವಿಷಯ. ವಾಹಿನಿಗಳು ಕೇವಲ ಟಿ.ಆರ್.ಪಿ ಬೆನ್ನತ್ತುವುದನ್ನು ಬಿಟ್ಟು, ಸಂಸ್ಕೃತಿಯನ್ನು ಉಳಿಸುವ ಮತ್ತು ಬದುಕುವ ಹಾದಿಯನ್ನು ಕಲಿಸುವ ಸದಭಿರುಚಿಯ ಕಾರ್ಯಕ್ರಮಗಳಿಗೆ ಆದ್ಯತೆ ನೀಡಲಿ.

–ಬಿ.ಗಣೇಶ, ಕೆ.ಜಿ.ಕೊಪ್ಪಲು, ಮೈಸೂರು



ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

ನಾದಲಹರಿ

ಮೈಸೂರಲ್ಲೊಂದು ಉತ್ತರಾಯಣ..!





ಒಡೆಯರರ ಆಳ್ವಿಕೆ ಇದ್ದಾಗಿನಿಂದಲೂ ಮೈಸೂರು ದಕ್ಷಿಣ ಭಾರತದ ಪ್ರಮುಖ ಸಾಂಸ್ಕೃತಿಕ ಕೇಂದ್ರ ಎಂದೇ ಅನಿಸಿಕೊಂಡಿದೆ. ಸಂಗೀತ, ಸಾಹಿತ್ಯ, ಚಿತ್ರಕಲೆ, ಶಿಲ್ಪ, ನಾಟಕ, ನೃತ್ಯ ಯಾವುದೇ ಕಲಾ ವಿಭಾಗ ಆಗಿರಲಿ, ಅದು ಒಡೆಯರ ಕಾಲದಲ್ಲಿ ಉತ್ತುಂಗಕ್ಕೆ ಏರಿದುದನ್ನು ಇತಿಹಾಸವು ತಿಳಿಸುತ್ತದೆ. ಸ್ವತಃ ವಿದ್ವಾಂಸರೂ, ಕಲಾ ಪ್ರೇಮಿಗಳೂ, ಕಲಾ ಪೋಷಕರೂ ಆಗಿದ್ದ ಒಡೆಯರರು ಕಲೆಯ ಎಲ್ಲಾ ಕ್ಷೇತ್ರಗಳ ಅಭಿವೃದ್ಧಿಗೂ ವಿಶೇಷ ಪ್ರೋತ್ಸಾಹವನ್ನು ನೀಡಿ, ಅವುಗಳ ಅಭಿವೃದ್ಧಿಗೆ ಗಮನ ನೀಡಿದುದು ಸಹಜವೇ ಆಗಿತ್ತು ಎಂದೆನ್ನಬಹುದು.

ಒಡೆಯರ ಆಳ್ವಿಕೆ ನಂತರ ಕಲಾವಿದರ ಮನದಲ್ಲಿ ಒಂದು ರೀತಿಯ ಅಸ್ಥಿರತೆ, ಅಭದ್ರತೆ, ಅನಾಥಭಾವ ಆವರಿಸಿದ್ದಲ್ಲಿ ಅದರಲ್ಲಿ ಏನೂ ಅಚ್ಚರಿ ಇಲ್ಲ. ಆಗ ಅವರ ಸಹಾಯಕ್ಕೆ ಬಂದುದು ಹಲವು ಸಂಗೀತ ಸಭೆಗಳು. ನಗರದ ಬೇರೆ ಬೇರೆ ಬಡಾವಣೆಗಳಲ್ಲಿ ತಲೆ ಎತ್ತಿದ್ದ ಇವು, ತಕ್ಕಮಟ್ಟಿಗೆ ಆ ಕೊರತೆ ನಿವಾರಿಸುವ ದಿಕ್ಕಿನಲ್ಲಿ ಕೆಲಸ ಮಾಡಿದುವು ನಿಜ. ಸರಕಾರದ ಆಕಾಶವಾಣಿ, ಅಕಾಡೆಮಿಗಳೂ ಈ ನಿಟ್ಟಿನಲ್ಲಿ ಕೈಜೋಡಿಸಿದುವು. ಆದರೆ, ನಮ್ಮಲ್ಲಿರುವ ವಿವಿಧ ಕಲಾ ಕ್ಷೇತ್ರಗಳ ಕಲಾವಿದರ ಸಂಖ್ಯೆಗೆ ಹೋಲಿಸಿದರೆ, ಅದು ಏನೂ ಸಾಲದು ಎಂಬ ಭಾವನೆ ಬರುವುದು.

ಮೈಸೂರಿನಲ್ಲಿ ಏಕಕಾಲಕ್ಕೆ ಸುಮಾರು ಒಂಬತ್ತು ಕಾರ್ಯಕ್ರಮಗಳನ್ನು ನಡೆಸಬಹುದಾದ ಬೃಹತ್ ಕಲಾ ಸಮುಚ್ಚಯ ಒಂದು ಆರಂಭವಾಗಿರುವುದು ನಿಮಗೆ ಗೊತ್ತೇ? ಬಹುಶಃ ಮುಂಬಯಿಯನ್ನು ಬಿಟ್ಟರೆ, ದೇಶದಲ್ಲಿ ಇರುವ ಅತೀ ದೊಡ್ಡ ಕಲಾ ಸಮುಚ್ಚಯ ಇದು ಎಂದು ಧಾರಾಳವಾಗಿ ಹೇಳ ಬಹುದೇನೋ. ಸುಮಾರು ಮುನ್ನೂರು ಮಂದಿ ಕೂರಬಹುದಾದ ಹವಾ ನಿಯಂತ್ರಿತ ಒಂದು ಸಭಾಂಗಣ, ಎರಡು ಬಯಲು ರಂಗ ಮಂದಿರಗಳಲ್ಲದೆ, ಕಾರ್ಯಾಗಾರ, ಪ್ರಾತ್ಯಕ್ಷಿಕೆ, ಉಪನ್ಯಾಸಗಳಿಗೆ ಹೇಳಿ ಮಾಡಿಸಿದಂತಹ ಆರೇಳು ದೊಡ್ಡ ಸಭಾಂಗಣಗಳಿವೆ. ಅವುಗಳ ಹೆಸರೂ ಅರ್ಥಗರ್ಭಿತವಾಗಿದೆ, ಸಾಂಕೇತಿಕವಾಗಿದೆ. ತಾಂಡವ, ಲಾಸ್ಯ, ವಿಸ್ತಾರ, ನವರಂಗ, ವೇದಿಕ, ನಕ್ಷತ್ರ, ಕಲ್ಯಾಣಿ, ಚಿತ್ತಾರ, ಅಂಗಳ ಹೀಗೆ. ಅತ್ಯಂತ ಆಧುನಿಕ ಧ್ವನಿವರ್ಧಕಗಳು, ಬೆಳಕಿನ ವ್ಯವಸ್ಥೆ, ಆರಾಮವಾದ ಪೀಠೋಪಕರಣಗಳು, ವಾಹನಗಳನ್ನು ನಿಲ್ಲಿಸಲು ಸ್ಥಳ, ಸುತ್ತಲೂ ಕಣ್ಣಿಗೆ ತಂಪೆರೆಯುವ ಹಸಿರು ವನಸಿರಿ ಇವೆಲ್ಲವುಗಳಿಂದ ಈ ಸಾಂಸ್ಕೃತಿಕ ಕೇಂದ್ರವು ಮೈಸೂರಿನ ಹೆಮ್ಮೆಯ ಗುರು ತಾಗುವುದರಲ್ಲಿ ಸಂಶಯವೇ ಇಲ್ಲ.

> **“ ವಿಜಯನಗರ ಮೊದಲನೇ ಹಂತದಲ್ಲಿ ತಲೆಯೆತ್ತಿರುವ ಬೃಹತ್ ಕಲಾ ಸಮುಚ್ಚಯವು ಕಲೆಯ ಎಲ್ಲ ಪ್ರಕಾರಗಳ ಪ್ರದರ್ಶನಕ್ಕೆ ಕಟಿಬದ್ಧವಾಗಿದೆ. ಉತ್ತರಾಯಣದ ಸಂದರ್ಭದಲ್ಲಿ ಸೂರ್ಯನು ತನ್ನ ಪಥ ಬದಲಿಸುತ್ತಾನೆ ಎಂಬುದು ಎಲ್ಲರಿಗೂ ತಿಳಿದ ಸಂಗತಿಯೇ ಆಗಿದೆ. ಅದರ ಸಂಕೇತ ಎಂಬಂತೆ ಜೆಸಿಎಸಿಯು ಜನವರಿ 23–27ರವರೆಗೆ ಉತ್ತರಾಯಣ ಎಂಬ ಹೆಸರಿನಲ್ಲಿಯೇ ಒಂದು ಮಹಾ ಸಾಂಸ್ಕೃತಿಕ ಹಬ್ಬವನ್ನು–ಸಂಭ್ರಮ ಏರ್ಪಡಿಸಿದೆ. ಕೇವಲ ಬೇರೆ ಬೇರೆ ಕಲೆಗಳ ಪ್ರದರ್ಶನವನ್ನು ಏರ್ಪಡಿಸುವುದಷ್ಟೇ ಅಲ್ಲದೆ, ಮಕ್ಕಳು, ಗೃಹಿಣಿಯರು, ಕಲಾ ರಸಿಕರು ಎಲ್ಲರನ್ನೂ ಒಳಗೊಳ್ಳುವಂತೆ ಮಾಡಲಿರುವುದು.**

ಮೈಸೂರಿನಲ್ಲಿ ಕಲಾ ಪೋಷಕರ ಸ್ಥಾನವನ್ನು ದೊಡ್ಡದಾಗಿ ತುಂಬಿರುವ ಹಿರಿಯ ಉದ್ಯಮಿ ಜಗನ್ನಾಥ ಶೆಣೈ ಅವರ ಕನಸಿನ ಕೂಸೇ ಜಗನ್ನಾಥ ಕಲಾ ಮತ್ತು ಸಂಸ್ಕೃತಿ ಕೇಂದ್ರ–ಜೆಸಿಎಸಿ. ಇದನ್ನು ಸಾಕಾರಗೊಳಿಸಿದವರು ರವಿಕುಮಾರ್ ಮತ್ತು ಅಮೃತಾ ದಂಪತಿ. ವಿಜಯನಗರ ಮೊದಲನೆಯ ಹಂತದಲ್ಲಿ ತಲೆಯೆತ್ತಿರುವ ಈ ಬೃಹತ್ ಕಲಾ ಸಮುಚ್ಚಯವು ಕಲೆಯ ಎಲ್ಲ ಪ್ರಕಾರಗಳ ಪ್ರದರ್ಶನಕ್ಕೆ ಕಟಿಬದ್ಧವಾಗಿದೆ.

ಉತ್ತರಾಯಣದ ಸಂದರ್ಭದಲ್ಲಿ ಸೂರ್ಯನು ತನ್ನ ಪಥ ಬದಲಿಸುತ್ತಾನೆ ಎಂಬುದು ಎಲ್ಲರಿಗೂ ತಿಳಿದ ಸಂಗತಿಯೇ ಆಗಿದೆ. ಅದರ ಸಂಕೇತ ಎಂಬಂತೆ ಜೆಸಿಎಸಿಯು ಜನವರಿ 23–27ರವರೆಗೆ ಉತ್ತರಾಯಣ ಎಂಬ ಹೆಸರಿನಲ್ಲಿಯೇ ಒಂದು ಮಹಾ ಸಾಂಸ್ಕೃತಿಕ ಹಬ್ಬವನ್ನು–ಸಂಭ್ರಮವನ್ನು ಏರ್ಪಡಿಸಿದೆ.

ಇದರ ವಿಶೇಷತೆ ಎಂದರೆ, ಕೇವಲ ಬೇರೆ ಬೇರೆ ಕಲೆಗಳ ಪ್ರದರ್ಶನವನ್ನು ಏರ್ಪಡಿಸುವುದಷ್ಟೇ ಅಲ್ಲದೆ, ಮಕ್ಕಳು, ಗೃಹಿಣಿಯರು, ಕಲಾ ರಸಿಕರು ಎಲ್ಲರನ್ನೂ ಒಳಗೊಳ್ಳುವಂತೆ ಮಾಡಲಿರುವುದು. ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಡುವವರು ನಾಡಿ ಹೆಸರಾಂತ ಕಲಾವಿದರಷ್ಟೇ ಅಲ್ಲದೆ, ಉದಯೋನ್ಮುಖ ಪ್ರತಿಭೆಗಳೂ ಇದ್ದಾರೆ. ದೇಶದ ಬೇರೆ ಬೇರೆ ಭಾಗಗಳಿಂದ ನಾಟಕ ತಂಡಗಳು ಬಂದು ನಿಮ್ಮನ್ನು ರಂಜಿಸಲು ಸಿದ್ಧವಾಗಿವೆ. ಪೇಟೆ ಬೀದಿ ಎಂಬ ಹೆಸರಿನ ದೃಶ್ಯ ವೊಂದು ಪ್ರತಿಭೆ ಎನ್ನುವುದು ತುಂಬಿ ತುಳುಕು ತ್ತಿದ್ದ ಗತಕಾಲದ ಮೈಸೂರಿಗೆ ನಿಮ್ಮನ್ನು ಕರೆದೊಯ್ಯಲಿದೆ. ಕಾರ್ಯಾಗಾರಗಳು, ಕಲಾವಿದರೊಡನೆ ಸಂವಾದಕ್ಕೂ ಇಲ್ಲಿ ಆಸ್ಪದ ಇದೆ. ಮಕ್ಕಳಿಗಾಗಿಯೇ ವಿಶೇಷವಾಗಿ ರೂಪಿತವಾದ ರಂಗ ಭೂಮಿಯ ಕಾರ್ಯಾಗಾರ ಇದೆ. ಅಷ್ಟೇ ಏಕೆ, ನಿಮಗೆ ಹಾಡುವ, ನರ್ತಿಸುವ, ಮಾತ ನಾಡುವ ಇಚ್ಛೆ ಇದ್ದರೂ ಅದು ಅಭಿವ್ಯಕಿಗೊಳಿಸಲು ಅವಕಾಶ ಸಿಕ್ಕಿಲ್ಲವೇ? ಚಿಂತಿಸದಿರಿ. ಇಲ್ಲಿ ಅದಕ್ಕೂ ಅವಕಾಶವನ್ನು ಕಲ್ಪಿಸಲಾಗಿದೆ. ನಿಮ್ಮಲ್ಲಿ ಸುಪ್ತವಾಗಿರುವ ಪ್ರತಿಭೆಯನ್ನು ನೀವು ಇಲ್ಲಿ ಅನಾವರಣಗೊಳಿಸಬಹುದು. ಕಿರುಚಿತ್ರಗಳ ಹಬ್ಬವೂ ಉಂಟು. ಜೊತೆಗೆ ಚಿತ್ರ ನಿರ್ಮಾಣ ಹೇಗೆ? ಎಂಬುದನ್ನು ತಿಳಿಸಿಕೊಡುವ ಕಾರ್ಯಾಗಾರವೂ ಇದೆ.

ಯುವಕ ಯುವತಿಯರಿಗಾಗಿ ದ ರೆಡ್ ಕಾರ್ಪೆಟ್ ವೈಬ್ ಎನ್ನುವ ವಿಶೇಷ ಕಾರ್ಯಾಗಾರವೂ ಅವರನ್ನು ಆಕರ್ಷಿಸಲಿದೆ. ನೃತ್ಯ ರಸಗ್ರಹಣದ ಬಗ್ಗೆ ಪ್ರತಿಷ್ಠಿತ ನೃತ್ಯ ಕಲಾವಿದರು ಮಾತನಾಡಲಿದ್ದಾರೆ. ಧೀಮಂತ ವಿದ್ವಾಂಸರಾದ ಶ್ರೀ ಲಕ್ಷ್ಮೀಶ ತೊಳ್ಪಾಡಿಯವರು ಎರಡು ದಿನ ವಿಶೇಷ ಉಪನ್ಯಾಸ ನೀಡಲಿದ್ದಾರೆ.

ಶ್ರೀ ದುಂಡಿರಾಜ್ ಮತ್ತು ತಂಡದವರು ಹಾಸ್ಯ ಕವಿಗೋಷ್ಠಿಯ ಮೂಲಕ ಬಂದವರನ್ನು ನಗೆಗಡಲಿನಲ್ಲಿ ಮೀಯಿಸಲಿದ್ದಾರೆ. ರಂಗಾಂತರಂಗ ಎಂಬ ರಂಗ ಸಂಗೀತವು ನಿಮ್ಮನ್ನು ರಂಜಿಸಲಿದೆ. ಮಡ್ ಮ್ಯೂಸಿಕ್ ಕಲೆಕ್ಷನ್ ಎಂಬುದು ಹಲವು ಅಪರೂಪದ ವಾದ್ಯಗಳ ಸಮ್ಮಿಲನದಿಂದ ಉಂಟಾಗಲಿರುವ ಸ್ವರಾನುಭೂತಿ. ನೃತ್ಯ ನಾಟಕ, ಕಥಕ್, ಭರತನಾಟ್ಯ, ಉತ್ತರಾದಿ, ಕರ್ನಾಟಕ ಶಾಸ್ತ್ರೀಯ ಗಾಯನ, ವಾದನ ಅಷ್ಟೇ ಅಲ್ಲದೆ ಈ ಕಾರ್ಯಾಗಾರಗಳಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳಿಂದ ಪ್ರದರ್ಶನವೂ ಇರುತ್ತದೆ.

ಕೊನೆಯ ದಿನ ಮೈಸೂರಿನ ಸಂಗೀತಗಾರರಿಂದ ತ್ಯಾಗರಾಜರ ಆರಾಧನೆ ಪ್ರಯುಕ್ತ ಗೋಷ್ಠಿ ಗಾಯನವೂ ಉಂಟು. ತ್ಯಾಗರಾಜರ ಕೃತಿಗಳನ್ನು ಆಧರಿಸಿದ ಭರತನಾಟ್ಯ ಕಾರ್ಯಕ್ರಮವೂ ನಿಮ್ಮನ್ನು ರಂಜಿಸಲಿದೆ. ಒಟ್ಟಾರೆ ಈ ಐದೂ ದಿನಗಳು ನಿಮ್ಮನ್ನು ಬೆಳಗಿನಿಂದ ರಾತ್ರಿವರೆಗೆ ಹಿಡಿದಿಡಲು ತಕ್ಕುದಾದ ಎಲ್ಲ ಕಲಾ ಸರಂಜಾಮುಗಳೂ ಸಿದ್ಧವಾಗಿವೆ, ನಿಮ್ಮ ಆಗಮನದ ನಿರೀಕ್ಷೆಯಲ್ಲಿವೆ.

23ರ ಸಂಜೆ ನಾಕು ಗಂಟೆಗೆ ವಿಧ್ಯುಕ್ತವಾಗಿ ಆರಂಭವಾಗಲಿರುವ ಈ ಉತ್ತರಾಯಣ ಸಂಭ್ರಮದಲ್ಲಿ ನೀವೂ ಪಾಲ್ಗೊಳ್ಳಿ, ನಿಮ್ಮ ಸ್ನೇಹಿತರನ್ನೂ ಕರೆತನ್ನಿ. ನಮ್ಮ ನಾಡಿನ ವಿವಿಧ ಕಲಾ ಪ್ರಕಾರಗಳ ಪರಿಚಯವನ್ನು ನಿಮ್ಮ ಮಕ್ಕಳಿಗೂ ಮಾಡಿಕೊಡಿ. ನಿಮ್ಮ ನಾಲಿಗೆಗೆ ರುಚಿಸುವಂತಹ ಊಟ–ತಿಂಡಿಗಳು ಅಲ್ಲೇ ಲಭ್ಯ. ಹೀಗಾಗಿ, ಇಡೀ ದಿನ ನೀವು ಕಲಾಸ್ವಾದನೆಯನ್ನು ಮಾಡುತ್ತಾ ನಿರಾತಂಕವಾಗಿ ಕಳೆಯಬಹುದು. ಬರುತ್ತೀರಲ್ಲ? ನಮಸ್ಕಾರ.

ಬಹುಮತದಿಂದ ಅಧಿಕಾರ ಹಿಡಿಯಲಾಗದ ಬಿಜೆಪಿಯಿಂದ ಸಿಎಂ ಬದಲಾವಣೆ ವಿಚಾರ ಪ್ರಸ್ತಾಪ

ಮೈಸೂರು, ಜ.17(ಜಿಎ)–ಬಿಜೆಪಿ ಬಹುಮತದಿಂದ ಅಧಿಕಾರಕ್ಕೆ ಬಂದಿಲ್ಲ. ಅವರಿಗೆ ಅವಕಾಶ ಸಿಗುತ್ತದೋ ಎಂಬ ಭಾವನೆಯಲ್ಲಿ ಸಿಎಂ ಬದಲಾವಣೆ ಹೇಳಿಕೆ ನೀಡುತ್ತಿದ್ದಾರೆ ಅಷ್ಟೇ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ತಿಳಿಸಿದರು.

ಮೈಸೂರಿನಲ್ಲಿ ಮಾಧ್ಯಮಗಳೊಂದಿಗೆ ಡಿಸಿಎಂ ಡಿ.ಕೆ.ಶಿವಕುಮಾರ್ ದೆಹಲಿಗೆ ಕುರ್ಚಿಗಾಗಿ ತೆರಳಿದ್ದಾರೆ ಎಂಬ ವಿಚಾರವಾಗಿ ಪ್ರತಿಕ್ರಿಯಿಸಿ, ಡಿಸಿಎಂ ಡಿ.ಕೆ.ಶಿವಕುಮಾರ್ ಕೆಪಿಸಿಸಿ ಅಧ್ಯಕ್ಷರು ಅವರನ್ನು ಅಸ್ಸಾಂ ಉಸ್ತುವಾರಿ ನೀಡಲಾಗಿದೆ. ಅಲ್ಲಿ ರಾಜಕೀಯ ಚರ್ಚೆಯಾಗಿಲ್ಲ. ನಾನೂ ಫೋಟೋ ನೋಡಿದ್ದೇನೆ. ಸಿಎಂ ಕುರ್ಚಿ ಬಗ್ಗೆ ಮಾಹಿತಿ ಇಲ್ಲ. 2028ರವರೆಗೆ ಸಿದ್ದರಾಮಯ್ಯ ಅವರು ಮುಂದುವರೆಯುವ ಭರವಸೆ ಇದೆ. ಬಿಜೆಪಿ ಅವರು ಬಹುಮತದಿಂದ ಅಧಿಕಾರಕ್ಕೆ ಬಂದಿಲ್ಲ. ಅವರಿಗೆ ಅವಕಾಶ ಸಿಗುತ್ತದೋ ಎಂಬ ಭಾವನೆಯಲ್ಲಿ ಹೇಳಿಕೆ ನೀಡುತ್ತಿದ್ದಾರೆ ಅಷ್ಟೇ ಎಂದು ತಿಳಿಸಿದರು.



ಡಾ.ಮಹದೇವಪ್ಪ

ಸ್ಥಳೀಯ ಚುನಾವಣೆಯಲ್ಲಿ ಜೆಡಿಎಸ್–ಬಿಜೆಪಿ 2018ರಲ್ಲಿ ಹೇಗೆ ಒಟ್ಟಿಗೆ ಸೇರಿ ಅಧಿಕಾರ ಹಿಡಿದರು. ಹಾಗೇ ಈಗಲೂ ಮಾಡುತ್ತಾರೆ. ಹೊಂದಾಣಿಕೆಯಿಂದ ಕಾಂಗ್ರೆಸ್‌ಗೆ ಯಾವುದೇ ಹೊಡೆತ ಆಗುವುದಿಲ್ಲ ಎಂದರು.

ಬಳ್ಳಾರಿ ಪಾದಯಾತ್ರೆ ಕುರಿತು ಪ್ರತಿಕ್ರಿಯಿಸಿ, ಇದು ಇಬ್ಬರು ಪ್ರತಿನಿಧಿಗಳ ಮಧ್ಯೆ ನಡೆದ ವಾಗ್ವಾದ. ಪ್ರತಿನಿಧಿಯಾದವರು ಯಾವುದೇ ಪಕ್ಷದವರಾದರೂ ಜವಾಬ್ದಾರಿಯಿಂದ ನಡೆದುಕೊಳ್ಳಬೇಕು., ಕಾನೂನು ಗೌರವಿಸುವುದು ಎಲ್ಲರ ಜವಾಬ್ದಾರಿ. ಇದರಿಂದ ಸಾರ್ವಜನಿಕ ಆಸ್ತಿ ನಾಶವಾಗುತ್ತದೆ. ಜನರಿಗೆ ತೊಂದರೆಯಾಗಿ ಅಮಾಯಕರು ಪ್ರಾಣ ಕಳೆದುಕೊಳ್ಳುತ್ತಾರೆ ಎಂದರು.

ಈ ಹಿಂದೆ ಬಳ್ಳಾರಿ ಹೇಗೆ ರಿಪಬ್ಲಿಕನ್ ಆಗಿತ್ತು. ಅಲ್ಲಿನ ಸಂಪತ್ತು ಯಾರು ಕೊಳ್ಳೆ ಹೊಡೆದರೂ ಅವರೇ ಇಂದು ಬಂದು ಪಾದಯಾತ್ರೆ ಮಾಡುತ್ತೇವೆ ಎಂದು ಹೇಳುತ್ತಿರುವುದು ಹಾಸ್ಯಾಸ್ಪದ. ಮೊದಲು ಅವರು ಕುಳಿತು ಆತ್ಮಾವಲೋಕನ ಮಾಡಿಕೊಳ್ಳಬೇಕಿದೆ ಎಂದು ತಿಳಿಸಿದರು.

ಭರತ್ ರೆಡ್ಡಿ ಬಂಧನ ವಿಚಾರ ಪ್ರತಿಕ್ರಿಯಿಸಿ, ಕಾನೂನಿನ ಮೂಲಕ ಎಲ್ಲಾ ಮಾಹಿತಿ ಸಂಗ್ರಹಿಸಿ, ವಿಚಾರ ಮಾಡಿ ನಂತರ ತಪ್ಪು ಮಾಡಿದವರಿಗೆ ಶಿಕ್ಷೆ ಆಗಲಿದೆ. ತಪ್ಪು ಯಾರೇ ಮಾಡಿದರೂ ಯಾವುದೇ ಪಕ್ಷವಾದರೂ ಸಹಿಸಲು ಸಾಧ್ಯವಿಲ್ಲ ಎಂದು ಸಚಿವ ಹೆಚ್.ಸಿ.ಮಹದೇವಪ್ಪ ಹೇಳಿದರು.

ವರುಣಾದಲ್ಲಿ ಮಹಿಳಾ ಅಧಿಕಾರಿ ಮೇಲೆ ಹಲ್ಲೆ ಕುರಿತು ಪ್ರತಿಕ್ರಿಯಿಸಿ, ಜನರು ಸಂಯಮದಿಂದ ಇರಬೇಕು. ಅಧಿಕಾರಿಗಳು ಉತ್ತಮವಾಗಿ ವರ್ತಿಸಬೇಕು. ಸೌಜನ್ಯದಿಂದ ವಿವೇಚನೆಯಿಂದ ನಡೆದುಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಪೊಲೀಸರ ಭದ್ರತೆಯಲ್ಲಿ ಚಾಮುಂಡಿಬೆಟ್ಟದಲ್ಲಿ ನಾಳೆಯಿಂದ ಪ್ರಸಾದ ಕಾಮಗಾರಿ ಆರಂಭ

ಮೈಸೂರು, ಜ.17(ಬಿಎಲ್‌ಯು)–ಚಾಮುಂಡಿಬೆಟ್ಟದಲ್ಲಿ ಪ್ರಸಾದ ಯೋಜನೆ ಕಾಮಗಾರಿಯನ್ನು ಪೊಲೀಸ್ ಭದ್ರತೆಯಲ್ಲಿ ಸೋಮವಾರ ಪೂರ್ಣ ಪ್ರಮಾಣದಲ್ಲಿ ಆರಂಭಿಸಲಾಗುವುದು ಎಂದು ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತರೆಡ್ಡಿ ತಿಳಿಸಿದ್ದಾರೆ.

ಕೆಲವರ ವಿರೋಧದ ಹಿನ್ನೆಲೆಯಲ್ಲಿ ನಿನ್ನೆ ಕಾಮಗಾರಿ ಸ್ಥಗಿತಗೊಳಿಸಿದ ಬಗ್ಗೆ 'ಮೈಸೂರು ಮಿತ್ರ'ನಿಗೆ ಪತಿಕ್ರಿಯೆ ನೀಡಿದ ಅವರು, ಇಂದೇ ಕಾಮಗಾರಿ ಆರಂಭಿಸಬೇಕಿತ್ತು. ಆದರೆ ಪೊಲೀಸರು ಕೆಲಸದ ಒತ್ತಡದಲ್ಲಿದ್ದ ಕಾರಣ ಸಾಧ್ಯವಾಗಲಿಲ್ಲ.

ಆದರೆ ಸೋಮವಾರ ಪೊಲೀಸರ ಭದ್ರತೆಯಲ್ಲಿ ಕಾಮಗಾರಿಯನ್ನು ಪೂರ್ಣ ಪ್ರಮಾಣದಲ್ಲಿ ಆರಂಭಿಸಲಾಗುವುದು. ಸದ್ಯ ಕೆಲವರು ಕಾಮಗಾರಿಗೆ ವಿರೋಧ ವ್ಯಕ್ತಪಡಿಸುತ್ತಿರುವ ಹಿನ್ನೆಲೆಯಲ್ಲಿ ಒಂದು ವಾರದವರೆಗೆ ಪೊಲೀಸರ ಭದ್ರತೆಯಲ್ಲಿ ಕೆಲಸ ಮಾಡಲಾಗುವುದು. ಈಗಾಗಲೇ ಗುತ್ತಿಗೆದಾರರು ಕಾಮಗಾರಿಗೆ ಅವಶ್ಯವಿರುವ ಕಟ್ಟಡ ನಿರ್ಮಾಣ ವಸ್ತುಗಳನ್ನು ಚಾಮುಂಡಿಬೆಟ್ಟದಲ್ಲಿ ದಾಸ್ತಾನಿಟ್ಟಿದ್ದಾರೆ. ಸೋಮವಾರದಿಂದ ಅದನ್ನು ಬಳಸಿಕೊಂಡು ಕೆಲಸ ಆರಂಭಿಸಲಾಗುವುದು ಎಂದು ಲಕ್ಷ್ಮಿಕಾಂತರೆಡ್ಡಿ ಹೇಳಿದರು.

ಜಿಲ್ಲಾಧಿಕಾರಿ ಲಕ್ಷ್ಮಿಕಾಂತರೆಡ್ಡಿ ಮಾಹಿತಿ



ಚಾಮುಂಡಿಬೆಟ್ಟದಲ್ಲಿ ಪ್ರಸಾದ ಯೋಜನೆಯ ಕಾಮಗಾರಿ ಸ್ಥಗಿತಗೊಳಿಸಲಾಗಿದೆ.

ಕಾಮಗಾರಿ ಆರಂಭಿಸಿದರೆ ಪ್ರತಿಭಟನೆ ಖಚಿತ

“ ಪ್ರಸಾದ ಯೋಜನೆ ಅನುಷ್ಠಾನ ಸಂಬಂಧ ಭೂಸ್ವಾಧೀನ ಆದೇಶ, ಪ್ರಾಚ್ಯ ವಸ್ತು ಇಲಾಖೆ ಅನುಮತಿ ಸೇರಿದಂತೆ ಇತರೆ ಕಾನೂನಾತ್ಮಕ ನಿಯಮ ಅನುಸರಿಸಿರುವ ಬಗ್ಗೆ ದಾಖಲಾತಿ ನೀಡುತ್ತೇವೆ ಎಂದು ಹೇಳಿದ್ದಾರೆ. ಇದಕ್ಕಾಗಿ ನಾವು ಎರಡು ದಿನ ಕಾಯುತ್ತೇವೆ. ಒಂದು ವೇಳೆ ನಾವು ಕೇಳಿರುವ ಯಾವುದೇ ದಾಖಲಾತಿ ನೀಡದೆ ಕಾಮಗಾರಿ ಆರಂಭಿಸಲು ಮುಂದಾದರೆ ನಾವು ಬಿಡುವುದಿಲ್ಲ. ಕಾಮಗಾರಿ ಸ್ಥಗಿತಗೊಳಿಸಲು ಪ್ರತಿಭಟನೆ ನಡೆಸುತ್ತೇವೆ.

– ಲೋಹಿತ್ ಅರಸ್, ಹಿಂದೂಪರ ಸಾಮಾಜಿಕ ಹೋರಾಟಗಾರ

ಪ್ರಸಾದ ಯೋಜನೆ ರದ್ದಾದರೆ ಮೈಸೂರು ಜನರಿಗೇ ನಷ್ಟ

“ ಚಾಮುಂಡಿಬೆಟ್ಟ ಅಥವಾ ಚಾಮುಂಡೇಶ್ವರಿ ದೇವಸ್ಥಾನದ ಪಾರಂಪರಿಕತೆಗೆ ಧಕ್ಕೆ ಆಗದಂತೆ ಅಭಿವೃದ್ಧಿ ಕಾರ್ಯ ಅನುಷ್ಠಾನ ಮಾಡಲಾಗುವುದು. ಇದನ್ನು ತಿಳಿಯದೆ ಕೆಲವರು ಅಡ್ಡಿಪಡಿಸಿದ ಪಕ್ಷದಲ್ಲಿ ಪ್ರಸಾದ ಯೋಜನೆ ರದ್ದಾದರೆ ಮತ್ತೆ ಕೇಂದ್ರ ಸರ್ಕಾರದಿಂದ ಇಂತಹ ಯೋಜನೆ ಪಡೆಯಲು ಸಾಧ್ಯವಿಲ್ಲ. ನಮಗೆ ಇದಲ್ಲ, ಇನ್ನೊಂದು ಗುತ್ತಿಗೆ ಕೆಲಸ ದೊರೆಯುತ್ತದೆ. ಇಲ್ಲಲ್ಲ ಇನ್ನೊಂದು ಕಡೆ ಕೆಲಸ ಮಾಡುತ್ತೇವೆ. ಆದರೆ ಕೆಲವರು ವಿರೋಧ ಮಾಡಿದರೆ ಯೋಜನೆ ರದ್ದಾದ ಪಕ್ಷದಲ್ಲಿ ಮೈಸೂರು ಜನರಿಗೇ ನಷ್ಟ.

–ಸುಜೇಂದ್ರಕುಮಾರ್, ಎಸ್‌ಕೆಎಸ್ ಕಾರ್ಕಳ ಇನ್ಫ್ರಾ ಪ್ರೈವೆಟ್ ಲಿಮಿಟೆಡ್

ಮದ್ಯಕ್ಕೆ ಲೈಸನ್ಸ್ ನೀಡಲು 25 ಲಕ್ಷ ಲಂಚ : ಅಬಕಾರಿ ಡಿಸಿ ಲೋಕಾಯುಕ್ತ ಬಲೆಗೆ!

ಬೆಂಗಳೂರು, ಜ.17– ಬೆಂಗಳೂರಿನ ಬ್ಯಾಟರಾಯನಪುರದಲ್ಲಿ ಲಂಚದ ಹಣ ಸ್ವೀಕರಿಸುತ್ತಿದ್ದಾಗಲೇ ಅಬಕಾರಿ ಡಿಸಿಯನ್ನು ಲೋಕಾಯುಕ್ತ ಅಧಿಕಾರಿಗಳು ರೆಡ್ ಹ್ಯಾಂಡ್ ಆಗಿ ಹಿಡಿದಿದ್ದಾರೆ. ಬೆಂಗಳೂರಿನ ಬ್ಯಾಟರಾಯನಪುರ ಕಚೇರಿಯಲ್ಲಿಯೇ 25 ಲಕ್ಷ ರೂ. ಲಂಚ ಪಡೆಯುತ್ತಿದ್ದ ಅಬಕಾರಿ ಡಿಸಿ ಜಗದೀಶ್ ನಾಯಕ್ ಅವರನ್ನು ಲೋಕಾಯುಕ್ತ ಅಧಿಕಾರಿಗಳು ಬಂಧಿಸಿದ್ದಾರೆ. ಮೈಕ್ರೋ ಬ್ರಿವೇರಿ, ಸಿಎಲ್ 7 ಲೈಸನ್ಸ್‌ಗೆ 75 ಲಕ್ಷ ರೂಪಾಯಿ ಲಂಚದ ಬೇಡಿಕೆ ಇಟ್ಟಿದ್ದ ಜಗದೀಶ್, ಮೊದಲ ಕಂತಿನ ಹಣವಾಗಿ 25 ಲಕ್ಷ ಹಣ ಸ್ವೀಕರಿಸುತ್ತಿದ್ದಾಗ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿದ್ದರು. ಇದೇ ವೇಳೆ ಅಬಕಾರಿ ಅಧೀಕ್ಷಕ ತಮ್ಮಣ್ಣ, ಮಧ್ಯವರ್ತಿ ಲಕ್ಕಪ್ಪ ಎಂಬುವವರನ್ನೂ ಬಂಧಿಸಲಾಗಿದೆ.




ಜಗದೀಶ್ ನಾಯಕ್

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ಜನವರಿ 18 ಭಾನುವಾರ 2026
46
ಸಂಪುಟ: 46 | ಸಂಚಿಕೆ: 270 | ಪುಟಗಳು: 12
₹4
ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com



ಮೂಲ ದಾಖಲೆ ತಿದ್ದಿ ಸರ್ಕಾರಿ ಭೂಮಿ ಅಕ್ರಮ ಮಂಜೂರು; ಇಬ್ಬರು ಶಿರಸ್ತೇದಾರರ ಅಮಾನತು

ಮಂಡ್ಯ: ಮೂಲ ದಾಖಲೆಗಳನ್ನು ತಿದ್ದಿ ಕೋಟ್ಯಾಂತರ ಮೌಲ್ಯದ ಸರ್ಕಾರಿ ಭೂಮಿಯನ್ನು ಅಕ್ರಮವಾಗಿ ಮಂಜೂರು ಮಾಡಿರುವ ಪ್ರಕರಣದಲ್ಲಿ ಇಬ್ಬರು ಶಿರಸ್ತೇದಾರರನ್ನು ಮೈಸೂರು ಪ್ರಾದೇಶಿಕ ಆಯುಕ್ತ ನಿತೇಶ್ ಪಾಟೀಲ್ ಅಮಾನತು ಮಾಡಿ, ಶನಿವಾರ ಆದೇಶಿಸಿದ್ದಾರೆ.

ನಾಗಮಂಗಲ ತಾಲೂಕು ಕಚೇರಿಯ ಭೂಮಂಜೂರಾತಿ ಶಾಖೆಯ ಪ್ರಭಾರ ಶಿರಸ್ತೇದಾರ್ ಹಾಗೂ ದೇವಲಾಪುರ ನಾಡಕಚೇರಿ ಉಪತಹಶೀಲ್ದಾರ್ ರವಿಶಂಕರ್ ಹಾಗೂ ಆಡಳಿತ ಶಾಖೆ ಶಿರಸ್ತೇದಾರ್ ಹೆಚ್.ಎಸ್.ಉಮೇಶ್ ಅವರನ್ನು ಅಮಾತುಗೊಳಿಸಲಾಗಿದೆ. ಕರ್ತವ್ಯದ ಹಕ್ಕಿನ ಸ್ಥಾನವನ್ನು ನಮೂದಿಸಿ ರವಿಶಂಕರ್ ಅವರನ್ನು ಮಳವಳ್ಳಿ ತಾಲೂಕಿನ ಆರ್‌ಆರ್‌ಟಿ ಶಾಖೆಗೆ ಹಾಗೂ ಉಮೇಶ್ ಅವರನ್ನು ಮದ್ದೂರಿನ ಚುನಾವಣಾ ಶಾಖೆಗೆ ವರ್ಗಾಯಿಸಲಾಗಿದೆ. ಇದರೊಂದಿಗೆ ಈ ಪ್ರಕರಣದ ಎಲ್ಲಾ ಆರು ಆರೋಪಿಗಳೂ ಅಮಾನತುಗೊಂಡಂತಾಗಿದೆ.

ಪ್ರಕರಣದ ವಿವರ: ನಾಗಮಂಗಲ ತಾಲೂಕು ಕಚೇರಿಯ ಭೂಮಂಜೂರಾತಿ ಮತ್ತು ಅಭಿಲೇಖಾಲಯ ಶಾಖೆಗಳಲ್ಲಿ ಹೆಚ್.ಎನ್.ಕಾವಲು ಹಾಗೂ ಇತರೆ ಗ್ರಾಮಗಳಲ್ಲಿನ ಸರ್ಕಾರಿ ಭೂಮಿಯ ದರಖಾಸ್ತು ಮಂಜೂರಾತಿ ದಾಖಲಾತಿಗಳನ್ನು ತಿದ್ದಿ, ತಮಗೆ ಬೇಕಾದಂತೆ ನಕಲಿ ದಾಖಲೆ ಸೃಷ್ಟಿಸಿ ಅಕ್ರಮವಾಗಿ ಸರ್ಕಾರಿ ಭೂಮಿ ಕಂಡ ಕಂಡವರಿಗೆ ಮಂಜೂರು ಮಾಡುವ ಮೂಲಕ ಅಧಿಕಾರ ದುರುಪಯೋಗಪಡಿಸಿಕೊಳ್ಳಲಾಗಿದೆ ಎಂಬ ಆರೋಪಗಳಿದ್ದ ಹಿನ್ನೆಲೆಯಲ್ಲಿ ಉಪಲೋಕಾಯುಕ್ತರು ಸ್ವಯಂ ದೂರು ದಾಖಲಿಸಿ, ಶೋಧನಾ ವಾರೆಂಟ್ ಹೊರಡಿಸಿದ್ದರು. ಬಳಿಕ ಜ.14ರಂದು ಪ್ರಕರಣದಲ್ಲಿ ಭಾಗಿಯಾದ ನೌಕರರನ್ನು ದಸ್ತಗಿರಿ ಮಾಡಲಾಗಿತ್ತು. ▶ 6ನೇ ಪುಟಕ್ಕೆ

ದ್ವಿತೀಯ ಪಿಯುಸಿ: ನಾಳೆಯಿಂದ 2ನೇ ಪೂರ್ವಸಿದ್ಧತಾ ಪರೀಕ್ಷೆ

ಬೆಂಗಳೂರು: ದ್ವಿತೀಯ ಪಿಯು ವಿದ್ಯಾರ್ಥಿಗಳಿಗೆ ಎರಡನೇ ಪೂರ್ವಸಿದ್ಧತಾ ಪರೀಕ್ಷೆ ಜ.19ರಿಂದ ಆರಂಭವಾಗಲಿದ್ದು, ಫೆ.2ರವರೆಗೆ ನಡೆಯಲಿವೆ. ಜ.2ರಿಂದ 17ರವರೆಗೆ ಮೊದಲ ಪೂರ್ವಸಿದ್ಧತಾ ಪರೀಕ್ಷೆ ನಡೆದಿತ್ತು. ಎಸ್‌ಎಸ್‌ಎಲ್‌ಸಿ



ಪೂರ್ವ ಸಿದ್ಧತಾ ಪರೀಕ್ಷೆಯ ವೇಳೆ ಕೆಲ ವಿಷಯಗಳ ಪ್ರಶ್ನೆಪತ್ರಿಕೆಗಳು ಸೋರಿಕೆಯಾಗಿ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ್ದವು. ಹಾಗಾಗಿ, ಪಿಯು ಎರಡನೇ ಪರೀಕ್ಷೆಯನ್ನು ಕಟ್ಟುನಿಟ್ಟಾಗಿ ನಡೆಸಲು ಪದವಿಪೂರ್ವ ಶಿಕ್ಷಣ ನಿರ್ದೇಶನಾಲಯ ಸೂಚನೆ ನೀಡಿದೆ.

ಪ್ರಶ್ನೆಪತ್ರಿಕೆಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಅಪ್‌ಲೋಡ್ ಮಾಡುವ ವಿದ್ಯಾರ್ಥಿಗಳು, ಸಾರ್ವಜನಿಕರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು. ಪರೀಕ್ಷಾ ಕೊಠಡಿಯ ಒಳಗೆ ಮೊಬೈಲ್ ಫೋನ್ ಬಳಸುವಂತಿಲ್ಲ. ಆಯಾ ವಿಷಯದ ಪ್ರಶ್ನೆಪತ್ರಿಕೆಗಳನ್ನು ಒಂದು ದಿನ ಮೊದಲಷ್ಟೇ ಮುದ್ರಿಸಿಕೊಳ್ಳಬೇಕು. ಲೋಪ ಎಸಗುವ ಕಾಲೇಜುಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು. ಆಯಾ ಜಿಲ್ಲೆಯ ಪಿಯು ಉಪನಿರ್ದೇಶಕರನ್ನೇ ಹೊಣೆ ಮಾಡಲಾಗುವುದು ಎಂದು ಎಸ್.ಭರತ್ ಹೇಳಿದ್ದಾರೆ.

ಮೈಸೂರಲ್ಲಿ ಡ್ರಗ್ಸ್ ಫ್ಯಾಕ್ಟರಿ ಪತ್ತೆಗೆ ಮಹಾರಾಷ್ಟ್ರ ಪೊಲೀಸರು ಬರಬೇಕಿತ್ತಾ...!

- ಪೊಲೀಸರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ತರಾಟೆ
- ಪೊಲೀಸ್ ಅಧಿಕಾರಿಗಳ ವಾರ್ಷಿಕ ಸಭೆ
- ಡ್ರಗ್ಸ್ ವ್ಯಸನಿಗಳ ಕೇಳಿದರೆ ಎಲ್ಲಾ ಮಾಹಿತಿ ಬಾಯ್ಬಿಡ್ತಾರೆ
- ಪೊಲೀಸರೇ ಕ್ರಿಮಿನಲ್ ಪ್ರಕರಣಗಳಲ್ಲಿ ಬಾಗಿ ನಾಚಿಗೇಡಿನ ಸಂಗತಿ
- ಪೊಲೀಸರು ಜಾಗರೂಕರಾಗಿದ್ದರೆ ಅಪರಾಧ ತಡೆಯಬಹುದು

ಬೆಂಗಳೂರು: ಮಹಾರಾಷ್ಟ್ರ ಪೊಲೀಸರು ಬಂದು ಮೈಸೂರಿನಲ್ಲಿ ಡ್ರಗ್ಸ್ ಫ್ಯಾಕ್ಟರಿ ಪತ್ತೆ ಮಾಡಿದ್ದಾರೆ. ಇದು ಕರ್ನಾಟಕ ಪೊಲೀಸರಿಂದ ಏಕೆ ಸಾಧ್ಯವಾಗಲಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತರಾಟೆ ತೆಗೆದುಕೊಂಡಿದ್ದಾರೆ.

ಬೆಂಗಳೂರಿನ ಮಹಾ ನಿರ್ದೇಶಕರು ಹಾಗೂ ಆರಕ್ಷಕ ಮಹಾನಿರೀಕ್ಷಕರ ಕಚೇರಿಯಲ್ಲಿ ಆಯೋಜಿಸಿದ್ದ ಹಿರಿಯ ಪೊಲೀಸ್ ಅಧಿಕಾರಿಗಳ ವಾರ್ಷಿಕ ಸಭೆ ಉದ್ಘಾಟಿಸಿ ಮಾತನಾಡಿದ ಅವರು, ಮೈಸೂರಿನಲ್ಲಿ ನಡೆಯುತ್ತಿದ್ದ ಡ್ರಗ್ಸ್ ಫ್ಯಾಕ್ಟರಿಯನ್ನು ಮಹಾರಾಷ್ಟ್ರದ ಪೊಲೀಸರು ಪತ್ತೆ ಹಚ್ಚಿದ್ದನ್ನು ಪ್ರಸ್ತಾಪಿಸಿ, ಇನ್ನು ಮುಂದೆ ಈ ರೀತಿಯ ವೈಫಲ್ಯವನ್ನು ಸಹಿಸುವುದಿಲ್ಲ ಎಂದು ಎಚ್ಚರಿಸಿದರು.

ರಾಜ್ಯವನ್ನು ಡ್ರಗ್ಸ್ ಮುಕ್ತ ಮಾಡುವ ನಿಟ್ಟಿನಲ್ಲಿ ವ್ಯಸನಿಗಳನ್ನು ವಿಚಾರಣೆ ಮಾಡಿದರೆ ಮೂಲದ ಬಗ್ಗೆ ಮಾಹಿತಿ ಸಿಗುತ್ತದೆ. ಪೆಡ್ಲರ್ ವಿಚಾರಣೆ ಮಾಡಿದರೆ ಎಲ್ಲಿಂದ ಡ್ರಗ್ಸ್ ಬಂತು ಅಂತಾ ತಿಳಿಯುತ್ತದೆ. ಅಪರಾಧದಲ್ಲಿ ಭಾಗಿಯಾದ ವಿದೇಶಿಯರನ್ನು ಅವರ ದೇಶಕ್ಕೆ ವಾಪಸ್ ಕಳಿಸುವ ಕೆಲಸ ಮಾಡಬೇಕು. ಇನ್ಸ್‌ಪೆಕ್ಟರ್, ಸಬ್ ಇನ್ಸ್‌ಪೆಕ್ಟರ್‌ಗಳು ಸೇರಿದಂತೆ ಎಲ್ಲರ ಮೇಲೂ ಹಿರಿಯ ಅಧಿಕಾರಿಗಳು ನಿಗಾ ವಹಿಸಬೇಕು ಎಂದರು.

ನಾಚಿಗೇಡಿನ ಸಂಗತಿ: ಅಪರಾಧವನ್ನು ಸಂಪೂರ್ಣವಾಗಿ ನಿಲ್ಲಿಸಲಾಗದಿದ್ದರೂ ಅದರ ಪ್ರಮಾಣ ಕಡಿಮೆ ಮಾಡಲು ಸಾಧ್ಯವಿದೆ. ಆದರೆ ಕಳೆದ ಸಾಲಿನಲ್ಲಿ 88 ಕ್ರಿಮಿನಲ್ ಪ್ರಕರಣಗಳಲ್ಲಿ ಪೊಲೀಸರೇ ಭಾಗಿಯಾಗಿರುವುದು ನಾಚಿಗೇಡಿನ ಸಂಗತಿ. ನೀವೇ ಅಪರಾಧಿಗಳ ಜೊತೆ ಕೈಜೋಡಿಸಿದರೆ ಜನಸಾಮಾನ್ಯರಿಗೆ ರಕ್ಷಣೆ ನೀಡಲು ಹೇಗೆ ಸಾಧ್ಯ. ಅಪರಾಧಿಗಳ ಜೊತೆ ಶಾಮೀಲಾಗಿರುವುದು ಸಾಬೀತಾದ ಪ್ರಕರಣಗಳಲ್ಲಿ ಹಲವು ಅಧಿಕಾರಿಗಳ ತಲೆದಂಡವಾಗಿದೆ. ಇನ್ನು ಮುಂದೆ ಎಚ್ಚರಿಕೆಯಿಂದ ಕಾರ್ಯನಿರ್ವಹಿಸಿ ಎಂದು ಕಿವಿಮಾತು ಹೇಳಿದರು.



ಶನಿವಾರ ಆಯೋಜಿಸಿದ್ದ ಹಿರಿಯ ಪೊಲೀಸ್ ಅಧಿಕಾರಿಗಳ ವಾರ್ಷಿಕ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಗೃಹ ಸಚಿವ ಡಾ.ಜಿ.ಪರಮೇಶ್ವರ್ ಪಾಲ್ಗೊಂಡಿದ್ದರು.

ಹೊಸ ಕಾನೂನಿಗೆ ಸಿದ್ಧ

> “ಜೈಲುಗಳ ಅವ್ಯವಸ್ಥೆ ಪ್ರಕರಣಗಳು, ಮಾದಕ ವಸ್ತು ಜಾಲ ನಿಯಂತ್ರಣದಲ್ಲಿ ಯಾವುದೇ ಲೋಪವನ್ನು ಇನ್ನು ಮುಂದೆ ಸಹಿಸಲು ಸಾಧ್ಯವಿಲ್ಲ. ಮಾದಕ ವಸ್ತು ಪ್ರಕರಣಗಳಲ್ಲಿ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಜಾರುಗಿಸಲು ಮುಂದಿನ ಅಧಿವೇಶನದಲ್ಲಿ ಹೊಸ ಕಾನೂನು ಜಾರಿಗೊಳಿಸಲು ಸರ್ಕಾರ ಸಿದ್ಧವಿದೆ.
> –ಸಿದ್ದರಾಮಯ್ಯ, ಸಿಎಂ

ಅಜಾಗರೂಕತೆ ಕಾರಣ: ಪೊಲೀಸರು ಜಾಗರೂಕರಾಗಿದ್ದರೆ ಮಾತ್ರ ಅನೇಕ ಅಪರಾಧ ಪ್ರಕರಣಗಳನ್ನು ತಡೆಗಟ್ಟಲು ಸಾಧ್ಯವಿದೆ. ಎಟಿಎಂ ದರೋಡೆ ಪ್ರಕರಣಗಳು, ಬಳ್ಳಾರಿಯಲ್ಲಿ ನಡೆದ ಬ್ಯಾನರ್ ಗಲಾಟೆ ಪ್ರಕರಣಗಳನ್ನು ಪೊಲೀಸರು ಮುಂಜಾಗರೂಕತೆ ಮೂಲಕ ತಪ್ಪಿಸಬಹುದಾಗಿತ್ತು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಸರಿಯಾದ ಮುಂಜಾಗ್ರತಾ ಕ್ರಮ ಕೈಗೊಂಡಿದ್ದರೆ, ಅಮಾಯಕರು ಕಾಲ್ತುಳಿತಕ್ಕೆ ಬಲಿಯಾಗುತ್ತಿರಲಿಲ್ಲ ಎಂದು ವಿಷಾದ ವ್ಯಕ್ತಪಡಿಸಿದರು.

ಸೈಬರ್ ಅಪರಾಧ ತಡೆಯಿರಿ: ಸೈಬರ್ ಅಪರಾಧಗಳು ರಾಜ್ಯದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ನಡೆಯುತ್ತಿದ್ದು, ಇದನ್ನು ಪರಿಣಾಮಕಾರಿಯಾಗಿ ತಡೆಗಟ್ಟಲು ಆಧುನಿಕ ತಂತ್ರಜ್ಞಾನದ ಸಮರ್ಪಕ ಬಳಕೆ ಮಾಡಬೇಕಿದೆ. ಕಾನೂನು ಸುವ್ಯವಸ್ಥೆ ಮತ್ತು ರಾಜ್ಯದ ಅಭಿವೃದ್ಧಿ ಪರಸ್ಪರ ಪೂರಕವಾಗಿವೆ. ಕಾನೂನು ಸುವ್ಯವಸ್ಥೆ ಚೆನ್ನಾಗಿದ್ದರೆ ಮಾತ್ರ ಬಂಡವಾಳ ಹೂಡಿಕೆ ಹೆಚ್ಚಾಗಿ, ಅಭಿವೃದ್ಧಿ ಸಾಧಿಸಲು ಸಾಧ್ಯವಿದೆ ಎಂದರು.

ರಕ್ಷಣೆ–ನ್ಯಾಯದ ಬದ್ಧತೆ: ಸಮಾಜದಲ್ಲಿ ಶಾಂತಿ ನೆಮ್ಮದಿ ಕಾಪಾಡುವ ಗುರುತರವಾದ ಜವಾಬ್ದಾರಿ ರಾಜ್ಯದ ಪೊಲೀಸ್ ಇಲಾಖೆ ಮೇಲಿದೆ. ಪ್ರತಿಯೊಬ್ಬರಿಗೂ ರಕ್ಷಣೆ ಹಾಗೂ ನ್ಯಾಯ ಒದಗಿಸುವುದು ▶ 6ನೇ ಪುಟಕ್ಕೆ

ಸಿಎಂ ಕ್ಷೇತ್ರದಲ್ಲೇ ಮಹಿಳಾ ಅಧಿಕಾರಿಗೆ ಕೊಲೆ ಬೆದರಿಕೆ

- ನಿಮ್ಹಾನ್ಸ್ ಆಸ್ಪತ್ರೆಗೆ ಭೂಮಿ ಪರಿಶೀಲನೆ ವೇಳೆ ಧಮ್ಕಿ
- ಅವಾಚ್ಯ ಪದಗಳಿಂದ ನಿಂದನೆ; ಇಲ್ಲೇ ಕೊಂದು ಹಾಕುವುದಾಗಿ ಬೆದರಿಕೆ
- 15 ದಿನಗಳ ಹಿಂದೆ ನಡೆದ ಪ್ರಕರಣದ ವೀಡಿಯೊ ವೈರಲ್

ಮೈಸೂರು, ಜ.17–ಯೋಜನೆಯೊಂದಕ್ಕೆ ಗುರುತಿಸಿರುವ ಸರ್ಕಾರಿ ಭೂಮಿ ಪರಿಶೀಲನೆಗೆ ತೆರಳಿದ್ದ ಮಹಿಳಾ ಅಧಿಕಾರಿಯನ್ನು ಅವಾಚ್ಯ ಪದಗಳಿಂದ ನಿಂದಿಸಿ, ಕೊಲೆ ಬೆದರಿಕೆ ಹಾಕಿರುವ ಘಟನೆ ಮುಖ್ಯಮಂತ್ರಿಗಳ ಸ್ವಕ್ಷೇತ್ರದಲ್ಲೇ ನಡೆದಿದ್ದು, ತಡವಾಗಿ ಬೆಳಕಿಗೆ ಬಂದಿದೆ.



ಮಹಿಳಾ ಗ್ರಾಮ ಆಡಳಿತಾಧಿಕಾರಿ ಜಿ.ಭವ್ಯಾ ಅವರನ್ನು ನಿಂದಿಸುತ್ತಿರುವ ಜಿ.ಎಂ.ಪುಟ್ಟಸ್ವಾಮಿ.

ಅನ'ಧಿಕೃತ' ಬ್ಯಾನರ್ ತೆರವುಗೊಳಿಸಿದ್ದಕ್ಕೆ ಶಿಡ್ಲಘಟ್ಟ ಪುರಸಭೆ ಆಯುಕ್ತೆ ಅಮೃತಗೌಡ ಅವರಿಗೆ ಕಾಂಗ್ರೆಸ್ ಮುಖಂಡ ರಾಜೀವ್‌ಗೌಡ ಧಮ್ಕಿ ಹಾಕಿದ ಪ್ರಕರಣಕ್ಕೂ ಮುನ್ನವೇ ಮೈಸೂರಿನ ವರುಣ ಕ್ಷೇತ್ರದಲ್ಲಿ ಮಹಿಳಾ ಗ್ರಾಮ ಆಡಳಿತಾಧಿಕಾರಿಗೆ ಹೀನಾಮಾನ ಪದ ಬಳಕೆ ಮೂಲಕ ಬೆದರಿಕೆ ಹಾಕಿರುವ ವೀಡಿಯೊ ಈಗ ವೈರಲ್ ಆಗಿದೆ. ರಾಜ್ಯದಲ್ಲಿ ಮಹಿಳಾ ಅಧಿಕಾರಿಗಳಿಗೆ ಯಾವುದೇ ರಕ್ಷಣೆ ಇಲ್ಲ ಎಂದು ಸಾಮಾಜಿಕ ಜಾಲತಾಣದಲ್ಲಿ ಆಕ್ರೋಶ ವ್ಯಕ್ತವಾಗಿದೆ. ▶ 6ನೇ ಪುಟಕ್ಕೆ

ವಿಧಾನಮಂಡಲ ವಿಶೇಷ ಅಧಿವೇಶನ ಬಳಿಕ ಅಧಿಕಾರ ಹಸ್ತಾಂತರ ಗೊಂದಲಕ್ಕೆ ತೆರೆ

- ಡಿಸಿಎಂ ಡಿಕೆಶಿಗೆ ರಾಹುಲ್ ಗಾಂಧಿ ಭರವಸೆ
- ಸಂಪುಟ ಪುನರ್‌ರಚನೆಗೆ ಅವಕಾಶ ನೀಡಬೇಕೆಂಬ ಸಿಎಂ ದೂತ ಜಾರ್ಜ್ ಪ್ರಸ್ತಾಪಕ್ಕೂ ಡಿಕೆಶಿ ಸಿಡಿಮಿಡಿ

ಬೆಂಗಳೂರು, ಜ.17(ಕೆಎಂಶಿ)– ವಿಧಾನ ಮಂಡಲದ ಜಂಟಿ ಅಧಿವೇಶನ ಮುಗಿಯುತ್ತಿದ್ದಂತೆ ಅಧಿಕಾರ ಹಸ್ತಾಂತರ ಗೊಂದಲ ಬಗೆಹರಿಸುವುದಾಗಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಕಾಂಗ್ರೆಸ್ ಅಧಿನಾಯಕ ರಾಹುಲ್ ಗಾಂಧಿ ಭರವಸೆ ನೀಡಿದ್ದಾರೆ.



ಡಿ.ಕೆ.ಶಿವಕುಮಾರ್

ಅಸ್ಸಾಂ ವಿಧಾನಸಭಾ ಚುನಾವಣೆಗೆ ಸಂಬಂಧಿಸಿದಂತೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನಿವಾಸದಲ್ಲಿ ನಡೆದ ಸಭೆ ನಂತರ ಶಿವಕುಮಾರ್ ಅವರಿಗೆ ಈ ಭರವಸೆ ದೊರೆತಿದೆ. ಪಕ್ಷ ಅಸ್ಸಾಂ ಚುನಾವಣಾ ವೀಕ್ಷಕ ಹೊಣೆ ಹೊತ್ತಿದ್ದು, ಶುಕ್ರವಾರ ರಾತ್ರಿ ನಡೆದ ಸಭೆಯಲ್ಲಿ ಡಿ.ಕೆ.ಶಿವಕುಮಾರ್ ಪಾಲ್ಗೊಂಡಿದ್ದರು. ಸಭೆ ನಂತರ ಅಧಿಕಾರ ಹಸ್ತಾಂತರ ವಿಷಯ ಪ್ರಸ್ತಾಪಿಸಿ, ಈ ಹಿಂದೆ ನೀಡಿದ ಭರವಸೆ ಈಡೇರಿಸಿ, ಇನ್ನು ಹೆಚ್ಚು ದಿನ ಸಹಿಸಿಕೊಂಡಿರಲು ಸಾಧ್ಯವಿಲ್ಲ ಎಂದು ಸ್ಪಷ್ಟ ನುಡಿಗಳಲ್ಲಿ ತಿಳಿಸಿದ್ದಾರೆ.

ಮೈಸೂರು ವಿಮಾನ ನಿಲ್ದಾಣದಲ್ಲಿ ಮುಖ್ಯಮಂತ್ರಿ ಎದುರೇ ಈ ಮಾತುಗಳನ್ನು ನಿಮ್ಮ ಗಮನಕ್ಕೆ ತಂದಿದ್ದೆ, ನಂತರವೂ ವಿಧಾನಮಂಡಲ ಅಧಿವೇಶನ ▶ 6ನೇ ಪುಟಕ್ಕೆ

> “ಜನವರಿ 25 ಅಥವಾ 27ಕ್ಕೆ ಸಂಪುಟ ಪುನರ್ ರಚನೆಗೆ ಅವಕಾಶ ನೀಡಿ ನಂತರ ನೀವು ರಾಜಕೀಯವಾಗಿ ಯಾವುದೇ ನಿರ್ಧಾರ ಕೈಗೊಳ್ಳಿ, ಮುಖ್ಯಮಂತ್ರಿ ತಮ್ಮ ಸಂಪುಟ ಪುನರ್ ರಚಿಸುವುದಾಗಿ ಸಾರ್ವಜನಿಕವಾಗಿ ಭರವಸೆ ನೀಡಿದ್ದಾರೆ. ಇದಕ್ಕೆ ವಿರುದ್ಧವಾಗಿ ನೀವು ರಾಜಕೀಯ ನಿರ್ಧಾರ ಕೈಗೊಂಡರೆ, ಸಿದ್ದರಾಮಯ್ಯ ಅವರಿಗೆ ಅಪಮಾನ ಮಾಡಿದಂತಾಗುತ್ತದೆ. ಇದನ್ನು ಗಮನದಲ್ಲಿ ಇಟ್ಟುಕೊಂಡು ಮಂತ್ರಿಮಂಡಲ ಪುನರ್ ರಚನೆಗೆ ಅವಕಾಶ ನೀಡಿ ಎಂದು ಮನವಿ ಮಾಡಿಕೊಂಡಿದ್ದರು. ಜಾರ್ಜ್ ವಕಾಲತ್ತು ಶಿವಕುಮಾರ್ ಕಿವಿಗೂ ಬಿದ್ದಿದ್ದು, ಈ ವಿಷಯವನ್ನೂ ಖರ್ಗೆ ಮನೆಯಲ್ಲಿ ನಡೆದ ಸಭೆಯಲ್ಲಿ ಪ್ರಸ್ತಾಪಿಸಿ, ಇಂತಹ ಬೆಳವಣಿಗೆಗಳಿಗೆ ಅವಕಾಶ ನೀಡಬಾರದು ಎಂದು ಅಸಹನೆಯಿಂದಲೇ ಹೇಳಿದ್ದಾರೆನ್ನಲಾಗಿದೆ.

ಸುತ್ತೂರು ಜಾತ್ರೆಯಲ್ಲಿ ಶಿವಯೋಗಿಗಳ ಅದ್ಧೂರಿ ರಥೋತ್ಸವ

ಲಕ್ಷಾಂತರ ಭಕ್ತರು ಭಾಗಿ, ಹಣ್ಣು–ಜವನ ಎಸೆದು ಭಕ್ತಿ ಸಮರ್ಪಣೆ, ರಥವನ್ನೆಳೆದ ಶ್ರೀಗಳು

ನಂಜನಗೂಡು: ಸುತ್ತೂರು ಶ್ರೀ ಕ್ಷೇತ್ರದ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವದ ಅಂಗವಾಗಿ ಶನಿವಾರ ಶಿವಯೋಗಿಗಳವರ ರಥೋತ್ಸವವು ಲಕ್ಷಾಂತರ ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ಜರುಗಿತು.

ಮೈಸೂರು ಜಿಲ್ಲೆಯ ಸುತ್ತಮುತ್ತಲಿನ ಹಳ್ಳಿಗಳಿಂದ ಹಾಗೂ ರಾಜ್ಯ ಹಾಗೂ ಹೊರ ರಾಜ್ಯಗಳಿಂದ ಬಂದಿದ್ದ ಭಕ್ತರು ರಥೋತ್ಸವದಲ್ಲಿ ಪಾಲ್ಗೊಂಡು ಉದ್ಘೋಷ, ಜಯಘೋಷ, ಜಯಕಾರಗಳನ್ನು ಕೂಗಿ ರಥೋತ್ಸವಕ್ಕೆ ಹಣ್ಣು–ಜವನ ಸಮರ್ಪಿಸಿ ಕೃತಾರ್ಥರಾದರು.

ರಥೋತ್ಸವದ ಹಿನ್ನೆಲೆಯಲ್ಲಿ ಶನಿವಾರ ಬೆಳಿಗ್ಗೆ 4 ಗಂಟೆಗೆ ಕರ್ತೃಗದ್ದಿಗೆಯನ್ನು ಅಲಂಕರಿಸಿ, ಶಿವಯೋಗಿಗಳವರ ಉತ್ಸವ ಮೂರ್ತಿಗೆ ಮಹಾರುದ್ರಾಭಿಷೇಕ ನೆರವೇರಿಸಿ ಪೂಜೆ ಸಲ್ಲಿಸಲಾಯಿತು. ಬೆಳಗ್ಗೆ 6 ಗಂಟೆಗೆ ಗುರು ಪರಂಪರೆಯ ಸಂಸ್ಮರಣೋತ್ಸವ ಹಾಗೂ ಮಂತ್ರ ಮಹರ್ಷಿಗಳ ಗದ್ದಿಗೆ ರುದ್ರಾಭಿಷೇಕ 60ನೆಯ ಮಂತ್ರ ಲೇಖನ ಸಂಸ್ಮರಣೋತ್ಸವ ನೆರವೇರಿಸಲಾಯಿತು. ನಂತರ ಬೆಳಗ್ಗೆ 6.30ಕ್ಕೆ ಕೀಳನಪುರ ಗ್ರಾಮದಲ್ಲಿ ಸ್ನೇಹ ಸೌಹಾರ್ದ–ಶಾಂತಿ–ಪ್ರಾರ್ಥನಾ–ಪಥ ಸಂಚಲನ ನಡೆಸಲಾಯಿತು. ಬೆಳಿಗ್ಗೆ 8:50ಕ್ಕೆ ಉತ್ಸವಮೂರ್ತಿಗೆ ರಾಜೋಪಾಚಾರ ನೆರವೇರಿಸಲಾಯಿತು. ನಂತರ 10.30ರ ವೇಳೆಗೆ ಶಿವಯೋಗಿಗಳವರ ಉತ್ಸವ ಮೂರ್ತಿಯನ್ನು ರಥದಲ್ಲಿ ಪ್ರತಿಷ್ಠಾಪಿಸಿ ಪೂಜಾ ವಿಧಿ ವಿಧಾನಗಳನ್ನು ಪೂರೈಸಿದರು.

ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನಿಧ್ಯದಲ್ಲಿ ಅನೇಕ ಗಣ್ಯರು ನಂದಿ ಧ್ವಜ, ನಂದಿ ಕಂಬಕ್ಕೆ ಪೂಜೆ ಸಲ್ಲಿಸಿ ರಥದ ಬೃಹತ್ ಗಾತ್ರದ ಹಗ್ಗವನ್ನು ಎಳೆದು ರಥೋತ್ಸವಕ್ಕೆ ಚಾಲನೆ ನೀಡುತ್ತಿದ್ದಂತೆ ಲಕ್ಷಾಂತರ ಸಂಖ್ಯೆಯಲ್ಲಿ ನೆರೆದಿದ್ದ ಭಕ್ತರು ಉದ್ಘೋಷ ಜಯಗೋಷಗಳನ್ನು ಮುಗಿಲು ಮುಟ್ಟುವಂತೆ ಕೂಗಿ ರಥದ ಹಗ್ಗವನ್ನು ಹಿಡಿದು ಎಳೆದು ಭಕ್ತಿ–ಭಾವ ಮೆರೆದರು.

ರಥೋತ್ಸವವನ್ನು ವಿವಿಧ ಬಗೆಯ ಹೂಗಳಿಂದ ಅಲಂಕೃತಗೊಳಿಸಲಾಗಿತ್ತು, ವಿವಿಧ ಜಾನಪದ ಕಲಾ ತಂಡಗಳೊಂದಿಗೆ ಸಾಗಿದ ರಥವು ಗ್ರಾಮದ ದೊಡ್ಡಮ್ಮತಾಯಿ ದೇವಸ್ಥಾನದ ವೃತ್ತವನ್ನು ಬಳಸಿ ಕರ್ತೃಗದ್ದಿಗೆಗೆ ಯಾವುದೇ ಅಡ್ಡಿ ಆತಂಕವಿಲ್ಲದೆ ಮರಳಿ ಸ್ವಸ್ಥಾನ ಸೇರಿತು.

ರಥೋತ್ಸವದಲ್ಲಿ ಭಾಗಿಯಾಗಿದ್ದ ನಂದಿ ಕಂಬ, ಛತ್ರಿ–ಚಾಮರ, ಸುರಪಾನಿ, ನಾದಸ್ವರ, ವೀರಗಾಸೆ, ಪೂಜಾ ಕುಣಿತ, ಗಾರುಡಿ ಗೊಂಬೆ, ಹುಲಿ ವೇಷಧಾರಿಗಳು, ಮರಕಾಲು ಕುಣಿತ, ನಗಾರಿ, ತಮಟೆ, ಡೊಳ್ಳು ಕುಣಿತ, ವೀರ ಮಕ್ಕಳ ಕುಣಿತ, ದೊಣ್ಣೆ ವರಸೆ, ಚಂಡೆವಾದ್ಯ, ಸುಗ್ಗಿ ಕುಣಿತ, ಗೊರವರ ಕುಣಿತ, ಕೋಲಾಟ, ದಾನ ಪಟ್ಟಿ, ಬಿರುದಾವಳಿಗಳು, ಸೇರಿದಂತೆ ವಿವಿಧ ಜಾನಪದ ಕಲಾತಂಡಗಳು ಜಾತ್ರೆಗೆ ಮೆರಗು ತಂದವು. ಜಾತ್ರೆಯಲ್ಲಿ ಭಾಗವಹಿಸಿದ್ದ ಲಕ್ಷಾಂತರ ಜನರು ಜಾತ್ರಾ ಮಹೋತ್ಸವವನ್ನು ಕಣ್ತುಂಬಿಕೊಂಡು ರಥೋತ್ಸವವನ್ನು ವೀಕ್ಷಿಸಿ ಭಕ್ತಿ ಭಾವ ಮೆರೆದರು.



ಬಹುರೂಪಿ ನಾಟಕೋತ್ಸವದಲ್ಲಿ
ಪ್ರೇಕ್ಷಕರ ನಕ್ಕು ನಲಿಸಿದ 'ಕಿವುಡ ಮಾಡಿದ ಕಿತಾಪತಿ' ನಾಟಕ



'ಕಿವುಡ ಮಾಡಿದ ಕಿತಾಪತಿ' ನಾಟಕ ಪ್ರದರ್ಶನದ ದೃಶ್ಯ.

ಮೈಸೂರು,ಜ.17(ಪಿಎಂ)– ಬಹುರೂಪಿ ರಾಷ್ಟ್ರೀಯ ನಾಟಕೋತ್ಸವದ ಭಾಗವಾಗಿ ರಂಗಾಯಣದ ವನರಂಗದಲ್ಲಿ ಶನಿವಾರ ನಡೆದ 'ಕಿವುಡ ಮಾಡಿದ ಕಿತಾಪತಿ' ನಾಟಕ ಪ್ರೇಕ್ಷಕರಿಗೆ ಕಚಗುಳಿ ಇಟ್ಟು ನಕ್ಕು ನಗಿಸಿತು.

ಬಿ.ಕುಮಾರಸ್ವಾಮಿ ನಿರ್ದೇಶನದಲ್ಲಿ, ಚಿತ್ರದುರ್ಗದ ಶ್ರೀ ಕುಮಾರೇಶ್ವರ ನಾಟಕ ಸಂಘದ ಕಲಾವಿದರು ಅಭಿನಯಿಸಿದ ಈ ನಾಟಕವು ಪ್ರೇಕ್ಷಕರನ್ನು ನಗುವಿನ ಅಲೆಯಲ್ಲಿ ತೇಲಿಸಿತು. ಕಿಕ್ಕಿರಿದು ತುಂಬಿದ್ದ ಪ್ರೇಕ್ಷಕರಲ್ಲಿ ಹಲವರು ಸ್ಥಳಾವಕಾಶ ದೊರಕದೆ ನೆಲದಲ್ಲಿ ಕುಳಿತು, ನಿಂತುಕೊಂಡೇ ನಾಟಕ ವೀಕ್ಷಿಸಿದರು.

ಕಲಾಮಂದಿರಲ್ಲಿ ತಮಿಳುನಾಡಿನ ಕೊಯಮತ್ತೂರಿನ 'ಅಲಂ ಥಿಯೇಟರ್ ಗ್ರೂಪ್' ತುಡದವರು 'ಕಿಷ್ಕಿಂಧೆ (ತಮಿಳು), ಭೂಮಿಗೀತದಲ್ಲಿ ಬೆಂಗಳೂರಿನ ಪಯಣ ರಂಗ ತಂಡದವರು ಎನ್.ಮಂಗಳಾ ನಿರ್ದೇಶನದಲ್ಲಿ 'ಕಳೆದುಹೋದ ಹಾಡು (ಕನ್ನಡ)' ನಾಟಕ ಅಭಿನಯಿಸಿದರು.

ಬಹುರೂಪಿ ಚಲನಚಿತ್ರೋತ್ಸವದಲ್ಲಿ (ಶ್ರೀರಂಗ ಮಂದಿರ) ಇಂದು ಹೀರೋ (ಇಂಗ್ಲಿಷ್), ಘುಟ್ಲೀ ಲಡೂ (ಹಿಂದಿ) ಹಾಗೂ ಕನ್ನಡದ 'ಹೆಬ್ಬುಲಿ ಕಟ್' ಚಿತ್ರಗಳಿಗೆ ಪ್ರೇಕ್ಷಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು.


ಜನಪದ ಉತ್ಸವ: ಇಲ್ಲಿನ ಕಿಂದರಿ ಜೋಗಿ ಆವರಣದಲ್ಲಿ ಇಂದು ಬಹುರೂಪಿ ಜನಪದ ಉತ್ಸವದ ಭಾಗವಾಗಿ ನಡೆದ ಗಾಯಕ ಪಿಚ್ಚಳ್ಳಿ ಶ್ರೀನಿವಾಸ ಅವರ ಗಾಯನ ಕೇಳಲು ಇಡೀ ಆವರಣ ಪ್ರೇಕ್ಷಕರಿಂದ ಕಿಕ್ಕಿರಿದು ತುಂಬಿತ್ತು. ಪಿಚ್ಚಳ್ಳಿ ಶ್ರೀನಿವಾಸ ಮತ್ತು ತಂಡವು ಜನಪದ ಗೀತೆಗಳು ಮಾತ್ರವಲ್ಲದೇ ಹೋರಾಟದ ಗೀತೆಗಳನ್ನು ಪ್ರಸ್ತುತಪಡಿಸಿ ಪ್ರೇಕ್ಷಕರನ್ನು ಚಿಂತನೆಗೆ ಹಚ್ಚಿದರು. ಆಂಧ್ರಪ್ರದೇಶದ ವಿಜಯವಾಡದ ಅದ್ದೂರು ಗೋಪಿ ಮತ್ತು ತಂಡದವರು 'ಬುಟ್ಟಬೊಮ್ಮುಲು, ಪುಲಿವೇಷಾಲು' ಜಾನಪದ ನೃತ್ಯ ಪ್ರದರ್ಶಿಸಿ ರಂಜಿಸಿದರು.



ರಂಗಾಯಣದ ಭೂಮಿಗೀತದಲ್ಲಿ 'ಕಳೆದುಹೋದ ಹಾಡು (ಕನ್ನಡ)' ನಾಟಕ ಶನಿವಾರ ಪ್ರದರ್ಶನ ಕಂಡಿತು.

ಭಾರತದ ಸಂವಿಧಾನ ಎಲ್ಲಾ ದೇಶಕ್ಕೂ ಮಾದರಿ

ಬಹುರೂಪಿ ರಾಷ್ಟ್ರೀಯ ನಾಟಕೋತ್ಸವದ ವಿಚಾರ ಸಂಕಿರಣದಲ್ಲಿ ಪತ್ರಕರ್ತ ಸಿದ್ಧಾರ್ಥ ವರದರಾಜನ್ ಅಭಿಪ್ರಾಯ



ರಂಗಾಯಣದಲ್ಲಿ ನಡೆಯುತ್ತಿರುವ ಬಹುರೂಪಿಯ ರಾಷ್ಟ್ರೀಯ ನಾಟಕೋತ್ಸವದ 'ರಾಷ್ಟ್ರೀಯ ವಿಚಾರ ಸಂಕಿರಣ'ವನ್ನು ಪತ್ರಕರ್ತ ಸಿದ್ಧಾರ್ಥ ವರದರಾಜನ್ ಅಂಬೇಡ್ಕರ್ ಕುರಿತಾದ ಪುಸ್ತಕ ಹಾಗೂ ಸಮಾಜ ಕಲ್ಯಾಣ ಇಲಾಖೆ ಹೊರ ತಂದಿರುವ ಅಂಬೇಡ್ಕರ್ ಚಿತ್ರವುಳ್ಳ ಕ್ಯಾಲೆಂಡರ್ ಬಿಡುಗಡೆಗೊಳಿಸುವ ಮೂಲಕ ಉದ್ಘಾಟಿಸಿದರು.

ಮೈಸೂರು, ಜ.17(ಜಿಎ)–ಭಾರತದ ಸಂವಿಧಾನ ಕೇವಲ ನಮಗೆ ಮಾತ್ರ ಸಂಬಂಧಿಸಿದ್ದಲ್ಲ ಜಗತ್ತಿನ ಎಲ್ಲ ದೇಶಗಳಿಗೂ ಮಾದರಿಯಾಗಿದೆ ಎಂದು ಪತ್ರಕರ್ತ ಸಿದ್ಧಾರ್ಥ ವರದರಾಜನ್ ಅಭಿಪ್ರಾಯಪಟ್ಟರು.

ಮೈಸೂರಿನ ರಂಗಾಯಣದಲ್ಲಿ ನಡೆಯುತ್ತಿರುವ ಬಹುರೂಪಿಯ ರಾಷ್ಟ್ರೀಯ ನಾಟಕೋತ್ಸವದಲ್ಲಿ ಆಯೋಜಿಸಿರುವ 'ರಾಷ್ಟ್ರೀಯ ವಿಚಾರ ಸಂಕಿರಣ'ವನ್ನು ಉದ್ಘಾಟಿಸಿ ಮಾತನಾಡಿದ ಅವರು, ಭಾರತದ ಸ್ವಾತಂತ್ರ್ಯ ಚಳವಳಿ ಮತ್ತು ಸಂವಿಧಾನವೇ ಅಮೆರಿಕ, ಯೂರೋಪ್ ಸೇರಿದಂತೆ ನೂರಾರು ದೇಶಗಳಿಂದ ವಸಾಹತೀಕರಣ, ಆರ್ಥಿಕ, ಸಾಮಾಜಿಕ ವಿಮೋಚನೆ ಪಡೆಯಲು ಮಾದರಿಯಾಗಿದೆ ಎಂದರು.

ನಮ್ಮ ಸಂವಿಧಾನವು ದ್ವಿತೀಯ ಮಹಾಯುದ್ಧದ ನಂತರ ಉಂಟಾದ ಜಾಗತಿಕ ಸನ್ನಿವೇಶಗಳ ಬಳುವಳಿಯೂ ಆಗಿದೆ. ನಾಜಿ ಫ್ಯಾಸಿಸಂ ಸೋಲು, ಸಾಮ್ರಾಜ್ಯಶಾಹಿಯ ಅಂತ್ಯ ಮತ್ತು ಮಾನವ ಹಕ್ಕುಗಳ ಸ್ಥಾಪನೆಗಿದ್ದ ಒಲವು ಸಂವಿಧಾನ ರಚನೆಯಲ್ಲಿ ಪ್ರಭಾವ ಬೀರಿದೆ ಎಂದು ಅವರು ವಿವರಿಸಿದರು.

ಅಂತರರಾಷ್ಟ್ರೀಯ ಕಾನೂನುಗಳು ಶಕ್ತಿಶಾಲಿ ದೇಶಗಳಿಂದ ನಡೆಯುತ್ತಿದೆ. ಶಕ್ತಿವಂತ ಮಾಡಿದ್ದೇ ಸರಿ ಎಂಬ ಜಾಗತಿಕ ವೇದಿಕೆಯಲ್ಲಿ ಮಾನವ ಹಕ್ಕುಗಳು ಉಲ್ಲಂಘನೆಯಾಗುತ್ತಿವೆ. ಮತ್ತೊಂದು ದೇಶದ ಮೇಲೆ ದಾಳಿ ಮಾಡುವುದು. ಅಧ್ಯಕ್ಷರನ್ನು ಅಪಹರಿಸುವುದು. ಸಾಮಾನ್ಯ ಜನರ ಮೇಲೂ ಬೆದರಿಕೆ ಹಾಕುವುದು.ಅಮೆರಿಕದಲ್ಲಿ ಪ್ರಜಾಪ್ರಭುತ್ವ ಇಲ್ಲವಾಗಿದೆ. ನಿರ್ಭೀತಿಯಿಂದ ಪ್ರಶ್ನಿಸಲಾಗುತ್ತಿದೆ. ಅತಿದೊಡ್ಡ ಪ್ರಜಾಪ್ರಭುತ್ವ ದೇಶವಾದ ಭಾರತದಲ್ಲಿಯೂ ಇದು ಆಗುತ್ತಿದೆ ಎಂದರು.

ನಾಯಕ ಪ್ರಶ್ನಾತೀತನಾದಾಗ ಪ್ರಜಾಪ್ರಭುತ್ವ ಇಕ್ಕಟ್ಟಿಗೆ ಸಿಲುಕುತ್ತದೆ ಎಂದು ಎಚ್ಚರಿಸಿದ್ದ ಅಂಬೇಡ್ಕರ್ ಅವರು ವ್ಯಕ್ತಿ ಪೂಜೆ ವಿರೋಧಿಸಿದ್ದರು. ದೇಶದಲ್ಲಿ ಪ್ರಶ್ನಿಸಿದವರ ವಿರುದ್ಧ ಪ್ರಕರಣ ದಾಖಲಿಸಲಾಗುತ್ತಿದೆ. ಉತ್ತರ ಪ್ರದೇಶದಲ್ಲಿ ಅಂಬೇಡ್ಕರ್ ಅವರಂತೆ ಮನುಸ್ಮೃತಿ ಸುಟ್ಟ ಯುವತಿಯ ವಿರುದ್ಧವೇ ಪ್ರಕರಣ ದಾಖಲಿಸಲಾಗಿದೆ. ಡಾ.ಬಿ.ಆರ್. ಅಂಬೇಡ್ಕರ್ ಅವರನ್ನು ಹೊಗಳುವ ನಾಯಕರು, ಅವರ ಹೋರಾಟ ಮಾದರಿಯಲ್ಲಿ ನಡೆದವರ ವಿರುದ್ಧವೇ ಪ್ರಕರಣ ದಾಖಲಿಸುವುದು ದ್ವಂದ್ವ ನಿಲುವಲ್ಲವೇ ಎಂದು ಪ್ರಶ್ನಿಸಿದರು.

ವಿಧಾನಪರಿಷತ್ ಸದಸ್ಯ ಡಾ.ಕೆ.ಶಿವಕುಮಾರ್ ಮಾತನಾಡಿ, ಈ ಬಾರಿ ಮೈಸೂರಿನ ರಂಗಾಯಣದಲ್ಲಿ ಆಯೋಜಿಸಿರುವ ಬಹುರೂಪಿ ನಾಟಕವು ಉತ್ತಮ ಸಂದೇಶ ನೀಡುತ್ತಿದ್ದು, ದೇಶಾದ್ಯಂತ ಇಂತಹ ಕಾರ್ಯಕ್ರಮಗಳು ನಡೆಯಬೇಕು. ಬುದ್ಧಿ ಜೀವಿಗಳಿಂದ, ವಿದ್ಯಾರ್ಥಿಗಳು ದೇಶದ ಪ್ರಜಾಪ್ರಭುತ್ವವನ್ನು ಉಳಿಸಬೇಕಾಗಿದೆ ಎಂದು ಅಭಿಪ್ರಾಯಪಟ್ಟರು.

ಮೈಸೂರು ವಿಶ್ವವಿದ್ಯಾನಿಲಯ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಮಾತನಾಡಿ, ಡಾ.ಬಿ.ಆರ್.ಅಂಬೇಡ್ಕರ್ ಅವರು ಸಾಮಾನ್ಯ ವ್ಯಕ್ತಿ ಶಿಕ್ಷಣದಿಂದ ಎಷ್ಟೊಂದು ಬದಲಾದರು ಎಂದು ನಾವು ತಿಳಿದುಕೊಳ್ಳಬೇಕು. ಶಿಕ್ಷಣ ಜೀವನವನ್ನು ಬದಲಾವಣೆ ಮಾಡುತ್ತದೆ, ಹಾಗೆಯೇ ತುಂಬಾ ಚೆನ್ನಾಗಿ ಶಿಕ್ಷಣ ಪಡೆದರೆ ಏನೆಲ್ಲಾ ಆಗಬಹುದು ಎನ್ನುವುದಕ್ಕೆ ಡಾ.ಬಿ.ಆರ್.ಅಂಬೇಡ್ಕರ್ ಅವರೇ ಉದಾಹರಣೆ ಎಂದರು.

ಕಾರ್ಯಕ್ರಮದಲ್ಲಿ ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು, ಮೈಸೂರು ವಿಶ್ವವಿದ್ಯಾನಿಲಯದ ಅಂಬೇಡ್ಕರ್ ಅಧ್ಯಯನ ಕೇಂದ್ರದ ನಿರ್ದೇಶಕ ಪ್ರೊ.ನರೇಂದ್ರಕುಮಾರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯ ನಿರ್ದೇಶಕ ಎಂ.ಡಿ.ಸುದರ್ಶನ್ ಉಪಸ್ಥಿತರಿದ್ದರು.

ಅಂಬೇಡ್ಕರ್ ಸಂವಿಧಾನ ಬಿಟ್ಟರೆ ದೇಶಕ್ಕೆ ಅಪಾಯ, ಮನುವಾದಿಗಳು ಈಗಾಗಲೇ ಬಾಲ ಬಿಚ್ಚಿದ್ದಾರೆ!

ಮೈಸೂರು,ಜ.17(ಜಿಎ)–ಅಂಬೇಡ್ಕರ್, ಸಂವಿಧಾನ ಬಿಟ್ಟರೆ, ದೇಶಕ್ಕೆ ಅಪಾಯ. ಮನುವಾದಿಗಳು ಈಗಾಗಲೇ ಬಾಲ ಬಿಚ್ಚಿ ಆಟ ಆರಂಭಿಸಿದ್ದಾರೆ ಎಂದು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಎಚ್ಚರಿಸಿದರು.

ಬಹುರೂಪಿ ರಾಷ್ಟ್ರೀಯ ನಾಟಕೋತ್ಸವದ ಅಂಗವಾಗಿ ಆಯೋಜಿಸಿದ್ದ ವಿಚಾರ ಸಂಕಿರಣದಲ್ಲಿ ಅಧ್ಯಕ್ಷತೆ ವಹಿಸಿದ್ದ ಅವರು ಮಾತನಾಡಿದರು. ಬಿಹಾರದಲ್ಲಿ ಇತ್ತೀಚೆಗೆ ನಡೆದ ಚುನಾವಣೆಯ ಸಂದರ್ಭದಲ್ಲಿ ಮಹಿಳಾ ಮತದಾರರಿಗೆ 10 ಸಾವಿರ ರೂ. ನೀಡಿದರು. ಚುನಾವಣಾ ಆಯೋಗ ಅದನ್ನು ನೋಡಿಕೊಂಡು ಸುಮ್ಮನೆ ಇದೆ. ಬಿಜೆಪಿಗೆ ಅಭೂತಪೂರ್ವ ಯಶಸು ಸಿಕ್ಕಿತ್ತು. ಈ ರೀತಿ ಹಂತ ಹಂತವಾಗಿ ಬಿಜೆಪಿಯ ಕೋಮುವಾದಿಗಳು ಚುನಾವಣೆಯ ಎರಡು ದಿನದ ಮುನ್ನ 10 ಸಾವಿರ ರೂ. ಹಾಕಿ ಮುಗ್ಧ ಜನರ ದಿಕ್ಕು ತಪ್ಪಿಸಿದ್ದಾರೆ. ಈ ನಿಟ್ಟಿನಲ್ಲಿ ಪ್ರಜಾಪ್ರಭುತ್ವ ಉಳಿಸಿ ಬಲಪಡಿಸುವ ಕೆಲಸ ಮತ್ತು ಪ್ರಶ್ನಿಸುವ ವೇದಿಕೆ ಇಂದು ಸೃಷ್ಟಿಯಾಗಿದೆ ಎಂದು ಸಚಿವರು ಹೇಳಿದರು.

ಸ್ವಾತಂತ್ರ್ಯ ಬಂದು 78 ವರ್ಷಗಳಾಗಿದ್ದು, ಇನ್ನೂ ಸಾಮಾಜಿಕ ಬಹಿಷ್ಕಾರ, ಮರ್ಯಾದ ಹತ್ಯೆ ನಡೆಯುತ್ತಿದೆ. ಕಾನೂನು ಕೇವಲ ಶ್ರೀಮಂತರ ಪರ ಕೆಲಸ ಮಾಡುತ್ತಿದ್ದೀಯಾ ಎಂಬ ಪ್ರಶ್ನೆಗಳು ಮೂಡಿ, ಇದಕ್ಕಾಗಿ ಪ್ರತ್ಯೇಕ ಕಾನೂನು ರೂಪಿಸುವ ಮುಂದಾಗಿದ್ದು, ಅದು ಎರಡು ಬಾರಿ ವಾಪಾಸ್ ಬಂದಿದೆ. ಇದರಿಂದ ಸಂವಿಧಾನ ಆಶಯಗಳನ್ನು ಜಾರಿಗೊಳಿಸುವ ಜನರ ಮನಸ್ಸೇ ಸರಿ ಇಲ್ಲ ಎಂಬ ಭಾವನೆ ಮೂಡಿದೆ ಎಂದರು.

ಬಹುರೂಪಿ ವಿವಿಧ ರೂಪಗಳಿಂದ ಅತ್ಯಂತ ಪ್ರಾಬಲ್ಯವಾದ ಮಾಧ್ಯಮವಾಗಿದೆ. ಇದನ್ನು ಬಳಸಿಕೊಂಡು ಚಳವಳಿಗಳು ಗಟ್ಟಿಯಾಗಿವೆ. ಇದರ ಮೂಲಕವೇ ನಾವು ಯುವ ಸಮೂಹವನ್ನು ಎಚ್ಚರಿಸಬೇಕಿದೆ. ಇಂದು ಸಂವಿಧಾನ ಅಪಾಯದಲ್ಲಿದೆ. ಒಂದೇ ವಿಷಯವನ್ನು ನಿಶಬ್ಧಗೊಳಿಸುತ್ತಿದ್ದಾರೆ. ಐಟಿ, ಇಡಿ, ಚುನಾವಣಾ ಆಯೋಗವನ್ನು ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಇಂತಹ ಕಾರ್ಯಕ್ರಮದ ಮೂಲಕ ಸಮೃದ್ಧ ಭಾರತದ ಜೊತೆಗೆ ಬಹುತ್ವದ ಭಾರತದ ಜವಾಬ್ದಾರಿ ಎಲ್ಲರ ಮೇಲಿದೆ.

ಈ ಹಿಂದೆ ಹಲವರು ರಂಗಾಯಣ ನಿರ್ದೇಶಕರಾಗಿ ಉತ್ತಮ ಸೇವೆ ಸಲ್ಲಿಸಿದ್ದಾರೆ. ಆದರೆ ಅಡ್ಡಂಡ ಸಿ.ಕಾರ್ಯಪ್ಪ ಅವರು ಖ್ಯಾತ ಸಾಹಿತಿ ಎಸ್.ಎಲ್.ಭೈರಪ್ಪ ಅವರ ಪರ್ವ ನಾಟಕ ಮಾಡಿಸುವಾಗ ಅದರಲ್ಲಿ ಬರುವ ಕೋಣದ ಮಾಂಸ ತಿನ್ನುವ ವಿಷಯವನ್ನು ಬಿಟ್ಟು ನಾಟಕ ಮಾಡಿಸಿದರು. ಆದರೆ, ಇತಿಹಾಸ ಬಿಟ್ಟು ನಾಟಕ ಮಾಡುವುದು ಸರಿಯಲ್ಲ. ವಿಜ್ಞಾನ ವ್ಯವಸ್ಥಿತವಾಗಿರುತ್ತದೆ. ಆದರೆ, ಇತಿಹಾಸ ಆಗಲ್ಲ. ಇತಿಹಾಸ ಹಿಂದಿನ ದಾಖಲೆಯಾಗಿದೆ. ಅದನ್ನು ಬಿಟ್ಟು ಮುಂದೆ ಸಾಗಲು ಸಾಧ್ಯವಿಲ್ಲ ಎಂದರು.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಜ.17–ವಿ.ವಿ.ಮೊಹಲ್ಲಾ ಉಪವಿಭಾಗದ ವ್ಯಾಪ್ತಿಯಲ್ಲಿ ಭೂಗತ ಕೇಬಲ್ ಅಳವಡಿಸುವ ಕೆಲಸದ ನಿಮಿತ್ತ ಜ.19ರಂದು ಬೆಳಗ್ಗೆ 10ರಿಂದ ಸಂಜೆ 6 ಗಂಟೆಯವರೆಗೆ ಗೋಕುಲಂ ಪಾರ್ಕ್ ರಸ್ತೆ (ಬಿ.ಸಿ. ಲಿಂಗಯ್ಯ ಪಾರ್ಕ್), ಎಸ್‌ಎಲ್‌ವಿ ದೇವಸ್ಥಾನ ಹಿಂಭಾಗ, ವಿ.ವಿ.ಪುರಂ ಪೊಲೀಸ್ ಸ್ಟೇಷನ್, ವಾಲ್ಮೀಕಿ ರಸ್ತೆ ಮತ್ತು 2ನೇ ಮುಖ್ಯ ರಸ್ತೆ ವಿವಿ ಮೊಹಲ್ಲಾ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಲ್ಲಿ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.



ಅಭಿನಂದನೆ...

ಮೈಸೂರು ಮಹಾನಗರ ಬಿಜೆಪಿ ಅಧ್ಯಕ್ಷರಾಗಿ ಎರಡು ವರ್ಷ ಪೂರೈಸಿದ ಮಾಜಿ ಶಾಸಕ ಎಲ್.ನಾಗೇಂದ್ರ ಅವರನ್ನು ಪಕ್ಷದ ಕಚೇರಿಯಲ್ಲಿ ಅಭಿನಂದಿಸಲಾಯಿತು. ಈ ವೇಳೆ ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್. ಶ್ರೀವತ್ಸ, ವಿಧಾನಪರಿಷತ್ ಮಾಜಿ ಸದಸ್ಯ ಸಿದ್ದರಾಜು, ಅರಣ್ ಕುಮಾರ್‌ಗೌಡ, ದೇವರಾಜ್, ರಾಕೇಶ್‌ಗೌಡ, ಬಿ.ಎಂ.ರಘು ಇತರರಿದ್ದರು

ಐದನೇ ಪುಟದಿಂದ

ಮಹಾರಾಷ್ಟ್ರ ಪೊಲೀಸರು ಬರಬೇಕಿತ್ತಾ...!

ನಮ್ಮ ಸರ್ಕಾರದ ಬದ್ಧತೆಯಾಗಿದೆ. ಇದಕ್ಕೆ ಪೂರಕವಾಗಿ ಪೊಲೀಸ್ ಇಲಾಖೆ ಕೆಲಸ ಮಾಡಬೇಕು. ಸಂವಿಧಾನ ಪ್ರತಿಯೊಬ್ಬರಿಗೂ ಸಮಾನ ಅವಕಾಶ, ರಕ್ಷಣೆಯನ್ನು ಒದಗಿಸಿದೆ. ಕಾನೂನು ಎಲ್ಲರಿಗೂ ಒಂದೇ. ಯಾರು ತಪ್ಪು ಮಾಡಿದರೂ ಅದು ತಪ್ಪೇ. ಬಲಾಢ್ಯರು, ಸಮಾಜಘಾತುಕ ಶಕ್ತಿಗಳಿಗೆ ಯಾವುದೇ ಕಾರಣಕ್ಕೂ ಮಣೆ ಹಾಕಬಾರದು. ದುರ್ಬಲರು, ಪರಿಶಿಷ್ಟ ಜಾತಿ, ವರ್ಗದ ಜನರು, ಧಾರ್ಮಿಕ ಅಲ್ಪಸಂಖ್ಯಾತರ ರಕ್ಷಣೆ ಎಲ್ಲರ ಹೊಣೆ. ದುರ್ಬಲರು ಯಾವುದೇ ಕಾರಣಕ್ಕೂ ಅನ್ಯಾಯಕ್ಕೆ ಒಳಗಾಗಬಾರದು ಎಂದು ಹೇಳಿದರು.

ಸಮರ್ಪಕವಾಗಿ ಕೆಲಸ ಮಾಡಿ: ತಹಶೀಲ್ದಾರ್ ಹಾಗೂ ಪೊಲೀಸ್ ಇನ್ಸ್‌ಪೆಕ್ಟರ್ ಸರಿಯಾಗಿ ಕರ್ತವ್ಯ ನಿರ್ವಹಿಸಿದರೆ ಆ ತಾಲೂಕಿನಲ್ಲಿ ಜನರು ನೆಮ್ಮದಿಯಿಂದ ಇರಲು ಸಾಧ್ಯ. ಇದೇ ರೀತಿ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿ, ಎಸ್ಪಿ ಮತ್ತು ಸಿಇಒ ಸರಿಯಾಗಿ ಕರ್ತವ್ಯ ನಿರ್ವಹಿಸಿದರೆ ಆ ಜಿಲ್ಲೆಯ ಜನರು ನೆಮ್ಮದಿಯಿಂದ ಇರುತ್ತಾರೆ. ಆದರೆ ಕೆಲ ಪೊಲೀಸ್ ಠಾಣೆಗಳಲ್ಲಿ ಕೆಲವು ಅಧಿಕಾರಿಗಳು ಸರಿಯಾಗಿ ಕರ್ತವ್ಯ ನಿರ್ವಹಿಸದ ಪರಿಣಾಮ ಸಾಮಾನ್ಯರು ತೊಂದರೆ ಅನುಭವಿಸಬೇಕಾಗುತ್ತದೆ ಎಂದರು.

ಶಿಕ್ಷೆ ಪ್ರಮಾಣ ಕಡಿಮೆ: ಕೊಲೆ, ಸುಲಿಗೆ, ಡಕಾಯಿತಿ, ದರೋಡೆ ಪ್ರಕರಣಗಳ ಪ್ರಮಾಣ ಕಳೆದ ಒಂದು ವರ್ಷದಲ್ಲಿ ಕಡಿಮೆಯಾಗಿದೆ. ಆದರೆ ಸೈಬರ್ ಅಪರಾಧ, ಡ್ರಗ್ಸ್ ಚಟುವಟಿಕೆಗಳು ಹೆಚ್ಚಾಗಿವೆ. ಅದನ್ನು ಮಟ್ಟ ಹಾಕಲು ಪೊಲೀಸ್ ಇಲಾಖೆ ಇನ್ನಷ್ಟು ಕಠಿಣ ಕ್ರಮಗಳನ್ನು ಜರುಗಿಸಬೇಕು. ನಮ್ಮ ರಾಜ್ಯದಲ್ಲಿ ಕ್ರಿಮಿನಲ್ ಪ್ರಕರಣಗಳಲ್ಲಿ ಕನ್ವಿಕ್ಷನ್ ದರ(ಶಿಕ್ಷೆ ಪ್ರಮಾಣ) ಕಡಿಮೆಯಿದೆ. ಅಪರಾಧ ಪ್ರಕರಣಗಳಲ್ಲಿ ಭಾಗಿಯಾದವರಿಗೆ ಶಿಕ್ಷೆಯನ್ನು ಖಾತ್ರಿಪಡಿಸುವಲ್ಲಿ ಪೊಲೀಸರ ಪಾತ್ರ ಬಹಳ ಮುಖ್ಯ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರ ಮೇಲಿನ ದೌರ್ಜನ್ಯ ಪ್ರಕರಣದಲ್ಲಿ ಶಿಕ್ಷೆ ಪ್ರಮಾಣ ಕಳೆದ ವರ್ಷಕ್ಕಿಂತ ಸುಧಾರಿಸಿದೆ. ಶೇ.3ರಿಂದ ಶೇ.12ಕ್ಕೆ ಹೆಚ್ಚಿದ್ದು, ಇದನ್ನು ಇನ್ನಷ್ಟು ಉತ್ತಮಪಡಿಸಬೇಕು ಎಂದು ಸೂಚನೆ ನೀಡಿದರು.

ಕೊಲೆ ಬೆದರಿಕೆ

ಘಟನೆ ವಿವರ: ವರುಣಾ ಹೋಬಳಿಯ ಗುಡಮಾದನಹಳ್ಳಿಯಲ್ಲಿ ನಿಮ್ಹಾನ್ಸ್ ಮಾದರಿಯ ಆಸ್ಪತ್ರೆ ನಿರ್ಮಿಸಲು ಸರ್ವೆ ನಂ.8ರಲ್ಲಿ 5 ಎಕರೆ 05 ಗುಂಟೆ, ಸರ್ವೆ ನಂ.60ರಲ್ಲಿ 6 ಎಕರೆ 10 ಗುಂಟೆ ಹಾಗೂ ಸರ್ವೆ ನಂ.68ರಲ್ಲಿ 8 ಎಕರೆ 25 ಗುಂಟೆ ಸೇರಿದಂತೆ ಒಟ್ಟು 20 ಎಕರೆ ಜಾಗವನ್ನು ಮೀಸಲಿಡಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯನವರು ಸ್ವಕ್ಷೇತ್ರದಲ್ಲಿ ಆಸ್ಪತ್ರೆ ನಿರ್ಮಾಣಕ್ಕೆ ಆಸಕ್ತಿ ತೋರಿದ ಹಿನ್ನೆಲೆಯಲ್ಲಿ ಈ ಜಾಗವನ್ನು ಗುರುತಿಸಿ, ಸ್ವಾಧೀನ ಪ್ರಕ್ರಿಯೆ ಆರಂಭಿಸಲು ಆದೇಶವಾಗಿದೆ.

ಈ ಹಿನ್ನಲೆಯಲ್ಲಿ ಕಸಬಾ–ವರುಣ ಹೋಬಳಿ, ಬಂಡಿಪಾಳ್ಯ ವೃತ್ತದ ಗ್ರಾಮ ಆಡಳಿತ ಅಧಿಕಾರಿ ಭವ್ಯ ಹಾಗೂ ಸಹಾಯಕ ನವೀನ್‌ಕುಮಾರ್ ಕಳೆದ ಡಿ.31ರಂದು ಬೆಳಗ್ಗೆ ಸ್ಥಳ ಪರಿಶೀಲನೆಗೆ ತೆರಳಿದ್ದರು. ಈ ವೇಳೆ ಗುಡಮಾದನಹಳ್ಳಿ ಗ್ರಾಮದ ಜಿ.ಎಂ. ಪುಟ್ಟಸ್ವಾಮಿ, ಯಾರನ್ನು ಕೇಳಿ ನಿಮ್ಹಾನ್ಸ್ ಆಸ್ಪತ್ರೆಗೆ ಜಮೀನು ಮಂಜೂರು ಮಾಡಿದ್ದೀರಿ, ಮೊದಲು ತಹಸೀಲ್ದಾರ್ ತಲೆ ತೆಗೆಯಬೇಕು. ನಿನ್ನನ್ನು ಇಲ್ಲಿಯೇ ಕೊಂದು ಹಾಕುತ್ತೇನೆ ಎಂದು ಅವಾಚ್ಯ ಪದಗಳಿಂದ ನಿಂದಿಸಿ, ಹಲ್ಲೆಗೆ ಮುಂದಾಗಿದ್ದಾರೆ. ಪುಟ್ಟಸ್ವಾಮಿಯ ದೌರ್ಜನ್ಯವನ್ನು ಮೊಬೈಲ್‌ನಲ್ಲಿ ಚಿತ್ರೀಕರಿಸುತ್ತಿದ್ದ ಗ್ರಾಮ ಸಹಾಯಕ ನವೀನ್ ಕುಮಾರ್‌ನನ್ನು ತಳ್ಳಿ, ಮೊಬೈಲ್ ಕಿತ್ತುಕೊಂಡು ವಿಡಿಯೋ ಡಿಲೀಟ್ ಮಾಡಿಸಿದ್ದಾರೆ. ಸರ್ಕಾರಿ ಕೆಲಸಕ್ಕೆ ಅಡ್ಡಿಪಡಿಸಿ, ಅವಾಚ್ಯವಾಗಿ ಪದಗಳಿಂದ ನಿಂದಿಸಿ, ಹಲ್ಲೆ ನಡೆಸಲು ಮುಂದಾಗಿದ್ದಲ್ಲದೆ ಕೊಲೆ ಬೆದರಿಕೆ ಹಾಕಿರುವ ಆರೋಪದಡಿ ಮಹಿಳಾ ಅಧಿಕಾರಿ ನೀಡಿದ ದೂರಿನನ್ವಯ ಮೈಸೂರು ದಕ್ಷಿಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಪ್ರಕರಣದ ಬಗ್ಗೆ ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ.

ಅಧಿಕಾರ ಹಸ್ತಾಂತರ ಗೊಂದಲಕ್ಕೆ ತೆರೆ

ಕರೆಯಲಾಗಿದೆ ಎಂದಿದ್ದಾರೆ. ಶಿವಕುಮಾರ್ ಮಾತು ಆಲಿಸಿದ ನಂತರ, ಮಲ್ಲಿಕಾರ್ಜುನ ಖರ್ಗೆ ಹಾಗೂ ಎಐಸಿಸಿ ರಾಜಕೀಯ ಕಾರ್ಯದರ್ಶಿ ಕೆ.ಸಿ.ವೇಣು ಗೋಪಾಲ್ ಸಮ್ಮುಖದಲ್ಲೇ, ಜಂಟಿ ಅಧಿವೇಶನ ಕಲಾಪ ಮುಗಿಯುತ್ತಿದ್ದಂತೆ ಅಧಿಕಾರ ಹಸ್ತಾಂತರ ಗೊಂದಲ ಪರಿಹರಿಸುತ್ತೇವೆ ಎಂಬ ಆಶ್ವಾಸನೆಯನ್ನು ರಾಹುಲ್ ನೀಡಿದ್ದಾರೆ. ಫೆಬ್ರವರಿ ಮೊದಲ ವಾರದಲ್ಲಿ ಎಲ್ಲದಕ್ಕೂ ಸ್ಪಷ್ಟ ಚಿತ್ರಣ ದೊರೆಯಲಿದ್ದು, ನೀವು ಅಸ್ಸಾಂ ಚುನಾವಣೆ ಕಡೆ ಗಮನ ಹರಿಸಿ ಎಂಬುದಾಗಿ ಶಿವಕುಮಾರ್ ಅವರಿಗೆ ಸೂಚಿಸಿದರು ಎನ್ನಲಾಗಿದೆ. ಈ ಬೆಳವಣಿಗೆ ನಂತರವೇ ಶಿವಕುಮಾರ್ ತಾವು, ಜನವರಿ 18ರಿಂದ ಕೈಗೊಳ್ಳಬೇಕಿದ್ದ ದಾವೋಸ್ ವಿದೇಶ ಪ್ರವಾಸ ರದ್ದು ಗೊಳಿಸಿದ್ದಾರೆ. ಅವರ ಹಿಂದಿನ ಕಾರ್ಯಕ್ರಮದಂತೆ ಜ.22 ಇಲ್ಲವೇ 27ಕ್ಕೆ ಹಿಂತಿರುಗಬೇಕಿತ್ತು. ರಾಹುಲ್ ಗಾಂಧಿ ಅವರಿಂದ ಸ್ಪಷ್ಟ ಭರವಸೆ ದೊರೆಯುತ್ತಿದ್ದಂತೆ ಪ್ರವಾಸ ರದ್ದು ಮಾಡಿದ್ದಾರೆ. ಪ್ರವಾಸ ರದ್ದು ಮಾಡಿರುವ ಬಗ್ಗೆ ಸ್ವತಃ ಪತ್ರಿಕಾ ಹೇಳಿಕೆ ನೀಡಿರುವ ಶಿವಕುಮಾರ್, ಜ.18ರಂದು ನಿಗದಿಯಾಗಿದ್ದ ವರ್ಲ್ಡ್ ಎಕನಾಮಿಕ್ ಫೋರಂ ಕಾರ್ಯಕ್ರಮದಲ್ಲಿ ತಾವು ಭಾಗವಹಿಸುತ್ತಿಲ್ಲ. ಬೆಂಗಳೂರು ಹಾಗೂ ನವದೆಹಲಿಯಲ್ಲಿ ಅಧಿಕೃತ ಕಾರ್ಯಕ್ರಮಗಳ ಹಿನ್ನೆಲೆಯಲ್ಲಿ ತಮ್ಮ ದಾವೋಸ್ ಪ್ರವಾಸ ರದ್ದು ಮಾಡಿರುವುದಾಗಿ ತಿಳಿಸಿದ್ದಾರೆ. ಶಿವಕುಮಾರ್ ದೆಹಲಿಗೆ ತೆರಳಿದ ದಿನವೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಕೆ.ಜೆ.ಜಾರ್ಜ್ ಅವರನ್ನು ರಾಷ್ಟ್ರ ರಾಜಧಾನಿಗೆ ಕಳುಹಿಸಿ ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡಿಸಿದ್ದರು. ಐದು ಮಂದಿಯನ್ನು ಕೈಬಿಟ್ಟು, ಏಳು ಮಂದಿಯನ್ನು ಮಂತ್ರಿ ಮಾಡಲು ಸಿದ್ದರಾಮಯ್ಯ ಅವರಿಗೆ ಅವಕಾಶ ನೀಡಿ ಎಂದು ಜಾರ್ಜ್ ವಕಾಲತ್ತು ವಹಿಸಿದ್ದರು.

ಶಿರಸ್ತೇದಾರರ ಅಮಾನತು

ಈ ಸಂಬಂಧ ಟೌನ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾದ ಹಿನ್ನೆಲೆಯಲ್ಲಿ ಪ್ರಕರಣ ಸಂಬಂಧ ಮಂಡ್ಯ ಜಿಲ್ಲಾಧಿಕಾರಿ, ನಾಗಮಂಗಲ ತಹಶೀಲ್ದಾರ್ ಹಾಗೂ ಪಾಂಡವಪುರ ಉಪವಿಭಾಗಾಧಿಕಾರಿಯಿಂದ ಪ್ರಾದೇಶಿಕ ಆಯುಕ್ತರು ವರದಿ ಪಡೆದಿದ್ದರು. ಈ ನಡುವೆ ಜಿಲ್ಲಾಧಿಕಾರಿ ಕುಮಾರ್, ಸರ್ಕಾರಿ ಜಮೀನು ಕಬಳಿಸುವ ಉದ್ದೇಶದಿಂದ ಖಾಸಗಿ ವ್ಯಕ್ತಿಗಳಿಗೆ ಕಂದಾಯ ದಾಖಲೆಗಳನ್ನು ತಿದ್ದುಪಡಿ ಮಾಡಿರುವ ಅಪರಾಧಿಕ ಕೃತ್ಯದಲ್ಲಿ ಭಾಗಿಯಾಗಿರುವ ದ್ವಿತೀಯ ದರ್ಜೆ ಸಹಾಯಕರಾದ ಹೆಚ್.ವಿ. ಸತೀಶ್, ಯೋಗೇಶ್, ಗುರುಮೂರ್ತಿ ಹಾಗೂ ವಿಜಯ್‌ಕುಮಾರ್ ಅವರನ್ನು ಅಮಾನತುಗೊಳಿಸಿ, ಇಬ್ಬರು ಶಿರಸ್ತೇದಾರರ ವಿರುದ್ಧ ಶಿಸ್ತು ಕ್ರಮಕ್ಕೆ ಶಿಫಾರಸು ಮಾಡಿದ್ದರು. ವರದಿ ಪರಿಶೀಲಿಸಿದ ಪ್ರಾದೇಶಿಕ ಆಯುಕ್ತರು, ಶಿರಸ್ತೇದಾರರಿಬ್ಬರೂ 48 ಗಂಟೆ ಅವಧಿಗೂ ಮೀರಿ ನ್ಯಾಯಾಂಗ ಬಂಧನದಲ್ಲಿದ್ದ ಕಾರಣ ಅವರನ್ನು ನಿಯಮಾನುಸಾರ ಅಮಾನತು ಮಾಡಿ, ಆದೇಶಿಸಿದ್ದಾರೆ. ಪ್ರಕರಣ ಸಂಬಂಧ ಜ.19ರೊಳಗೆ ಪೂರ್ಣ ವರದಿ ಸಲ್ಲಿಸುವಂತೆ ಉಪಲೋಕಾಯುಕ್ತ ನ್ಯಾಯಮೂರ್ತಿ ಬಿ.ವೀರಪ್ಪ, ಮಂಡ್ಯದ ಲೋಕಾಯುಕ್ತ ಅಧಿಕಾರಿಗಳಿಗೆ ಗಡುವು ನೀಡಿದ್ದಾರೆ.

ಬಗರ್‌ಹುಕುಂನ ಸಾಗುವಳಿ ಚೀಟಿ ನೀಡುವ ಮೂಲಕ ಸರ್ಕಾರಿ ಭೂಮಿಯನ್ನು ಅಕ್ರಮವಾಗಿ ಮಂಜೂರು ಮಾಡಿದ ದೂರಿನ ಮೇರೆಗೆ ಕಳೆದ ಬುಧವಾರ ತಾಲೂಕು ಕಚೇರಿ ಮೇಲೆ ದಾಳಿ ನಡೆಸಲಾಗಿತ್ತು. ಪರಿಶೀಲನೆ ವೇಳೆ ಹಾಜರಿದ್ದ ಐವರು ಅಧಿಕಾರಿಗಳನ್ನು ವಶಕ್ಕೆ ಪಡೆದು, ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಅದರಂತೆ 11 ಮಂದಿ ವಿರುದ್ಧ ಎಫ್‌ಐಆರ್ ದಾಖಲಿಸಿ, ಬಂಧಿಯ ಐವರನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿದಾಗ ಅವರನ್ನು 14 ದಿನಗಳ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿತ್ತು.

ಜನಾರ್ಧನ್ ರೆಡ್ಡಿ ಮನೆ ಬಳಿ ಫೈರಿಂಗ್ ಖಂಡಿಸಿ ಬಳ್ಳಾರಿಯಲ್ಲಿ ಬಿಜೆಪಿ ಬೃಹತ್ ಸಮಾವೇಶ
ಪ್ರಕರಣದ ಸಿಬಿಐ ತನಿಖೆ; ಭರತ್‌ರೆಡ್ಡಿ ಬಂಧನಕ್ಕೆ ಆಗ್ರಹ

ತಪ್ಪಿದರೆ ಬಳ್ಳಾರಿ-ಬೆಂಗಳೂರು ಪಾದಯಾತ್ರೆ ಎಚ್ಚರಿಕೆ

ಬಳ್ಳಾರಿ, ಜ.17– ಶಾಸಕ ಜನಾರ್ಧನ ರೆಡ್ಡಿ ಮನೆ ಬಳಿ ಜ.1ರಂದು ನಡೆದ ಫೈರಿಂಗ್ ಘಟನೆ ಖಂಡಿಸಿ ಬಿಜೆಪಿ ಶನಿವಾರ ಬಳ್ಳಾರಿಯಲ್ಲಿ ಬೃಹತ್ ಪ್ರತಿಭಟನಾ ಸಮಾವೇಶ ನಡೆಸಿ, ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸಬೇಕು ಎಂದು ಆಗ್ರಹಿಸಿತು.

ಬಲ ಪ್ರದರ್ಶನ ಮಾದರಿಯಲ್ಲಿ ನಡೆದ ಸಮಾವೇಶದಲ್ಲಿ ಬಿಜೆಪಿ ನಾಯಕರು ಆಡಳಿತಾರೂಢ ಕಾಂಗ್ರೆಸ್ ವಿರುದ್ಧ ಹರಿಹಾಯ್ದು, ಫೈರಿಂಗ್ ಘಟನೆಯನ್ನು ಸಿಬಿಐ ತನಿಖೆಗೆ ವಹಿಸಬೇಕು ಹಾಗೂ ಕಾಂಗ್ರೆಸ್ ಶಾಸಕ ಭರತ್ ರೆಡ್ಡಿ ಮತ್ತವರ ಆಪ್ತ ಸತೀಶ್ ರೆಡ್ಡಿಯನ್ನು ಬಂಧಿಸಬೇಕು ಎಂದು ಒತ್ತಾಯಿಸಿದರು.

ಕಾಂಗ್ರೆಸ್ ಹಿಂದುಳಿದ ವರ್ಗ ವಿರೋಧಿ: ಸಮಾವೇಶವನ್ನುದ್ದೇಶಿಸಿ ಮಾತನಾಡಿದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಕಾಂಗ್ರೆಸ್ ಸರ್ಕಾರ ಹಿಂದುಳಿದ ವರ್ಗದ ವಿರೋಧಿಯಾಗಿದೆ. ರಾಜ್ಯದಲ್ಲಿನ ಪೊಲೀಸ್ ವ್ಯವಸ್ಥೆ ಸಂಪೂರ್ಣ ಕುಸಿದಿದೆ. ಪೊಲೀಸ್ ಠಾಣೆಗಳನ್ನು ಕಾಂಗ್ರೆಸ್ ಪಕ್ಷದ ಕಚೇರಿಗಳನ್ನಾಗಿ ಮಾಡಿಕೊಳ್ಳಲಾಗಿದೆ ಎಂದು ಆರೋಪಿಸಿದ ವಿಜಯೇಂದ್ರ ಬಳ್ಳಾರಿ ಘಟನೆ ಖಂಡಿಸಿ ಶ್ರೀ ರಾಮುಲು ಮತ್ತು ಜನಾರ್ಧನ ರೆಡ್ಡಿ ಅವರು ಬಳ್ಳಾರಿಯಿಂದ ಬೆಂಗಳೂರಿಗೆ ಪಾದಯಾತ್ರೆ ಮಾಡಲು ಬಯಸಿದ್ದಾರೆ. ಈ ವಿಷಯವನ್ನು ಕೇಂದ್ರದ ನಾಯಕರಿಗೆ ತಿಳಿಸಿ ಮುಂದಿನ ದಿನದಲ್ಲಿ ಈ ಕುರಿತು ಅಂತಿಮ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದು ತಿಳಿಸಿದರು.

ನಮಗೆ ನ್ಯಾಯದ ನಿರೀಕ್ಷೆ ಇಲ್ಲ: ಪ್ರತಿಪಕ್ಷದ ನಾಯಕ ಆರ್.ಅಶೋಕ್ ಮಾತನಾಡಿ, ರಾಜ್ಯದಲ್ಲಿ ಗೃಹ ಸಚಿವರು ಕೇವಲ ವಿಧಾನಸಭೆಯಲ್ಲಿ ಉತ್ತರ ನೀಡಲು ಮಾತ್ರವಷ್ಟೇ ಸೀಮಿತವಾಗಿದ್ದಾರೆ. ಬಿಗಿ ಆಡಳಿತ ಇಲ್ಲದ ಕಾರಣ ರಾಜ್ಯದಲ್ಲಿ ಕಾನೂನು ವ್ಯವಸ್ಥೆ ಸಂಪೂರ್ಣ ಕುಸಿದಿದೆ ಗುಂಡು ಹಾರಿಸಿದ್ದು ಕಾಂಗ್ರೆಸ್‌ನವರು ಎಂಬ ಕಾರಣಕ್ಕೆ ಅವರನ್ನು ಬಂಧಿಸಿಲ್ಲ. ಏನಾದರೂ ಬಿಜೆಪಿಯವರಾಗಿದ್ದರೆ ಇಷ್ಟೊತ್ತಿಗೆ ನೂರಾರು ಜನರ ಬಂಧನವಾಗಿರುತ್ತಿತ್ತು. ಕಾಂಗ್ರೆಸ್‌ನಿಂದ ನಮಗೆ ನ್ಯಾಯದ ನಿರೀಕ್ಷೆ ಇಲ್ಲ. ಪೊಲೀಸರೂ ನ್ಯಾಯ ಒದಗಿಸಲು ಸಂಪೂರ್ಣ ವಿಫಲರಾಗಿದ್ದಾರೆ. ಬಳ್ಳಾರಿಯಲ್ಲಿ ಯಾವುದೇ ಅಭಿವೃದ್ಧಿ ಇಲ್ಲ. ಬಳ್ಳಾರಿಯನ್ನೇ ಸುಡುತ್ತೇನೆ ಎಂದು ಬಹಿರಂಗವಾಗಿ ಬೆದರಿಕೆ ಹಾಕಿದ ಶಾಸಕನಿಗೆ ಡಿಸಿಎಂ ಡಿ.ಕೆ.ಶಿವಕುಮಾರ್ ಅವರ ಬೆಂಬಲ ಇದೆ ಎನ್ನಲಾಗುತ್ತಿದೆ. ಇಂತಹವರಿಗೆ ಜನರೇ ಸರಿಯಾದ ಬುದ್ಧಿ ಕಲಿಸಬೇಕು ಎಂದರು.

ಗೂಂಡಾ ವರ್ತನೆ: ವಿಧಾನ ಪರಿಷತ್ ಪ್ರತಿ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಮಾತನಾಡಿ, ರಾಜ್ಯದಲ್ಲಿರುವ ಕಾಂಗ್ರೆಸ್ ಸರ್ಕಾರ ಗೂಂಡಾ ವರ್ತನೆ ನಡೆಸುತ್ತಿದೆ. ಇದರ ಮುಖವಾಡ ಜನತೆ ಮುಂದೆ ಕಳಚುವುದು ನಿಶ್ಚಿತ. ಬಳ್ಳಾರಿ ಮಾತ್ರವಲ್ಲ ಇಡೀ ರಾಜ್ಯದಲ್ಲಿ ಕಾನೂನು ವ್ಯವಸ್ಥೆ ಹದಗೆಟ್ಟಿದೆ. ತನ್ನ ತಪ್ಪನ್ನು ಅರಿತುಕೊಳ್ಳದೆ ಸರ್ಕಾರ ದುಂಡಾ ವರ್ತನೆ ತೋರುತ್ತಿರುವುದು ದುರಂತ.

ಸಂಸದ ಬಸವರಾಜ್ ಬೊಮ್ಮಾಯಿ ಮಾತನಾಡಿ, ಬಳ್ಳಾರಿಯಲ್ಲಿ ಶ್ರೀರಾಮುಲು ವೇಗ ಮತ್ತು ಜನಾರ್ಧನರೆಡ್ಡಿ ಶಕ್ತಿ ಒಂದಾಗಿರುವುದನ್ನು ಸಹಿಸಲಾಗದೆ ಅವರ ಮನೆ ಬಳಿ ಫೈರಿಂಗ್ ಮಾಡಿ, ಗಲಾಟೆ ನಡೆಸಲಾಗಿದೆ. ರಾಜ್ಯದಲ್ಲಿ ಅಧಿಕಾರಿಗಳಿಗೆ ಮಾತ್ರವಲ್ಲದೆ ಜನಪ್ರತಿನಿಧಿಗಳಿಗೂ ಭದ್ರತೆ ಇಲ್ಲದಂತಾಗಿದೆ. ಕಾರ್ಯಕರ್ತರೇ ಕಾಂಗ್ರೆಸ್ ವಿರುದ್ಧ ನಾವು ಸಡ್ಡು ಹೊಡೆದು ಸಂಘರ್ಷಕ್ಕೆ ಇಳಿಯುವುದು ಅನಿವಾರ್ಯವಾಗುತ್ತದೆ ಎಂದರು.



ಜ.1ರಂದು ನಡೆದ ಫೈರಿಂಗ್ ಘಟನೆ ಖಂಡಿಸಿ ಬಿಜೆಪಿ ಶನಿವಾರ ಬಳ್ಳಾರಿಯಲ್ಲಿ ಬೃಹತ್ ಪ್ರತಿಭಟನಾ ಸಮಾವೇಶ ನಡೆಸಿತು.

ಭರತ್ ರೆಡ್ಡಿಗೆ ರೆಡ್ಡಿ ದಂಪತಿ ಸವಾಲು

ಬಳ್ಳಾರಿ: ನಿನ್ನಂತಹ ಸಾವಿರಾರು ಭರತ್ ರೆಡ್ಡಿಗಳು ಬಂದರೂ ನನ್ನ ಪತಿಯನ್ನು ಏನೂ ಮಾಡಲು ಸಾಧ್ಯವಿಲ್ಲ ಎಂದು ಶಾಸಕ ಜನಾರ್ಧನರೆಡ್ಡಿ ಪತ್ನಿ ಅರುಣಾಲಕ್ಷ್ಮೀ ಸವಾಲು ಹಾಕಿದರು. ಪ್ರತಿಭಟನಾ ಸಮಾವೇಶದಲ್ಲಿ ಮಾತನಾಡಿದ ಅವರು, ನಿನ್ನ ವಯಸ್ಸಿನ ಎಷ್ಟೋ ನಾಯಕರನ್ನು ಜನಾರ್ದನ ರೆಡ್ಡಿ ಬೆಳೆಸಿದ್ದಾರೆ. ಇಬ್ಬರ ಜಗಳದಲ್ಲಿ ಮೂರನೆಯವನಿಗೆ ಲಾಭ ಎನ್ನುವಂತೆ ನೀನು ಶಾಸಕನಾಗಿದ್ದೀಯಾ ಅಷ್ಟೆ ಎಂದರು.

ಹಸಿವಿನ ಬೆಲೆ ತಿಳಿಯದ ನೀನೊಬ್ಬ ಅಹಂಕಾರಿ. ಇಡೀ ಬಳ್ಳಾರಿಯನ್ನು ಮಟ್ಕಾ ಮತ್ತು ಜೂಜಾಟದ ಅಡ್ಡೆಯನ್ನಾಗಿ ಮಾಡಲು ನೀನು ಪಣ ತೊಟ್ಟಿದ್ದೀಯಾ. ಅಮಾಯಕರ ಶಾಪ ನಿನಗೆ ತಟ್ಟಿಯೇ ತೀರುತ್ತದೆ. ಸರ್ಕಾರ ತಕ್ಷಣವೇ ಭರತ್ ರೆಡ್ಡಿಯನ್ನು ಬಂಧಿಸಿ, ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಬೇಕು ಎಂದು ಆಗ್ರಹಿಸಿದರು.

ಇದೇ ವೇಳೆ ಜನಾರ್ಧನ ರೆಡ್ಡಿ, ಕಾಂಗ್ರೆಸ್‌ನ ಕ್ರಿಮಿನಲ್‌ಗಳು ನನ್ನನ್ನು ನಾಲ್ಕು ವರ್ಷ ಜೈಲಿನಲ್ಲಿಟ್ಟರೂ ನನ್ನನ್ನು ಮುಗಿಸಲು ಸಾಧ್ಯವಾಗಲಿಲ್ಲ. ಈಗ ನನ್ನ ಮನೆ ಮೇಲೆ ದಾಳಿ ನಡೆಸಿ, ಹಿಂಸೆಗೆ ಪ್ರಚೋದನೆ ನೀಡುತ್ತಿದ್ದಾರೆ. ಶಾಸಕ ಭರತ್ ರೆಡ್ಡಿ ಅವರೊಂದಿಗೆ ಎಎಸ್‌ಪಿ ರವಿಕುಮಾರ್ ಮತ್ತು ಡಿವೈಎಸ್‌ಪಿ ನಂದಾರೆಡ್ಡಿ ಸೇರಿಕೊಂಡು ನನ್ನ ಮನೆಯ ಮೇಲೆ ದಾಳಿ ನಡೆಸಲು ಪ್ರಚೋದನೆ ನೀಡಿದ್ದಾರೆ. ಸಿಎಂ ಸಿದ್ದರಾಮಯ್ಯ ಅವರೇ, ನೀವು ಕುರ್ಚಿಯಿಂದ ಇಳಿಯುವ ಮುನ್ನ ಭರತ್ ರೆಡ್ಡಿಯನ್ನು ಬಂಧಿಸಿ ನಿಮ್ಮ ಘನತೆ ಉಳಿಸಿಕೊಳ್ಳಿ ಎಂದು ಸವಾಲು ಹಾಕಿದರು.

ಒಂದು ವೇಳೆ ಪ್ರಕರಣವನ್ನು ಸಿಬಿಐಗೆ ವಹಿಸಿ, ಶಾಸಕರನ್ನು ಬಂಧಿಸದಿದ್ದರೆ ಬಳ್ಳಾರಿಯಿಂದ ಬೆಂಗಳೂರಿಗೆ ಬೃಹತ್ ಪಾದಯಾತ್ರೆ ಹಮ್ಮಿಕೊಳ್ಳುವುದಾಗಿ ಎಚ್ಚರಿಸಿದರು.

ವೀರಶೈವ ಲಿಂಗಾಯತ ಸಂಪ್ರದಾಯದಂತೆ ಭೀಮಣ್ಣ ಖಂಡ್ರೆ ಅಂತ್ಯಕ್ರಿಯೆ



ಭಾಲ್ಕಿ (ಬೀದರ್ ಜಿಲ್ಲೆ): ವೀರಶೈವ ಲಿಂಗಾಯತ ಸಂಪ್ರದಾಯದ ಪ್ರಕಾರ ಮಾಜಿಸಚಿವ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭೆಯ ಮಾಜಿ ಅಧ್ಯಕ್ಷ ಭೀಮಣ್ಣ ಖಂಡ್ರೆ (102) ಅವರ ಅಂತ್ಯಕ್ರಿಯೆ ಶನಿವಾರ ಪಟ್ಟಣ ಹೊರವಲಯದ ಚಿಕ್ಕಲ್ ಚಾಂದ ಸಮೀಪದ ತೋಟದ ಮನೆಯ ಶಾಂತಿಧಾಮದಲ್ಲಿ ನೆರವೇರಿತು.

ಪತ್ನಿ ದಿವಂಗತ ಲಕ್ಷ್ಮೀಬಾಯಿ ಅವರ ಸಮಾಧಿಯ ಬಳಿಯೇ ಭೀಮಣ್ಣ ಅವರ ಅಂತ್ಯಕ್ರಿಯೆ ನೆರವೇರಿಸಲಾಯಿತು.

ವಿಭೂತಿ, ಪತ್ರಿ, ಹೂ, ರುದ್ರಾಕ್ಷಿಯೊಂದಿಗೆ ವೀರಶೈವ ಲಿಂಗಾಯತ ಸಂಪ್ರದಾಯದ ಪ್ರಕಾರ ಸಮಾಧಿ ಮಾಡಲಾಯಿತು. ಇದಕ್ಕೂ ಮುನ್ನ ವಚನ ಪಠಣ ಮಾಡಿ, ಮಂತ್ರಘೋಷ ಗಳೊಂದಿಗೆ ಮೂರು ಸುತ್ತು ಗಾಳಿಯಲ್ಲಿ ಗುಂಡು ಹಾರಿಸಿ ಸರ್ಕಾರಿ ಗೌರವಗಳೊಂದಿಗೆ ಅಂತ್ಯಕ್ರಿಯೆ ಜರುಗಿತು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಮಾಧಿ ಸ್ಥಳದಲ್ಲಿ ಐದು ವಿಭೂತಿ ಇರಿಸಿ ಅಂತ್ಯಕ್ರಿಯೆಯ ವಿಧಿ ವಿಧಾನಗಳಿಗೆ ಚಾಲನೆ ಕೊಟ್ಟರು.

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ, ಸಚಿವರಾದ ಈಶ್ವರ ಬಿ. ಖಂಡ್ರೆ, ಕೆ.ಜೆ. ಜಾರ್ಜ್, ಎಚ್.ಕೆ. ಪಾಟೀಲ್, ಲಕ್ಷ್ಮೀ ಹೆಬ್ಬಾಳಕರ್, ಶರಣಪ್ರಕಾಶ ಪಾಟೀಲ್, ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ವಿವಿಧ ಮಠಾಧೀಶರು, ರಾಜಕೀಯ ಪಕ್ಷಗಳು, ಸಂಘ ಸಂಸ್ಥೆಗಳ ಮುಖಂಡರು ಪಾಲ್ಗೊಂಡಿದ್ದರು.

ಇದಕ್ಕೂ ಮುನ್ನ ಭಾಲ್ಕಿ ಪಟ್ಟಣದಲ್ಲಿ ಅಲಂಕರಿಸಿದ ವಾಹನದಲ್ಲಿ ಪಾರ್ಥೀವ ಶರೀರದ ಮೆರವಣಿಗೆ ಮಾಡಲಾಯಿತು. ಮಾರ್ಗದುದ್ದಕ್ಕೂ ಜನ ಹೂಮಳೆಗರೆದು ಗೌರವ ಸಲ್ಲಿಸಿದರು.

ಇಂದು ತಂಗುದಾಣ ಉದ್ಘಾಟನೆ

ಮೈಸೂರು, ಜ.17– ಮೈಸೂರಿನ ಹೆಬ್ಬಾಳದ ಅಂಬರೀಶ್ ರಸ್ತೆ, ಡಿ.ಮಾದೇಗೌಡ ವೃತ್ತದಲ್ಲಿ ರವಿ ಸ್ನೇಹ ಬಳಗ ಸೇವಾ ಟ್ರಸ್ಟ್ ವತಿಯಿಂದ ನಿರ್ಮಿಸಿರುವ ಬಸ್ ತಂಗುದಾಣವನ್ನು ಭಾನುವಾರ(ಜ.18) ಸಂಜೆ 4ಕ್ಕೆ ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಹಾಗೂ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಉದ್ಘಾಟಿಸಲಿದ್ದು, ಟ್ರಸ್ಟ್ ಅಧ್ಯಕ್ಷರಾದ ಶ್ರೀಮತಿ ದಿವ್ಯ, ಮುಖಂಡ ಆರ್.ರವಿ(ಡೆಲ್ಲಿ) ಮತ್ತಿತರರು ಉಪಸ್ಥಿತರಿರಲಿದ್ದಾರೆ.

ಅನಿವಾಸಿ ಭಾರತೀಯರ ಪೈಕಿ ಕಟ್ಟಾ ಬಲಪಂಥೀಯರು, ಹಿಂದುತ್ವವಾದಿಗಳಿಂದ ವಿದೇಶಗಳಲ್ಲೂ ಜಾತಿ ತಾರತಮ್ಯ

ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಆಯೋಗದ ವಿಶೇಷ ವರದಿಗಾರ್ತಿ ಡಾ.ಕೆ.ಪಿ.ಅಶ್ವಿನಿ ಬೇಸರ

ಮೈಸೂರು,ಜ.17(ಪಿಎಂ)– ಅನಿವಾಸಿ ಭಾರತೀಯರ ಪೈಕಿ ಕಟ್ಟಾ ಬಲಪಂಥೀಯರು ಮತ್ತು ಹಿಂದುತ್ವವಾದಿಗಳು ವಿದೇಶಗಳಲ್ಲೂ ಜಾತಿ ತಾರತಮ್ಯ ಮುಂದುವರೆಸಿದ್ದಾರೆ ಎಂದು ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಆಯೋಗದ ವಿಶೇಷ ವರದಿಗಾರ್ತಿ ಡಾ.ಕೆ.ಪಿ.ಅಶ್ವಿನಿ ಬೇಸರ ವ್ಯಕ್ತಪಡಿಸಿದರು.

ಮೈಸೂರು ರಂಗಾಯಣದ ಬಹುರೂಪಿ ರಾಷ್ಟ್ರೀಯ ನಾಟಕೋತ್ಸವ ಪ್ರಯುಕ್ತ ಕಲಾಮಂದಿರದ ಕಿರುರಂಗ ಮಂದಿರದಲ್ಲಿ ಹಮ್ಮಿಕೊಂಡಿರುವ ಎರಡು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಮೊದಲ ದಿನವಾದ ಶನಿವಾರ ಎರಡನೇ ಗೋಷ್ಠಿಯಲ್ಲಿ 'ಜಾಗತಿಕ ಮತ್ತು ಸ್ಥಳೀಯ ಸಾಮಾಜಿಕ ಅಸಮಾನತೆಗಳ ನಿರ್ಮೂಲನೆ ; ಸವಾಲುಗಳು ಮತ್ತು ವಿದ್ಯಮಾನಗಳು' ಕುರಿತು ಅವರು ವಿಚಾರ ಮಂಡಿಸಿದರು.

ಹಿಂದೂಗಳು ಎಲ್ಲಿ ಹೋದರು ಜಾತಿ ತೆಗೆದುಕೊಂಡು ಹೋಗುತ್ತಾರೆ ಎಂದು ಬಾಬಾ ಸಾಹೇಬ್ ಅಂಬೇಡ್ಕರ್ ಹೇಳುವಂತೆ ವಿದೇಶಗಳಲ್ಲಿ ಸಹ ಜಾತಿ ತಾರತಮ್ಯ ಮುಂದುವರೆಸಲಾಗುತ್ತಿದೆ. ಯುಕೆಯಲ್ಲಿ ಕೂಡ ಸಮಾನತೆ ಕಾಯ್ದೆಯಲ್ಲಿ ಜಾತಿ ತಾರತಮ್ಯದ ವಿರುದ್ಧ ಕ್ರಮದ ಅಂಶ ಸೇರ್ಪಡೆಯಾಗಬೇಕೆಂಬ ಹೋರಾಟ ನಡೆದಿದೆ. ಯುಎಸ್‌ನಲ್ಲಿ ಕಳೆದ ಎರಡು ವರ್ಷಗಳಿಂದ ಜಾತಿ ತಾರತಮ್ಯದ ಬಗ್ಗೆ ಸಂಘಟನೆಯೊಂದು ಸರ್ವೇ ಮಾಡಿದ್ದು, ಜಾತಿ ವ್ಯವಸ್ಥೆಯ ವಿವಿಧ ಆಚರಣೆಗಳನ್ನು ದಾಖಲೀಕರಣ ಮಾಡಿದೆ ಎಂದರು.


ಕ್ಯಾಲಿಫೋರ್ನಿಯಾ ಸ್ಟೇಟ್‌ನಲ್ಲಿ ಜಾತಿ ತಾರತಮ್ಯದ ವಿರುದ್ಧ ಕಾನೂನು ಜಾರಿಗೊಳಿಸಲು ಮಸೂದೆಯನ್ನು ಚರ್ಚೆಗೆ ಇಡಲಾಗಿತ್ತು. ದುರದೃಷ್ಟವಶಾತ್ ಮಸೂದೆಯನ್ನು ಗೌರ್ನರ್, ವೀಟೋ (ನಿರಾಕರಣೆ) ಪ್ರಕ್ರಿಯೆ ಮುಂದಿಟ್ಟರು. 10 ತಿಂಗಳ ಈ ಪ್ರಕ್ರಿಯೆಯಲ್ಲಿ ಅಲ್ಲಿದ್ದ ಬಲಪಂಥೀಯ ಭಾರತೀಯರು, ಹಿಂದುತ್ವ ಪ್ರತಿಪಾದಕರು ಮಸೂದೆ ವಿರುದ್ಧ ಹೋರಾಟ ಮಾಡಿದರು. ಹಣ ಸೇರಿದಂತೆ ತಮ್ಮ ಬಳಿ ಇದ್ದ ಎಲ್ಲಾ ರೀತಿಯ ಸಂಪನ್ಮೂಲ ಬಳಸಿ ಮಸೂದೆ ಅಂಗೀಕಾರ ಆಗದಂತೆ ನೋಡಿಕೊಂಡರು. ಈ ಕಾನೂನು ಆದಲ್ಲಿ ದುರ್ಬಳಕೆಯಾಗುತ್ತದೆ ಎಂಬ ವಾದ ಮುಂದಿಟ್ಟರು ಎಂದ ಅವರು, ಆಗಿದ್ದಲ್ಲಿ ಉಳಿದ ಯಾವುದೇ ಕಾನೂನುಗಳು ದುರ್ಬಳಕೆ ಆಗುವುದಿಲ್ಲವೇ? ಎಂದು ಪ್ರಶ್ನಿಸಿದರು.

ಭಾರತದಲ್ಲಿನ ಜಾತಿ ತಾರತಮ್ಯದ ವಿರುದ್ಧ ತಮ್ಮ ಹೋರಾಟದ ಭಾಗವಾಗಿ 1946ರಲ್ಲಿ ಬಾಬಾ ಸಾಹೇಬರು ಡುಬೋಯಿಸ್ ಎಂಬುವರಿಗೆ ಪತ್ರ ಬರೆದಿದ್ದರು. ಅಂದರೆ ಅಸ್ಪೃಶ್ಯತೆ ಹಾಗೂ ಜಾತಿ ತಾರತಮ್ಯದ ಬಗ್ಗೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಚರ್ಚಿಸಿ ಪರಿಹಾರ ಕಂಡುಕೊಳ್ಳಬೇಕು ಎಂದು ಸ್ವಾತಂತ್ರ್ಯಪೂರ್ವದಲ್ಲೇ ಅಂಬೇಡ್ಕರ್ ಆಲೋಚನೆ ಮಾಡಿದ್ದರು ಎಂದರು.

1960ರಲ್ಲಿ ಯೂರೋಪ್‌ನಲ್ಲಿ ಜನಾಂಗೀಯ ತಾರತಮ್ಯದ ಘಟನೆಗಳು ಹೆಚ್ಚಾಗಿ ನಡೆಯುತ್ತವೆ. ಆಗ ವಿಶ್ವಸಂಸ್ಥೆಯಲ್ಲಿ ಜನಾಂಗೀಯ ತಾರತಮ್ಯದ ಬಗ್ಗೆ ಕಾನೂನು ಇರಬೇಕೆಂದು ಆಲೋಚನೆ ಮುನ್ನಲೆಗೆ ಬರುತ್ತದೆ. ಎಲ್ಲಾ ರೀತಿಯ ಜನಾಂಗೀಯ ತಾರತಮ್ಯವನ್ನು ನಿರ್ಮೂಲನೆ ಸಂಬಂಧ ಕರಡು ರಚನೆ ಮಾಡಲಾಗುತ್ತದೆ. ಬಹಳಷ್ಟು ದೇಶಗಳು ಸಹಕಾರ ನೀಡುತ್ತವೆ. ಸಾಮಾಜಿಕ ಹಿನ್ನೆಲೆ ತಾರತಮ್ಯ ಸಹ ಇಲ್ಲಿ ಸೇರಿರುತ್ತದೆ. ಅಂದಿನ ರಾಜತಾಂತ್ರಿಕ ಕೆ.ಸಿ.ಪಂತ್ ಅವರು ದಲಿತ ಸಮುದಾಯ ಸಂಬಂಧ ಭಾರತದಲ್ಲಿ ತಾರತಮ್ಯ ಇದೆ ಎಂದು ಭಾರತದ ಪರವಾಗಿ ಸಹಿ ಸಹ ಮಾಡಿದ್ದರು. ಅದಾಗ್ಯೂ, ಯಾವುದೇ ಅಂತಾರಾಷ್ಟ್ರೀಯ ಕಾನೂನು ನೋಡಿದಾಗ, ಅಧಿಕೃತವಾಗಿ ಜಾತಿ ಪದ ಇಲ್ಲವಾಗಿದೆ ಎಂದು ವಿವರಿಸಿದರು.

ಈ ಸಂಬಂಧ 1980ರಿಂದ ನಾಗರಿಕ ಸಮಾಜ, ಚಳುವಳಿಗಾರರು, ಚಿಂತಕರು ಜಾತಿ ಪದ ಸೇರಿಸಬೇಕೆಂಬ ನಿಟ್ಟಿನಲ್ಲಿ ಹೋರಾಟ ಮಾಡುತ್ತಿದ್ದಾರೆ. ಆ ಹೋರಾಟ ನೋಡಿದಾಗ, ದೇಶದಲ್ಲಿ ಈಗಿನ ಸರ್ಕಾರ ಅಷ್ಟೇ ಅಲ್ಲ. ಕಳೆದ 40 ವರ್ಷಗಳಿಂದಲೂ ಯಾವುದೇ ಪಕ್ಷ ಅಧಿಕಾರಕ್ಕೆ ಬಂದರೂ ಜಾತಿ ತಾರತಮ್ಯ ದೇಶಿಯ ಸಮಸ್ಯೆಯಾಗಿದ್ದು, ಅದನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಸೇರಿಸಬೇಕಿರುವ ಅವಶ್ಯಕತೆ ಇಲ್ಲವೆಂದು ಅಧಿಕೃತ ನಿಲುವು ಹೊಂದುತ್ತಲೇ ಬಂದಿವೆ. ಈ ಸಂಬಂಧ 2001ರಲ್ಲಿ ನಡೆದ ಅಂತಾರಾಷ್ಟ್ರೀಯ ಸಮಾವೇಶದಲ್ಲೂ ಜನಾಂಗೀಯ ಹಾಗೂ ಜಾತಿ ತಾರತಮ್ಯ ಒಂದೇ ಅಲ್ಲ ಎಂಬುದು ಅಂದಿನ ಭಾರತ ಸರ್ಕಾರದ ನಿಲುವಾಗಿತ್ತು. ಈ ಎರಡರ ನಡುವೆ ಸಾಮ್ಯತೆ ಇದೆ ಎಂದು ಎಷ್ಟೇ ಒತ್ತಡ ತಂದರೂ ಪ್ರಯೋಜನವಾಗಲಿಲ್ಲ. ವಿಶ್ವಸಂಸ್ಥೆಯ ವಿಶೇಷ ವರದಿಗಾರರ ಪರಿಶ್ರಮದ ಫಲವಾಗಿ ಜಾತಿ ತಾರತಮ್ಯದ ವಿರುದ್ಧ ಡೀಸೆಂಟ್ ಅಡಿಯಲ್ಲಿ ಮಾತನಾಡಲು ಈಗ ಅವಕಾಶವಾಗಿದೆ ಎಂದು ಹೇಳಿದರು.

'ಫ್ಯಾಸಿಸಂ ವಿರುದ್ಧ ಪ್ರತಿರೋಧ'ದ ಸಂಕೇತವಾದ ಸಂವಿಧಾನ' ಕುರಿತು ಪ್ರಗತಿಪರ ಚಿಂತಕ ಡಾ.ಹೆಚ್.ವಿ.ವಾಸು ವಿಚಾರ ಮಂಡಿಸಿದರು. ಮೈಸೂರು ವಿವಿ ಹಿರಿಯ ಪ್ರಾಧ್ಯಾಪಕ ಪ್ರೊ.ಆನಂದ್ ಅಧ್ಯಕ್ಷತೆ ವಹಿಸಿದ್ದರು.



ಮೈಸೂರಿನ ಕಲಾಮಂದಿರದ ಕಿರುರಂಗ ಮಂದಿರದಲ್ಲಿ ಬಹುರೂಪಿ ನಾಟಕೋತ್ಸವ ಪ್ರಯುಕ್ತ ವಿಚಾರ ಸಂಕಿರಣದ 2ನೇ ಗೋಷ್ಠಿ ಶನಿವಾರ ನಡೆಯಿತು.

ಉದ್ಬೂರಿನಲ್ಲಿ ಲಕ್ಷ್ಮೀ ನಾರಾಯಣ ಸ್ವಾಮಿ ಜಾತ್ರಾ ಮಹೋತ್ಸವ ಸಂಪನ್ನ



ಉದ್ಬೂರು ಜಾತ್ರೆಯಲ್ಲಿ ಲಕ್ಷ್ಮೀನಾರಾಯಣ–ಈಶ್ವರ ದೇವರ ಉತ್ಸವ ಜರುಗಿತು.


ಮೈಸೂರು, ಜ.17– ತಾಲೂಕಿನ ಉದ್ಬೂರು ಗ್ರಾಮದಲ್ಲಿ ಲಕ್ಷ್ಮೀನಾರಾಯಣ ಸ್ವಾಮಿ ಜಾತ್ರಾ ಮಹೋತ್ಸವ ವಿಜೃಂಭಣೆಯಿಂದ ನಡೆಯಿತು.

ಶುಕ್ರವಾರ ರಾತ್ರಿ ಲಕ್ಷ್ಮೀ ನಾರಾಯಣ ಸ್ವಾಮಿ ಮತ್ತು ಈಶ್ವರ ದೇವರ ಉತ್ಸವ ಮೂರ್ತಿಗಳಿಗೆ ವಿಶೇಷ ಪೂಜೆ ಸಲ್ಲಿಸಿ, ಗ್ರಾಮದಲ್ಲಿ ಅದ್ಧೂರಿ ಮೆರವಣಿಗೆ ನಡೆಸಲಾಯಿತು. ಇದೇ ವೇಳೆ ಪಂಜಿನ ಸೇವೆಯೊಂದಿಗೆ ಗ್ರಾಮದ ವೃತ್ತದಲ್ಲಿ ಮದ್ದು ಗುಂಡುಗಳನ್ನು ಸಿಡಿಸಲಾಯಿತು. ಸಾಂಸ್ಕೃತಿಕ ಕಲಾ ತಂಡಗಳು ಮೆರವಣಿಗೆಯ ಮೆರಗು ಹೆಚ್ಚಿಸಿದ್ದವು.

ದೇವಾಲಯವನ್ನು ವಿವಿಧ ಹೂವುಗಳಿಂದ ಶೃಂಗರಿಸಲಾಗಿತ್ತು. ದೇವಾಲಯ ಆವರಣದಲ್ಲಿ ವೆಂಕಟೇಶ್ವರ ಸ್ವಾಮಿಯ ಬೃಹತ್ ಫೋಟೋ ಪ್ರತಿಷ್ಠಾಪಿಸಲಾಗಿತ್ತು. ಗ್ರಾಮವು ಜಗಮಗಿಸುವ ವಿಶೇಷ ವಿದ್ಯುತ್ ದೀಪಾಲಂಕಾರದಿಂದ ಕಂಗೊಳಿಸುತ್ತಿತ್ತು. ಮಕರ ಸಂಕ್ರಾಂತಿ ಹಬ್ಬದ ದಿನ ಗ್ರಾಮಸ್ಥರೆಲ್ಲಾ ಸೇರಿ ಲಕ್ಷ್ಮೀ ನಾರಾಯಣಸ್ವಾಮಿಗೆ ಕಜ್ಜಾಯ ಸೇವೆ ನೈವೇದ್ಯ ಅರ್ಪಿಸುವುದರೊಂದಿಗೆ ವಿಶೇಷ ಪೂಜೆ ಸಲ್ಲಿಸಿದ್ದರು.

ಶುಕ್ರವಾರ ಪ್ರಾರಂಭವಾದ ಮೆರವಣಿಗೆ ಶನಿವಾರ ಸಂಜೆ ಸಂಪನ್ನಗೊಂಡಿತು. ನಂತರ ಗ್ರಾಮದ ಸರ್ಕಾರಿ ಪ್ರೌಢಶಾಲೆ ಆವರಣದಲ್ಲಿ ಆಯೋಜಿಸಿದ್ದ 32 ಜೋಡಿ ಕುಸ್ತಿ ಪಂದ್ಯಾವಳಿಗೆ ಶಾಸಕ ಜಿ.ಟಿ.ದೇವೇಗೌಡರು ಚಾಲನೆ ನೀಡಿ, ಪಂದ್ಯ ವೀಕ್ಷಿಸಿದರು. ವಿಜೇತ ಪೈಲ್ವಾನರಿಗೆ ನಗದು ಬಹುಮಾನ ಹಾಗೂ ಸ್ಮರಣಿಕೆ ನೀಡಿ, ಅಭಿನಂದಿಸಿದರು.

ಶಾಸಕರಾದ ಜಿ.ಟಿ.ದೇವೇಗೌಡ ಹಾಗೂ ಹುಣಸೂರು ಶಾಸಕ ಜಿ.ಡಿ.ಹರೀಶ್‌ಗೌಡ ದೇವಾಲಯಕ್ಕೆ ತೆರಳಿ ವಿಶೇಷ ಪೂಜೆ ಸಲ್ಲಿಸಿದರು. ಜಾತ್ರಾ ಮಹೋತ್ಸವದಲ್ಲಿ ಸಾವಿರಾರು ಭಕ್ತರು ಪಾಲ್ಗೊಂಡು ಪುನೀತರಾದರು. ವೃತ್ತ ನಿರೀಕ್ಷಕ ಶಿವನಂಜಶೆಟ್ಟಿ ನೇತೃತ್ವದಲ್ಲಿ ಸಬ್‌ಇನ್ಸ್‌ಪೆಕ್ಟರ್‌ಗಳಾದ ಜಯಪುರ ಠಾಣೆಯ ಕಾಳೇಗೌಡ, ಇಲವಾಲ ಠಾಣೆಯ ಮಹೇಶ್ ಮತ್ತು ಅಪರಾಧ ವಿಭಾಗದ ಎಂ.ಹೇಮಲತಾ ಹಾಗೂ ಸಿಬ್ಬಂದಿ ಬಂದೋಬಸ್ತ್ ಕಲ್ಪಿಸಿದ್ದರು.


ಕುಸ್ತಿ ಪಂದ್ಯಾವಳಿಗೆ ಚಾಲನೆ ನೀಡಿದ ಶಾಸಕ ಜಿ.ಟಿ.ದೇವೇಗೌಡರನ್ನು ಗ್ರಾಮಸ್ಥರು ಅಭಿನಂದಿಸಿದರು.

ಹಿಂದೂ ಧರ್ಮ ಒಡೆಯಲು ನಮ್ಮವರನ್ನೇ ಜಾತಿ–ಮತಗಳ ಹೆಸರಿನಲ್ಲಿ ವಿಂಗಡನೆ ಮಾಡುತ್ತಿದ್ದಾರೆ

ಆರ್‌ಎಸ್‌ಎಸ್ ಜೇಷ್ಠ ಪ್ರಚಾರಕ ಸು.ರಾಮಣ್ಣ ಬೇಸರ



'ಹಿಂದೂ ಸಮಾಜೋತ್ಸವ' ಹಾಗೂ 'ಶೋಭಾಯಾತ್ರೆ' ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಜೇಷ್ಠ ಪ್ರಚಾರಕ ಸು.ರಾಮಣ್ಣ ಮಾತನಾಡಿದರು. ಈ ವೇಳೆ ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಅಧ್ಯಕ್ಷ ಕೆ.ಬಿ.ಲಿಂಗರಾಜು, ಬೆಂಗಳೂರು ಮಾತಾ ಅಮೃತಾನಂದಮಯಿ ಮಠದ ಶ್ರೀ ಸ್ವಾಮಿ ಆತ್ಮನಿರತಾಮೃತ ಚೈತನ್ಯ ಉಪಸ್ಥಿತರಿದ್ದರು.

ಮೈಸೂರು,ಜ.17(ಎಸ್‌ಪಿಎನ್)–ಹಿಂದೂಗಳು ಜಾಗೃತವಾಗಲು ಕಳೆದ ನೂರು ವರ್ಷಗಳಿಂದ ಆರ್‌ಎಸ್‌ಎಸ್ ತಳಮಟ್ಟದಲ್ಲಿ ಕೆಲಸ ಮಾಡುತ್ತಿದೆ. ಅದರ ಪ್ರತಿಫಲವನ್ನು ದೇಶದಲ್ಲಿ ಕಾಣುತ್ತಿದ್ದೇವೆ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಜೇಷ್ಠ ಪ್ರಚಾರಕ ಸು.ರಾಮಣ್ಣ ಅಭಿಪ್ರಾಯಪಟ್ಟರು.

ಮೈಸೂರು ಬೃಂದಾವನ ಬಡಾವಣೆಯ ಶ್ರೀ ಮಹಾಗಣಪತಿ ದೇವಸ್ಥಾನ ಆವರಣದಲ್ಲಿ ಹಿಂದೂ ಸಮಾಜೋತ್ಸವ ಸಮಿತಿ ವತಿಯಿಂದ ಏರ್ಪಡಿಸಿದ್ದ 'ಹಿಂದೂ ಸಮಾಜೋತ್ಸವ' ಹಾಗೂ 'ಶೋಭಾ ಯಾತ್ರೆ'ಯಲ್ಲಿ ಭಾಗವಹಿಸಿ ಮಾತನಾಡಿದರು.

ಹಿಂದೂಸ್ತಾನದಲ್ಲಿ ಹಿಂದೂಗಳು ಜಾಗೃತರಾಗಲು ಇಷ್ಟು ಸಮಯಬೇಕಾಯಿತು. ಈಗ ಸಮಾಜದಲ್ಲಿ ಹಿಂದೂ ಜಾಗೃತಿ ಮೂಡಿದೆ. ಈಗ ಎಲ್ಲದ್ದಕ್ಕೂ ಬೇರೆಯವರ ಮೇಲೆ ಅವಲಂಬನೆ ಬೇಡವೇಬೇಡ. ಹಿಂದೂ ಧರ್ಮವನ್ನು ಒಡೆಯಲು ನಮ್ಮವರನ್ನು ಜಾತಿ–ಮತಗಳ ಹೆಸರಿನಲ್ಲಿ ವಿಂಗಡನೆ ಮಾಡಿದ್ದಾರೆ ಎಂದರು.

ನಮ್ಮ ಮನೆಗಳು ಭಾರತೀಯ ಪರಂಪರೆಯನ್ನು ಬಿಂಬಿಸುವ ತಾಣವಾಗಬೇಕು. ಪ್ರಸ್ತುತ ದಿನಮಾನಗಳಲ್ಲಿ ನಮ್ಮ ಮನೆಗಳನ್ನು ಲಾಡ್ಜ್‌ಗಳ ರೀತಿ, ಪಿಜಿಗಳ ರೀತಿ ಕಟ್ಟಿಕೊಂಡಿದ್ದೇವೆ. ಇದರ ಬದಲು ಭಾರತೀಯ ಪರಂಪರೆಯನ್ನು ಬಿಂಬಿಸುವ ತಾಣಗಳಾಗಿ ಕಟ್ಟಿಕೊಳ್ಳಿ ಎಂದು ಸಲಹೆ ನೀಡಿದ ಅವರು, ನಮ್ಮತನವನ್ನು ಗಟ್ಟಿಗೊಳಿಸಿಕೊಂಡರೆ ಮಾತ್ರ ನಮ್ಮ ಹಿಂದೂ ಸಮಾಜದ ಅಸ್ತಿತ್ವ ಉಳಿಸಿಕೊಳ್ಳಲು ಸಾಧ್ಯ ಎಂದರು.

ಸಾಮೂಹಿಕವಾಗಿ ನಮಗೊಂದು ಗುರುತಿಲ್ಲ. ಬೇರೆಯವರಿಗೆ ನಮ್ಮ ಧರ್ಮದ ಬಗ್ಗೆ ಗೊತ್ತಿದೆ. ಆದರೆ, ನಮಗೆ ಅನ್ಯ ಜಾತಿಯೇ ಮೊದಲಾಗಿ ನೋಡುವುದನ್ನು ಬಿಡಬೇಕು. ನಾವೆಲ್ಲಾ ಹಿಂದೂ, ನಾವೆಲ್ಲ ಒಂದು ಎನ್ನುವ ಭಾವನೆಯನ್ನು ಆರ್‌ಎಸ್‌ಎಸ್ ಕಲಿಸಿಕೊಟ್ಟಿದೆ. ಸ್ವಾಮಿ ವಿವೇಕಾನಂದರು ಅಮೆರಿಕಾಗೆ ಹೋಗಿದ್ದಾಗ ನಡೆದ ಘಟನೆಗಳನ್ನು ವಿವರಿಸಿದರಲ್ಲದೆ, ಸ್ವಾಮಿ ವಿವೇಕಾನಂದರು ಹಿಂದೂ ಸಮಾಜ ಕುರಿತು ಬಹಳ ಗಟ್ಟಿದನಿಯಲ್ಲಿ ಹೇಳಿ, ಅಲ್ಲಿನ ಜನರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ ಎಂದರು.

ಸಂಘ ಕಾರ್ಯಚಟುವಟಿಕೆ ಆರಂಭವಾಗುವುದೇ 'ಹಿಂದೂ' ಎನ್ನುವ ಶಬ್ದದಿಂದ. ಸಾಮರಸ್ಯವನ್ನು ಈ ಸಮಾಜದಲ್ಲಿ ನೆಲೆಸುವಂತೆ ಮಾಡುವುದೇ ಸಂಘದ ಪ್ರಮುಖ ಕಾರ್ಯ. ನಮ್ಮಲ್ಲೂ ಮೇಲು–ಕೀಳು, ಬಡವ–ಶ್ರೀಮಂತ ಸೇರಿದಂತೆ ಇತರೆ ತಾರತಮ್ಯ ನೀತಿಗಳನ್ನು ಕಡಿಮೆ ಮಾಡಿಕೊಂಡು ಬದುಕು ನಡೆಸಲು ಮುಂದಾಗಬೇಕು ಎಂದು ಕರೆ ನೀಡಿದರು.

1980ರ ಸಮಯದಲ್ಲಿ ಅಯೋಧ್ಯೆಯಲ್ಲಿ ಶ್ರೀ ರಾಮಮಂದಿರ ನಿರ್ಮಾಣ ಮಾಡಬೇಕು ಎಂಬ ಸಂಘದ ಸಂಕಲ್ಪದೊಂದಿಗೆ ರಾಜ್ಯದ ಗ್ರಾಮ–ಗ್ರಾಮಗಳಿಂದ ಇಟ್ಟಿಗೆ ಪೂಜೆ ನೆರವೇರಿಸಿ, ಅಯೋಧ್ಯೆಗೆ ಕಳುಹಿಸಬೇಕೆಂದು ನಿರ್ಣಯ ಕೈಗೊಂಡ ಪ್ರಕರಣವನ್ನು ಎಡಪಂಥೀಯ ಪತ್ರಕರ್ತನೊಬ್ಬ ತನ್ನ ಪತ್ರಿಕೆಯಲ್ಲಿ ಆರ್‌ಎಸ್‌ಎಸ್ ಬಗ್ಗೆ ಅರ್‌ಎಸ್‌ಎಸ್ ಪ್ರಚಾರಕರ ಬಗ್ಗೆ ಕೆಟ್ಟದಾಗಿ ಬರೆದಿದ್ದ. ಆದರೆ, ಆತ ಶ್ರೀರಾಮಮಂದಿರ ಮಂದಿರ ನಿರ್ಮಾಣದ ಹೊತ್ತಿಗಾಗಲೇ ಇಹಲೋಕ ತ್ಯಜಿಸಿದ್ದಾರೆ ಎಂದರು.

ಇದಕ್ಕೂ ಮುನ್ನ ಮೇಟಗಳ್ಳಿಯ ಶ್ರೀ ಗಣಪತಿ ದೇವಸ್ಥಾನದಿಂದ ಆರಂಭವಾದ ಶೋಭಯಾತ್ರೆಯು ಬೃಂದಾವ ನ ಬಡಾವಣೆಯ ಶ್ರೀ ಮಹಾಗಣಪತಿ ದೇವಸ್ಥಾನದವರೆಗೆ ಸಾಗಿತು. ಈ ವೇಳೆ ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ, ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಅಧ್ಯಕ್ಷ ಕೆ.ಬಿ.ಲಿಂಗರಾಜು, ಬೆಂಗಳೂರು ಮಾತಾ ಅಮೃತಾನಂದಮಯಿ ಮಠದ ಶ್ರೀ ಸ್ವಾಮಿ ಆತ್ಮನಿರತಾಮೃತ ಚೈತನ್ಯ ಇದ್ದರು.

PUBLIC NOTICE

The public at large is hereby notified that, my client **Mr. Prakash S/o Mr. Puttamadaiah** has decided to purchase the property from **Dr. Ramachandran Narayanashastry @ Dr. Ramachandran. N** who is the whole and sole owner of the schedule property. Whereas, Mr. Prakash S/o Mr. Puttamadaiah is having interest in purchasing the below mentioned schedule property from Dr. Ramachandran Narayanashastry @ Dr. Ramachandran. N . Prior to this Dr. Ramachandran Narayanashastry @ Dr. Ramachandran.N purchased the schedule property from Doctor Housing Co-operative Societies Ltd. Represented by its Secretary **Mr. B.M Mahadeva** and the same has been registered in Book-1 vide document No.MYN-1-04978-2004-2005 and stored in CD No.MYND20 before the Sub- Registrar, Mysuru North, Mysore on 30.07.2004. If any person/s including Banks, Financial Institutions, Societies and all statutory authorities claiming any right, interest, title by way of sale, inheritance possession, succession, mortgage, lien, lease, gift or otherwise, shall approach me with the below mentioned address along with supported documents, thereof within 15 days from the date of this paper publication, failing which claims if any shall be deemed to have been waived off and does not have any legal sanctity.

SCHEDULE PROPERTY

Residential Site bearing No. 74, situated at Doctor's Layout, Doctors Housing Co-operative Society Ltd. Alanahally, Nazarbad Mohalla, Mysuru formed in land bearing Sy. Nos. 25/1 measuring 3.26 Acres , 25/2 measuring 3.12 Acres, 26/1 measuring 1.14 Acre and 26/2 measuring 1.21 Acres in total measuring an extent of 9.33 Acres. Measuring North to South: 40 feet, East to West: 70 feet, totally measuring 2800 sq feet bounded on: **East by:** Private Property, **West by:** Road, **North by:** Site No. 73, **South by:** Site No. 75

Sd/- Smitha Devaiah B, Advocate, **The Law Lexicon Law Firm,** #1091/A, CH-19, Mahesh Prasad Building, 1st Floor, Vani Vilas Double Road, Chamarajapuram Mysore- 570005, Ph: +91 9611503334

ಶಿವಲಿಂಗಕ್ಕೆ ಬೆಳ್ಳಿಯ ನಾಗರೂಪ ಸಮರ್ಪಣೆ



ಶಿವಲಿಂಗಕ್ಕೆ ಬೆಳ್ಳಿಯ ನಾಗರೂಪ

ಮಡಿಕೇರಿ, ಜ.17– ಐತಿಹಾಸಿಕ ಹಿನ್ನೆಲೆ ಹೊಂದಿರುವ ಶ್ರೀ ಓಂಕಾರೇಶ್ವರ ಸನ್ನಿಧಿಯ ಶಿವಲಿಂಗಕ್ಕೆ ಬೆಳ್ಳಿಯ ನಾಗರೂಪವನ್ನು ಭಕ್ತರು ಸಮರ್ಪಣೆ ಮಾಡಿದ್ದಾರೆ. ಹಿಂದೆ ಚೆನ್ನೈ ಮೂಲದ ಭಕ್ತರಾದ ರಮೇಶ್ ಪ್ರಕಾಶ್ ಹಾಗೂ ಕುಟುಂಬಸ್ಥರು ಶಿವಲಿಂಗಕ್ಕೆ ಬೆಳ್ಳಿಯ ಕವಚ ಅರ್ಪಿಸಿದ್ದರು. ಇದೀಗ ಮತ್ತೆ ಸುಮಾರು 700ಗ್ರಾಂ ತೂಕದ ಬೆಳ್ಳಿಯ ನಾಗರೂಪವನ್ನು ಸಮರ್ಪಣೆ ಮಾಡಿದ್ದಾರೆ. ಸಮಿತಿಯ ಅಧ್ಯಕ್ಷ ಚುಮ್ಮಿ ದೇವಯ್ಯ, ಸದಸ್ಯ ಅಂಬೆಕಲ್ ಕುಶಾಲಪ್ಪ, ಸಂತೋಷ್ ಭಟ್, ಕಾರ್ಯ ನಿರ್ವಹಣಾ ಅಧಿಕಾರಿ ದೇವರಾಜ್, ಸಿಬ್ಬಂದಿ ವರ್ಗ, ಭಕ್ತರು, ಅರ್ಚಕ ವರ್ಗದವರು ಹಾಜರಿದ್ದರು.

ಜಮ್ಮಾಬಾಣೆ ತೀರ್ಪು ಅನುಷ್ಠಾನಗೊಳ್ಳದಿದ್ದರೆ ನ್ಯಾಯಾಂಗ ನಿಂದನೆ ಮೊಕದ್ದಮೆ: ಬಿಜೆಪಿ ಎಚ್ಚರಿಕೆ

ಮಡಿಕೇರಿ,ಜ.17–ಜಮ್ಮಾಬಾಣೆಯ ಸಮಸ್ಯೆಯನ್ನು ಬಗೆಹರಿಸಲು ರಾಜ್ಯ ಭೂ ಕಂದಾಯ ಕಾಯ್ದೆಂಯಡಿ ರಾಜ್ಯ ಉಚ್ಚ ನ್ಯಾಯಾಲಯ ನೀಡಿದ ತೀರ್ಪನ್ನು ತಕ್ಷಣ ಅನುಷ್ಠಾನಗೊಳಿಸಬೇಕೆಂದು ಜಿಲ್ಲಾ ಬಿಜೆಪಿ ಆಗ್ರಹಿಸಿದೆ.

ನ್ಯಾಯಾಲಯ ತೀರ್ಪಿನಲ್ಲಿ ಆದೇಶಿಸಿರುವಂತೆ ಕ್ರಮ ಕೈಗೊಳ್ಳಬೇಕು. ತಪ್ಪಿದಲ್ಲಿ ನ್ಯಾಯಾಂಗ ನಿಂದನೆ ಮೊಕದ್ದಮೆ ದಾಖಲಿಸುವುದಾಗಿ ಜಿಲ್ಲಾಧಿಕಾರಿ ಮೂಲಕ ಸರಕಾರಕ್ಕೆ ಕಳಿಸಿರುವ ಮನವಿಯಲ್ಲಿ ಎಚ್ಚರಿಕೆ ನೀಡಿದ್ದಾರೆ.

2011ರಲ್ಲಿ ಅಂದಿನ ಬಿಜೆಪಿ ಸರಕಾರ ಕೊಡಗಿನ ಜ್ವಲಂತ ಸಮಸ್ಯೆಯಾದ ಜಮ್ಮಾ ಬಾಣೆಯ ಸಮಸ್ಯೆಯನ್ನು ಬಗೆಹರಿಸಲು ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ನಿಯಮ 2(20) ಮತ್ತು ನಿಯಮ 80ಕ್ಕೆ ತಿದ್ದುಪಡಿ ತಂದಿದ್ದು, ಇದು ರಾಜ್ಯ ಸರಕಾರದ ಪತ್ರದಲ್ಲಿ ಪ್ರಕಟಣೆಗೊಂಡಿದೆ. ಇದನ್ನು ಪ್ರಶ್ನಿಸಿ ಕೆಲವರು ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿಯನ್ನು ಸಲ್ಲಿಸಿದ್ದರು. ಈ ರಿಟ್ ಅರ್ಜಿಗಳ ಬಗ್ಗೆ ಸುದೀರ್ಘವಾಗಿ ಪ್ರತಿವಾದಗಳು ನಡೆದು ಉಚ್ಚ ನ್ಯಾಯಾಲಯ ಜುಲೈ 2024ರಲ್ಲಿ ಸುದೀರ್ಘವಾದ ತೀರ್ಪನ್ನು ನೀಡಿ ರಿಟ್ ಪಿಟಿಷನ್ ಅನ್ನು ವಜಾಗೊಳಿಸಿದೆ. ಅಲ್ಲದೆ ಕರ್ನಾಟಕ ಭೂ ಕಂದಾಯ ಕಾಯ್ದೆಗೆ 2011ರಲ್ಲಿ ತಂದ ತಿದ್ದುಪಡಿಯು ಸಂವಿಧಾನಾತ್ಮಕವಾಗಿಯೇ ಇದೆ ಮತ್ತು ತಿದ್ದುಪಡಿಯನ್ನು ಜಿಲ್ಲಾಡಳಿತ, ಕಂದಾಯ ಇಲಾಖೆ ಈ ತೀರ್ಪಿನ ಪ್ರತಿ ಸಿಕ್ಕಿದ 30 ದಿನದೊಳಗಾಗಿ ಅನುಷ್ಠಾನ ಮಾಡಬೇಕು ಎಂದೂ ಆದೇಶಿಸಿದೆ. ತೀರ್ಪು ಪ್ರಕಟವಾಗಿ ಒಂದೂವರೆ ವರ್ಷ ಕಳೆದರೂ ಜಿಲ್ಲಾಡಳಿತ ಮತ್ತು ಕಂದಾಯ ಇಲಾಖೆ ಈ ತಿದ್ದುಪಡಿಯನ್ನು ಜಾರಿಗೆ ತರಲು ಕ್ರಮ ಕೈಗೊಂಡಿಲ್ಲ. ಇದು ನ್ಯಾಯಾಲಯದ ಆದೇಶ ಉಲ್ಲಂಘನೆ ಮತ್ತು ನಿಂದನೆಯಾಗಿದೆ ಎಂದು ಬಿಜೆಪಿ ಮುಖಂಡರು ಅಸಮಾಧಾನ ವ್ಯಕ್ತಪಡಿಸಿದರು.



ಜಮ್ಮಾಬಾಣೆಯ ಸಮಸ್ಯೆ ಬಗೆಹರಿಸುವ ಸಂಬಂಧ ಹೈಕೋರ್ಟ್‌ನ ತೀರ್ಪು ಜಾರಿಗೊಳಿಸುವಂತೆ ಆಗ್ರಹಿಸಿ ಬಿಜೆಪಿ ಮುಖಂಡರು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಸವಾಲು ಸ್ವೀಕಾರ: ಮಾಜಿ ಶಾಸಕ ಕೆ.ಜಿ. ಬೋಪಯ್ಯ ಮಾತನಾಡಿ, ನ್ಯಾಯಾಲಯ ನೀಡಿದ ತೀರ್ಪನ್ನು ಅನುಷ್ಠಾನಗೊಳಿಸದ ಕಾಂಗ್ರೆಸ್ ಸರಕಾರ ಇದೀಗ ಸಮಿತಿಯನ್ನು ರಚಿಸಿ ಕಾಯ್ದೆಗೆ ತಿದ್ದುಪಡಿ ತಂದಿರುವುದು ಎಷ್ಟು ಸರಿ ಎಂದು ಪ್ರಶ್ನಿಸಿದರು. ಜಮ್ಮಾ ಬಾಣೆ ಸಮಸ್ಯೆ ಕುರಿತು ಚರ್ಚೆಗೆ ಬನ್ನಿ ಎಂದು ಶಾಸಕರು ಸವಾಲು ಹಾಕಿರುವುದನ್ನು ಅತ್ಯಂತ ವಿನಯದಿಂದ ಸ್ವೀಕರಿಸುತ್ತೇವೆ, ಅವರು ಚರ್ಚೆಗೆ ವೇದಿಕೆ ಸಿದ್ಧಪಡಿಸಲಿ ಎಂದು ಹೇಳಿದರು.

ಮಾಜಿ ಶಾಸಕ ಎಂ.ಪಿ.ಅಪ್ಪಚ್ಚು ರಂಜನ್, ಜಿಲ್ಲಾಧ್ಯಕ್ಷ ನಾಪಂಡ ರವಿ ಕಾಳಪ್ಪ, ಪ್ರಧಾನ ಕಾರ್ಯದರ್ಶಿಗಳಾದ ಮಹೇಶ್ ಜೈನಿ, ವಿ.ಕೆ. ಲೋಕೇಶ್, ಉಪಾಧ್ಯಕ್ಷ ಮನು ಮಂಜುನಾಥ್, ವಕ್ತಾರ ಬಿ.ಕೆ.ಅರುಣ್ ಕುಮಾರ್, ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ಅನಿತಾ ಪೂವಯ್ಯ, ನಗರಸಭೆ ಸದಸ್ಯ ಅರುಣ್ ಶೆಟ್ಟಿ, ಪ್ರಮುಖರಾದ ಕನ್ನಿಕೆ ಹಾಜರಿದ್ದರು.

ಕಾಲೇಜಿನಿಂದ ಈಜಲು ಹೋದ ಪಿಯು ವಿದ್ಯಾರ್ಥಿಗಳು ಸಾವು

ಮಡಿಕೇರಿ/ಸುಂಟಿಕೊಪ್ಪ, ಜ.17– ಕಾಲೇಜಿನಿಂದ ಪಿಯು ವಿದ್ಯಾರ್ಥಿಗಳಿಬ್ಬರು ಮನೆಗೆ ಸೇರುವ ಬದಲು ಮಸಣಕ್ಕೆ ಸೇರಿದ ಘಟನೆ ಜಿಲ್ಲೆಯ ಸುಂಟಿಕೊಪ್ಪದಲ್ಲಿ ಸಂಭವಿಸಿದೆ.



ರಾಯಿಜ್



ನಿಹಾಲ್

ಸುಂಟಿಕೊಪ್ಪ ಪಂಪ್‌ಹೌಸ್ ನಿವಾಸಿಗಳಾದ ಆಟೋ ಚಾಲಕರ ಮತ್ತು ಮಾಲಿಕರ ಸಂಘದ ಅಧ್ಯಕ್ಷ ಶರೀಫ್ ಅವರ ಪುತ್ರ ಮಹಮದ್ ರಾಯಿಜ್(16) ಮತ್ತು ಸರದಾರ್ ಎಂಬವರ ಪುತ್ರ ಮಹಮದ್ ನಿಹಾಲ್(16) ಮೃತ ದುರ್ದೈವಿಗಳಾಗಿದ್ದಾರೆ. ಮೃತರು ಮಾದಾಪುರ ಸಮೀಪದ ಚೆನ್ನಮ್ಮ ಕಾಲೇಜಿನಲ್ಲಿ ಪ್ರಥಮ ಪಿ.ಯು.ಸಿ ವ್ಯಾಸಂಗ ಮಾಡುತ್ತಿದ್ದು, ಶನಿವಾರ ಕಾಲೇಜು ಮುಗಿಸಿ 2 ಗಂಟೆಯಲ್ಲಿ ಕಾಲೇಜಿನಿಂದ ಮನೆಗೆ ತೆರಳದೆ ಮಲ್ಲಿಕಾರ್ಜುನ ಕಾಲೋನಿ ಬಳಿಯ ಮಾದಾಪುರ ಹೊಳೆಯಲ್ಲಿ ಈಜಲು ನೀರಿಗಿಳಿದಿದ್ದು, ಬಾಲಕರು ಸುಳಿಯಲ್ಲಿ ಸಿಲುಕಿ ಸಾವನ್ನಪ್ಪಿದ್ದಾರೆ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ಸ್ಥಳಕ್ಕೆ ಧಾವಿಸಿದ ಪೊಲೀಸ್ ಠಾಣಾಧಿಕಾರಿ ಮೋಹನ್‌ರಾಜ್ ಹಾಗೂ ಸಿಬ್ಬಂದಿ ಸ್ಥಳೀಯ ಈಜು ತಜ್ಞರ ಸಹಾಯದಿಂದ ಮೃತದೇಹಗಳನ್ನು ಹೊರತೆಗೆಸಿದ್ದಾರೆ. ಕುಶಾಲನಗರ ಸಮುದಾಯ ಕೇಂದ್ರದಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ ಬಳಿಕ ಕುಟುಂಬಸ್ಥರಿಗೆ ಮೃತ ದೇಹಗಳನ್ನು ಹಸ್ತಾಂತರಿಸಲಾಗಿದೆ. ಸುಂಟಿಕೊಪ್ಪ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮಡಿಕೇರಿ, ಜ.17– ಹೊದ್ದೂರು ಫೀಡರ್‌ನಲ್ಲಿ ಜ.18 ರ ಬೆಳಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ಜಾಲ ಬಲವರ್ಧನೆ ಕಾಮಗಾರಿ ಕೈಗೆತ್ತಿಕೊಳ್ಳುತ್ತಿರುವುದರಿಂದ ಹೊದ್ದೂರು, ಕಬಡಗೇರಿ, ಕಕ್ಕಬ್ಬೆ, ಕೊಳಕೇರಿ, ಕುಂಜಿಲ, ಎಮ್ಮೆಮಾಡು, ನೆಲಜಿ, ಬಲ್ಲಮಾವಟಿ, ಪೇರೂರು, ನಾಪೋಕ್ಲು ಟೌನ್, ಕೊಟ್ಟಮುಡಿ, ಪಾಲೂರು, ಚೆರಿಯ ಪರಂಬು, ಹಳೆ ತಾಲೂಕು ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಕಿಕ್ ಬಾಕ್ಸಿಂಗ್: ಭಾಗಮಂಡಲಕ್ಕೆ 7 ಚಿನ್ನ, 11 ಬೆಳ್ಳಿ ಪದಕ

ಮಡಿಕೇರಿ: ಮೈಸೂರಿನಲ್ಲಿ ನಡೆದ ರಾಜ್ಯ ಮಟ್ಟದ ಕಿಕ್ ಬಾಕ್ಸಿಂಗ್ ಚಾಂಪಿಯನ್ ಶಿಪ್‌ನಲ್ಲಿ ಭಾಗಮಂಡಲದ ಚೈನೀಸ್ ಕೆನ್‌ಪೊ ಕರಾಟೆ ಶಾಖೆಯ ವಿದ್ಯಾರ್ಥಿಗಳು ಅತ್ಯುತ್ತಮ ಸಾಧನೆ ಮಾಡಿ 7 ಚಿನ್ನ ಮತ್ತು 11 ಬೆಳ್ಳಿ ಪದಕಗಳನ್ನು ಗೆದ್ದಿದ್ದಾರೆ. ಜಿತಿಕಾ, ಜಶ್ವಿನ್, ಪ್ರತಾಪ್, ಮನ್ವಿತ್, ಗುರುದೀಪ್, ಚೇತಕ್ ಹಾಗೂ ಶಿವಾನಿ ಚಿನ್ನದ ಪದಕಗಳನ್ನು ಗೆದ್ದುಕೊಂಡರು. ರತನ್, ಹಿಮಾನಿ, ಹರ್ಷಿಕಾ, ಪ್ರಿಯಾಂಕ, ಹಿರಾಲ್, ಅಕುಲ್, ಗಗನ್, ತಮನ್, ತ್ರೈಸಿ, ಜಾನೇಶ್ ಹಾಗೂ ಪ್ರೀತಂ ಬೆಳ್ಳಿ ಪದಕಗಳನ್ನು ತಮ್ಮದಾಗಿಸಿಕೊಂಡರು.

ತಂಡದ ಪರವಾಗಿ ಚೈನೀಸ್ ಕೆನ್‌ಪೊ ಕರಾಟೆ ಶಾಖೆಯ ನಿರ್ದೇಶಕ ನಾಗರಾಜ್, ಕರಾಟೆ ಶಿಕ್ಷಕರಾದ ಇಮ್ಯಾನ್ವಲ್ ಕೆ.ಜೆ, ರಾಯ್ ಜೋಸೆಫ್ ಹಾಗೂ ಗ್ರಾಂಡ್ ಮಾಸ್ಟರ್ ರಾಜೇಶ್ ಉಪಸ್ಥಿತರಿದ್ದರು.



ಮಂಡ್ಯ ಬಳಿ ನ್ಯಾಯಾಧೀಶರ ವಸತಿ ಸಮುಚ್ಚಯ ನಿರ್ಮಾಣ

ಹೈಕೋರ್ಟ್ ನ್ಯಾಯಮೂರ್ತಿಗಳಿಂದ ಪರಿಶೀಲನೆ

ಮಂಡ್ಯ, ಜ.17– ಮಂಡ್ಯದ ನ್ಯಾಯಾಧೀಶರಿಗೆ ನಗರದ ಮನುಗನಹಳ್ಳಿಯಲ್ಲಿ ವಸತಿ ಸಮುಚ್ಚಯಗಳನ್ನು ನಿರ್ಮಾಣ ಮಾಡಲಾಗುತ್ತಿದ್ದು, ವಸತಿ ಸಮುಚ್ಚಗಳ ನಿರ್ಮಾಣಕ್ಕೆ ಹೆಚ್ಚುವರಿಯಾಗಿ 5 ಕೋಟಿ ರೂ. ಪ್ರಸ್ತಾವನೆ ಸಲ್ಲಿಸಲಾಗಿತ್ತು ಸದರಿ ಜಾಗಕ್ಕೆ ಹೈಕೋರ್ಟ್ ನ್ಯಾಯಮೂರ್ತಿ ಸುನಿಲ್ ದತ್ ಯಾದವ್ ಅವರು ಭೇಟಿ ನೀಡಿ ಕಟ್ಟಡದ ವಿನ್ಯಾಸ ಮತ್ತು ಕಾಮಗಾರಿಗಳ ವೀಕ್ಷಣೆ ಮತ್ತು ಪಾರ್ಕಿಂಗ್ ವ್ಯವಸ್ಥೆಯನ್ನು ಪರಿಶೀಲನೆ ನಡೆಸಿದರು.

ಜಿಲ್ಲೆಯಲ್ಲಿರುವ ಏಳು ಸಿವಿಲ್ ನ್ಯಾಯಾಲಯ ಸಂಕೀರ್ಣಕ್ಕೆ ಸಂಬಂಧ ಪಟ್ಟಂತೆ ಕೃಷಿ ಇಲಾಖೆಗೆ ಸೇರಿದ 22.12 ಗುಂಟೆ ಜಾಗವನ್ನು ಈಗಾಗಲೇ ಗುರುತಿಸಲಾಗಿದೆ. ಸದರಿ ಜಾಗದಲ್ಲಿ ನ್ಯಾಯಾಲಯ ಸಂಕೀರ್ಣ ನಿರ್ಮಾಣ ಮಾಡಲು 25 ಕೋಟಿ ರೂ. ವೆಚ್ಚದಲ್ಲಿ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಜಿಲ್ಲಾಧಿಕಾರಿ ಡಾ.ಕುಮಾರ ತಿಳಿಸಿದರು.

ಇದೇ ಸಂದರ್ಭದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಜಿಲ್ಲಾ ಹಿರಿಯ ಸಿವಿಲ್ ನ್ಯಾಯಾಧೀಶ ಆನಂದ್, ತಹಸೀಲ್ದಾರ್ ವಿಶ್ವನಾಥ್, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಟಿ.ಎಸ್.ಸತ್ಯಾನಂದ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಮದ್ದೂರು ಕೋರ್ಟ್ ಪರಿಶೀಲನೆ: ಹೈಕೋರ್ಟ್ ನ್ಯಾಯಮೂರ್ತಿಗಳಾದ ಸುನಿಲ್‌ದತ್ ಯಾದವ್ ಅವರು ಇಂದು ಮದ್ದೂರಿಗೆ ಭೇಟಿ ನೀಡಿ ಮದ್ದೂರು ನ್ಯಾಯಾಲಯಕ್ಕೆ ಸಂಬಂಧಪಟ್ಟ ಕಾಮಗಾರಿಗಳ ಪರಿಶೀಲನೆ ನಡೆಸಿದರು.

ಮದ್ದೂರಿನ ನ್ಯಾಯಾಲಯಕ್ಕೆ ಸಂಬಂಧಪಟ್ಟಂತೆ ಮದ್ದೂರು ನಗರದ ಸರ್ವೆ ನಂ 800/1, 800/3, 801/1 ರೇಷ್ಮೆ ಇಲಾಖೆಯ ವ್ಯಾಪ್ತಿಗೆ ಬರುವ 4.35 ಎಕ್ಕರೆ ಜಾಗವನ್ನು ಗುರುತಿಸಿ ನ್ಯಾಯಾಲಯ ನಿರ್ಮಾಣಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಗೆ ಈಗಾಗಲೇ ಸದರಿ ಸ್ಥಳವನ್ನು ಹಸ್ತಾಂತರಿಸಲಾಗಿದೆ. ಸದರಿ ಜಾಗದಲ್ಲಿ 21 ಕೋಟಿ ವೆಚ್ಚದಲ್ಲಿ ನ್ಯಾಯಾಲಯ ಸಂಕೀರ್ಣ ಮತ್ತು ನ್ಯಾಯಾಧೀಶರ ವಸತಿಗೃಹಗಳ ನಿರ್ಮಾಣ ಕಾಮಗಾರಿ ಮಾಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ.



ಮನುಗನಹಳ್ಳಿಯಲ್ಲಿ ನಿರ್ಮಾಣವಾಗುತ್ತಿರುವ ನ್ಯಾಯಾಧೀಶರ ವಸತಿ ಸಮುಚ್ಚಯವನ್ನು ಹೈಕೋರ್ಟ್ ನ್ಯಾಯಮೂರ್ತಿ ಸುನಿಲ್ ದತ್ ಯಾದವ್ ಪರಿಶೀಲನೆ ನಡೆಸಿದರು.

ಗೂಡ್ಸ್ ವಾಹನ ಡಿಕ್ಕಿ: ಬೈಕ್ ಸವಾರ ಸಾವು

ಭಾರತೀನಗರ, ಜ.17– ಗೂಡ್ಸ್ ವಾಹನವೊಂದು ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಚಂದೂಪುರ ಗೇಟ್ ಬಳಿ ಜರುಗಿದೆ. ಮಳವಳ್ಳಿ ತಾಲೂಕಿನ ಹಲಗೂರು ಸಮೀಪದ ಚಿಲ್ಲಾಪುರ ಗ್ರಾಮದ ಸಚಿನ್ (27) ಎಂಬಾತನೇ ಅಪಘಾತದಿಂದ ಮೃತ ದುರ್ದೈವಿ.



ಮೃತ ದೇಹವನ್ನು ಕೆಎಂ ದೊಡ್ಡಿ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಪಂಚನಾಮೆ ನಡೆಸಿ ವಾರಸುದಾರರಿಗೆ ಒಪ್ಪಿಸಲಾಗಿದೆ. ಕೆ.ಎಂ.ದೊಡ್ಡಿ ಪೊಲೀಸ್ ಠಾಣೆಗೆ ಮೃತ ಸಚಿನ್ ಅವರ ಪೋಷಕರು ದೂರು ನೀಡಿದ್ದಾರೆ. ದೂರಿನ ಮೇರೆಗೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ.

ಮೇಲುಕೋಟೆಯಲ್ಲಿ ವೈಭವದ ಅಂಗಮಣಿ ಉತ್ಸವ

ಮೇಲುಕೋಟೆ: ಶ್ರೀ ಚೆಲುವನಾರಾಯಣಸ್ವಾಮಿ ದೇವಾಲಯದಲ್ಲಿ ತವರುಮನೆ ಉತ್ಸವವೆಂದೇ ಪ್ರಖ್ಯಾತವಾದ ಅಂಗಮಣಿ ಉತ್ಸವ ಶುಕ್ರವಾರ ರಾತ್ರಿ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ವೈಭವದಿಂದ ನೆರವೇರಿತು. ಅಂಗಮಣಿ ಉತ್ಸವ ಮುಗಿದ ನಂತರದ ಚೆಲುವನಾರಾಯಣಸ್ವಾಮಿಯವರ ಅಶ್ವಾಹನೋತ್ಸವಕ್ಕಾಗಿ ತಡರಾತ್ರಿಯಾದರೂ ಕಾದು ಕುಳಿತ ಸಹಸ್ರಾರು ಭಕ್ತ ಸಮೂಹ ಅಶ್ವವಾಹನೋತ್ಸವ ದರ್ಶನ ಮಾಡಿದ ನಂತರವೇ ನಿರ್ಗಮಿಸಿದರು



ಮೇಲುಕೋಟೆ ದೇವಾಲಯದ ಪ್ರಮುಖ ಉತ್ಸವಗಳಲ್ಲೊಂದಾದ ಶ್ರೀದೇವಿ–ಭೂದೇವಿಯರ ಅಂಗಮಣಿ ಉತ್ಸವ ರಾತ್ರಿ 8–30ಕ್ಕೆ ಆರಂಭವಾಯಿತು. ನಡೆಮುಡಿಯೊಂದಿಗೆ ಸಾಗಿದ ದೇವಿಯರ ಉತ್ಸವ ಅಂಗಮಣಿಮಂಟಪ ತಲುಪಿದ ವೇಳೆ ಕರಗಂ ಗುರುಪೀಠದ ವತಿಯಿಂದ ಸ್ಥಾನಾಚಾರ್ಯ ಕೃಷ್ಣಯ್ಯಂಗಾರ್ ದೇವಿಕಾ ದಂಪತಿಗಳು ಮತ್ತು ಸಜ್ಜೆಹಟ್ಟಿ ಗುರುಪೀಠದ ಪರವಾಗಿ ಸ್ಥಾನಾಚಾರ್ಯ ತಿರುನಾರಾಯಣ ಅಯ್ಯಂಗಾರ್ ಮಾರ್ಗದರ್ಶನದಲ್ಲಿ ನರಸಿಂಹ ರಂಗನ್ ದಂಪತಿಗಳು ದೇವಿಯರಿಗೆ ಅನೂಚಾನ ಸಂಪ್ರದಾಯದಂತೆ ಮಡಿಲು ತುಂಬುವ ಕೈಂಕರ್ಯ ನೆರವೇರಿಸಿದ ಭವ್ಯ ಕ್ಷಣಗಳನ್ನು ಕಿಕ್ಕಿರಿದು ತುಂಬಿದ್ದ ಸಹಸ್ರಾರು ಭಕ್ತರು ಕಣ್ತುಂಬಿಕೊಂಡರು

ತವರು ಮನೆಗೆ ಹೋಗಿ ತಡವಾಗಿ ದೇವಾಲಯಕ್ಕೆ ಬಂದ ಶ್ರೀದೇವಿ–ಭೂದೇವಿಯರೊಂದಿಗೆ ಮುನಿಸಿಕೊಂಡ ಚೆಲುವ ನಾರಾಯಣಸ್ವಾಮಿ ಧೀರನಡಿಗೆಯೊಂದಿಗೆ ಆಗಮಿಸುವ ವಿಶಿಷ್ಟನಡಿಗೆಯ ಉತ್ಸವ ದರ್ಶನ ಮಾಡಿದ ಭಕ್ತರು ಪುಳಕಿತರಾಗಿ ಗೋವಿಂದ ಗೋವಿಂದ ಎಂದು ಮೊಳಗಿಸಿದ ಜಯಘೋಷ ಮುಗಿಲು ಮುಟ್ಟಿತ್ತು. ನಂತರ ಸ್ವಾಮಿ ಅಶ್ವ ವಾಹನೋತ್ಸವದಲ್ಲಿ ಸಾಗುವ ವಿಶೇಷ ಕ್ಷಣಗಳನ್ನು ಸಹಸ್ರಾರು ಭಕ್ತರು ಕಣ್ತುಂಬಿಕೊಂಡರು. ತಡ ರಾತ್ರಿ 12 ಗಂಟೆಗೆ ನಡೆದ ಈ ವೈಶಿಷ್ಟ್ಯ ಪೂರ್ಣ ಕ್ಷಣಗಳಿಗಾಗಿ ಕಾಯ್ದುಕುಳಿತಿದ್ದ ಸಹಸ್ರಾರು ಸಂಖ್ಯೆಯ ಭಕ್ತರು ಅಶ್ವವಾಹನೋತ್ಸವವನ್ನು ಹಿಂಬಾಲಿಸಿ ಮೊಲ ಅಡ್ಡಬಿಡುವ ಕ್ಷಣಗಳಿಗೂ ಸಾಕ್ಷಿಯಾದರು. ದೇವಿಯರೊಂದಿಗೆ ಮುನಿಸಿಕೊಂಡು ಹೊರಟ ಚೆಲುವರಾಯನಿಗೆ ಮೂರು ಮೊಲ ಅಡ್ಡಬಂದಾಗ ಸ್ವಾಮಿ ಮರಳಿ ದೇವಾಲಯಕ್ಕೆ ಹಿಂದಿರುಗಿದರು ಎಂಬ ಪ್ರತೀತಿ, ಅಂಗಮಣಿಯ ಉತ್ಸವದಲ್ಲಿ ಪ್ರಮುಖ ಘಟ್ಟವಾಗಿದ್ದು. ಕುದುರೆ ವಾಹನದೊಂದಿಗೆ ಸಾಗಿದ ಸಹಸ್ರಾರು ಭಕ್ತರು ಮೊಲ ಅಡ್ಡಬಂದ ಸಂಭ್ರಮದ ಕ್ಷಣಗಳನ್ನು ಕಣ್ತುಂಬಿಕೊಂಡರು ನಂತರ ಚೆಲುವನಾರಾಯಣಸ್ವಾಮಿಯ ಉತ್ಸವ ದೇವಾಲಯಕ್ಕೆ ಹಿಂತಿರುಗಿತು.

ಸರ್ಕಾರಿ ಶಾಲೆ ಉಳಿದರೆ ಗ್ರಾಮೀಣ ಬದುಕು ಸುಂದರ

ಕಿಕ್ಕೇರಿ: ಸರ್ಕಾರಿ ಶಾಲೆ ಗ್ರಾಮೀಣ ಮಕ್ಕಳ ಭವಿಷ್ಯದ ದೇಗುಲವಾಗಿದ್ದು ಉಳಿಸಲು ಶಿಕ್ಷಕ–ಪೋಷಕ–ವಿದ್ಯಾರ್ಥಿ ಸಮೂಹ ಮುಂದಾಗಬೇಕಿದೆ. ಸರ್ಕಾರಿ ಶಾಲೆಗಳು ಉಳಿದರೆ ಗ್ರಾಮೀಣ ಜನರ ಬದುಕು ಸುಂದರವಾಗಿರುತ್ತದೆ ಎಂದು ಸಮಾಜ ಸೇವಕ ಆರ್‌ಟಿಒ ಮಲ್ಲಿಕಾರ್ಜುನ ಹೇಳಿದರು.

ಹೋಬಳಿಯ ಗಡಿಭಾಗದ ಮಾದಾಪುರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಜರುಗಿದ ಶಾಲಾ ವಾರ್ಷಿಕೋತ್ಸವ ಸಮಾರಂಭದಲ್ಲಿ ಮಾತನಾಡುತ್ತ, ಶಾಲೆ 1890ರಲ್ಲಿ ರಾಜರ ಕಾಲದಲ್ಲಿ ಆರಂಭವಾಗಿರುವ ತಾಲೂಕಿನಲ್ಲಿಯೇ ಬಹಳ ಹಳೆಯ ಶಾಲೆಯಾಗಿದೆ. ಇಂತಹ ಶಾಲೆ ಗ್ರಾಮಕ್ಕೆ ಹೆಮ್ಮೆ.



ಗ್ರಾಮದ ಹಬ್ಬದಂತೆ ಇಡೀ ಪರಿಸರ ಕಂಗೊಳಿಸುತ್ತಿದೆ. ಈ ಶಾಲೆ ಉಳಿವಿಗೆ, ಮಕ್ಕಳು ಶಾಲೆಗೆ ಸುರಕ್ಷಿತವಾಗಿ ಬರುವಂತೆ ಹೊಸಕೋಟೆಯ ಕಾಜಿಹೊಸಹಳ್ಳಿ ನಾಗರಾಜು, ಪುಷ್ಪಾ ದಂಪತಿ ಶಾಲಾ ವಾಹನವನ್ನು ಕೊಡುಗೆಯಾಗಿ ನೀಡಿದ್ದಾರೆ. ಇಂತಹ ದಾನಿಗಳನ್ನು ಸ್ಮರಿಸಿ, ಬಡ ಮಕ್ಕಳ ಶೈಕ್ಷಣಿಕ ಭವಿಷ್ಯಕ್ಕೆ ಮುಖಂಡರು ಸಹಕರಿಸಿ ಎಂದರು. ಮನಮುಲ್ ನಿರ್ದೇಶಕ ಡಾಲು ರವಿ, ಸುಬ್ರಹ್ಮಣ್ಯ ಸೇವಾ ಟ್ರಸ್ಟ್ ಅಧ್ಯಕ್ಷ ಬಿ.ಎಂ.ಕಿರಣ್, ಎಸ್‌ಡಿಎಂಸಿ ಅಧ್ಯಕ್ಷ ಎಂ.ಎನ್.ಯೋಗೇಶ್, ಮನ್ಮುಲ್ ನಿರ್ದೇಶಕ ಅಂಬರೀಷ್ ಮಾತನಾಡಿದರು.

ನಾಗರಾಜು ಉಚಿತವಾಗಿ ನೀಡಿದ ಶಾಲಾ ವಾಹನವನ್ನು ಶಾಲೆಗೆ ಹಸ್ತಾಂತರಿಸಲಾಯಿತು.

ಕ್ಯಾಲೆಂಡರ್ ವಿತರಣೆ



ಕೆ.ಆರ್.ಪೇಟೆ ತಾಲೂಕಿನ ಬೂಕನಕೆರೆ ಹೋಬಳಿಯ ಮಡುವಿನಕೋಡಿ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾದ ಎಂ.ಪಿ.ಲೋಕೇಶ್ 2026ನೇ ನೂತನ ವರ್ಷದ ಕ್ಯಾಲೆಂಡರ್ ಅನ್ನು ರೈತರಿಗೆ ವಿತರಣೆ ಮಾಡುವ ಮೂಲಕ ಸಂಕ್ರಾಂತಿ ಆಚರಣೆಗೆ ಚಾಲನೆ ನೀಡಿದರು.

ರಂಗಪ್ಪನ ದೇಗುಲಕ್ಕೆ ಮೊಲ ಸಮರ್ಪಿಸಿದ ಉಪ್ಪಾರ ಗ್ರಾಮಸ್ಥರು

ಯಳಂದೂರು, ಜ.17(ವಿ.ನಾಗರಾಜು)– ತಾಲೂಕಿನ ವೈ.ಕೆ.ಮೋಳೆ ಗ್ರಾಮದ ಉಪ್ಪಾರ ಜನಾಂಗದವರು ಹಿಡಿದ ಮೊಲವನ್ನು ಶುಕ್ರವಾರ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಂಜೆ ವಾದ್ಯಮೇಳ ಕೊಂಬುಗಳೊಂದಿಗೆ ಮೆರವಣಿಗೆ ಮಾಡಿ ಬಿಳಿಗಿರಿ ರಂಗನಬೆಟ್ಟಕ್ಕೆ ಕೊಂಡೊಯ್ದು ದೇವಾಲಯಕ್ಕೆ ಸಮರ್ಪಿಸಿದರು.



ವೈ.ಕೆ.ಮೋಳೆ ಗ್ರಾಮದ ಉಪ್ಪಾರ ಜನಾಂಗದವರು ಮೊಲವನ್ನು ಪೆಟ್ಟಿಗೆಯಲ್ಲಿ ಇರಿಸಿ ಛತ್ರಿ, ಚಾಮರ, ಮಂಗಳವಾದ್ಯಗಳೊಂದಿಗೆ ಮೆರವಣಿಗೆಯಲ್ಲಿ ಬೆಟ್ಟಕ್ಕೆ ಕೊಂಡೊಯ್ದರು.

ಪ್ರತೀತಿಯ ಹಿನ್ನೆಲೆ: ತಿರುಪತಿಯಿಂದ ಬಂದ ನಾರಾಯಣ ಇಲ್ಲಿ ಸೋಲಿಗ ಜನಾಂಗದ ಅಲಮೇಲಮ್ಮನ ಪ್ರೀತಿಯ ಬಲೆಗೆ ಬೀಳುತ್ತಾನೆ. ಈಕೆಯನ್ನು ವರಿಸಿ ಇಲ್ಲೇ ಇರಲು ಬಯಸುತ್ತಾರೆ. ಆಗ ದೇವಾನುದೇವತೆಗಳು ತಿಮ್ಮಪ್ಪನ ಬರುವಿಕೆಗಾಗಿ ಕಾಯುತ್ತಿರುತ್ತಾರೆ. ಆಗ ಬಂದ ನಾರಾಯಣನನ್ನು ಎಲ್ಲಿಗೆ ಹೋಗಿದ್ದೆ ಎಂದು ವಿಚಾರಿಸಿದಾಗ ಮೊಲವನ್ನು ಬೇಟೆಯಾಡಲು ಬಿಳಿಗಿರಿರಂಗನಬೆಟ್ಟದಲ್ಲಿರುವ ಮೊಲದ ಗಿರಿಗೆ ತೆರಳಿದ್ದೆ ಎಂದು ಸುಳ್ಳು ಹೇಳಿ ತಪ್ಪಿಸಿಕೊಂಡ ಎಂಬುದು ಪ್ರತೀತಿ ಇದೆ. ಇದರ ನೆನಪಾಗಿ ಮೊಲವನ್ನು ಚಿಕ್ಕ ತೇರಿನ ದಿನ ತಾಲೂಕಿನ ವೈ.ಕೆ. ಮೋಳೆ ಗ್ರಾಮಸ್ಥರು ಕೊಂಡೊಯ್ಯುವ ವಾಡಿಕೆ ಇದೆ. ನಿನ್ನೆ ರಾತ್ರಿ ದೇಗುಲದ ಸಮೀಪ ಬೇಟೆಯಾಡಿದ ಮೊಲಕ್ಕೆ ದೇಗುಲದಲ್ಲಿ ವಿಶೇಷ ಪೂಜೆ ಸಲ್ಲಿಸಿ, ನಂತರ ಅದರ ಕಾಲಿಗೆ ಬೆಳ್ಳಿಯ ಗೆಜ್ಜೆಕಟ್ಟಿ ಪೂಜೆ ಸಲ್ಲಿಸುವ ಮೂಲಕ ಬಿಡಲಾಗುತ್ತದೆ. ಅದು ಯಾವ ದಿಕ್ಕಿನ ಕಡೆ ಜಿಗಿದು ಹೋಗುತ್ತದೋ ಆ ದಿಕ್ಕಿನಲ್ಲಿ ಉತ್ತಮ ಮಳೆ, ಬೆಳೆಯಾಗುತ್ತದೆ ಎಂಬುದು ಹಿಂದಿನಿಂದ ಬಂದ ನಂಬಿಕೆ. ಅದರಂತೆ ಹಿಂದಿನ ಕಾಲದಿಂದಲ್ಲೂ ಗ್ರಾಮದ ಉಪ್ಪಾರ ಜನಾಂಗದವರು ಈ ಕಾಯಕ ಮಾಡಿಕೊಂಡು ಬರುತ್ತಿದ್ದಾರೆ.

ಯಜಮಾನರಾದ ಎ. ವೆಂಕಟೇಶ್, ಸೋಮಣ್ಣ ವೈ.ಸಿ.ಮಹದೇವ ಸ್ವಾಮಿ, ಕೆ. ವೆಂಕಟೇಶ್, ಕಾಮರಾಜು, ಕೆಂಪರಾಜು, ಕಾಮಶೆಟ್ಟಿ, ಲಿಂಗರಾಜು, ಪುಟ್ಟ, ವೈ.ಆರ್. ವೆಂಕಟರಾಮು, ವೈ.ಎನ್.ಪಾಂಡುರಂಗಶೆಟ್ಟಿ, ಚಿಕ್ಕಪುಟ್ಟಶೆಟ್ಟಿ, ನಾಗರಾಜು, ನಿಂಗರಾಜು, ವೈ.ಎನ್. ಮಹೇಶ್, ಮಹದೇವಶೆಟ್ಟಿ, ಚಾಮರಾಜು ಬಸವಣ್ಣ, ಮಲ್ಲಶೆಟ್ಟಿ, ಕೃಷ್ಣಶೆಟ್ಟಿ, ಕಾಮ ಶೆಟ್ಟಿ, ರಾಮಶೆಟ್ಟಿ, ದೊಡ್ಡಶೆಟ್ಟಿ, ಮಲ್ಲಿಕಾರ್ಜುನ ಸ್ವಾಮಿ, ನಿಂಗರಾಜು, ದೊಡ್ಡರಾಜು ಹಾಗೂ ಯುವಕ ಸಂಘದ ಸದಸ್ಯರು ಹಾಜರಿದ್ದರು.

ಶ್ರದ್ಧಾಂಜಲಿ



ಅಖಿಲ ಭಾರತೀಯ ವೀರಶೈವ ಮಹಾಸಭಾ ಗೌರವಾಧ್ಯಕ್ಷರಾಗಿದ್ದ ಡಾ. ಭೀಮಣ್ಣ ಖಂಡ್ರೆ ನಿಧನದ ಹಿನ್ನೆಲೆಯಲ್ಲಿ ಜಿಲ್ಲಾ ವೀರಶೈವ ಮಹಾಸಭಾ ನಗರದಲ್ಲಿ ಮರಿಯಾಲದ ಶ್ರೀ ಮುರುಘರಾಜೇಂದ್ರ ಸ್ವಾಮಿಗಳ ಉಪಸ್ಥಿತಿಯಲ್ಲಿ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಕೋಟೆಕೆರೆಯಲ್ಲಿ ಅಂಬೇಡ್ಕರ್ ಪುತ್ಥಳಿ ಅನಾವರಣ

ಗುಂಡ್ಲುಪೇಟೆ: ಜ.17 (ಸೋಮ್.ಜಿ)–ಭಾರತ ರತ್ನ ಡಾ.ಅಂಬೇಡ್ಕರ್ ಅವರ ಆದರ್ಶಗಳನ್ನು ಎಲ್ಲರೂ ಪಾಲಿಸಿದಾಗ ಅವರ ಆಶಯ ಈಡೇರುತ್ತದೆ ಎಂದು ಶಾಸಕ ಗಣೇಶ್ ಪ್ರಸಾದ್ ಹೇಳಿದ್ದಾರೆ.

ತಾಲೂಕಿನ ಕೋಟೆಕೆರೆ ಗ್ರಾಮದಲ್ಲಿ ನಿರ್ಮಿಸಿದ ಡಾ.ಬಿ.ಆರ್.ಅಂಬೇಡ್ಕರ್ ಪುತ್ಥಳಿಯನ್ನು ಶನಿವಾರ ಲೋಕಾರ್ಪಣೆಗೊಳಿಸಿ ಮಾತನಾಡಿ, 12ನೇ ಶತಮಾನದಲ್ಲಿ ಬಸವಣ್ಣ ಹೇಳಿದಂತೆ ಸಮಾಜದಲ್ಲಿ ಸಮಾನತೆ ಬರಲು ಡಾ.ಅಂಬೇಡ್ಕರ್ ಸಂವಿಧಾನ ರಚಿಸುವ ಮೂಲಕ ಕಾರಣರಾಗಿದ್ದಾರೆ. ಮಕ್ಕಳಿಗೆ ಶಿಕ್ಷಣ ಕೊಡಿಸುವುದರಿಂದ ಮಾತ್ರ ಸಮಾಜ ಹಾಗೂ ಸಮುದಾಯಗಳ ಅಭಿವೃದ್ಧಿ ಸಾಧ್ಯವಾಗುತ್ತದೆ ಎಂದು ಅಂಬೇಡ್ಕರ್ ಹೇಳಿದ್ದರು. ಅವರು ಹಾಕಿಕೊಟ್ಟ ದಾರಿಯಲ್ಲಿ ಸಾಗುವುದರಿಂದ ಮಾತ್ರ ಅಭಿವೃದ್ಧಿ ಸಾಧ್ಯವಾಗುತ್ತದೆ. ಜಿಲ್ಲೆಯ ಅಭಿವೃದ್ಧಿಯಲ್ಲಿ ಬಿ.ರಾಚಯ್ಯ, ಶ್ರೀನಿವಾಸಪ್ರಸಾದ್, ಧ್ರುವನಾರಾಯಣ್ ಸಹ ಸಾಕಷ್ಟು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವ ಮೂಲಕ ತಮ್ಮದೇ ಆದ ವಿಶೇಷ ಕೊಡುಗೆ ನೀಡಿದ್ದಾರೆ ಎಂದು ಹೇಳಿದರು.

ಮಾಜಿ ಶಾಸಕ ಸಿ.ಎಸ್. ನಿರಂಜನ್ ಕುಮಾರ್ ಮಾತನಾಡಿ, ಅಂಬೇಡ್ಕರ್ ಅವರ ಬಗ್ಗೆ ಎಷ್ಟು ಅಧ್ಯಯನ ಮಾಡಿದರೂ ಸಾಲದು. ತಮ್ಮ ಜೀವಮಾನ ವನ್ನು ತ್ಯಾಗ ಮಾಡಿ ದೇಶಕ್ಕೆ ಸಂವಿಧಾನವನ್ನು ಅರ್ಪಣೆ ಮಾಡಿದ್ದಾರೆ. ಅಂಬೇಡ್ಕರ್ ಅವರ ಪ್ರತಿಮೆ ಬಹಳಷ್ಟು ಗ್ರಾಮಗಳಲ್ಲಿ ನಿರ್ಮಾಣವಾಗುತ್ತಿವೆ. ಯುವ ಸಮೂಹ ಉನ್ನತ ಶಿಕ್ಷಣ ಪಡೆಯುವ ಮೂಲಕ ಸಮ ಸಮಾಜ ನಿರ್ಮಾಣ ಮಾಡುವುದರ ಕಡೆಗೆ ಸಾಗಬೇಕೆಂದರು.

ಕಾರ್ಯಕ್ರಮದಲ್ಲಿ ನಳಂದ ಬುದ್ಧವಿಹಾರದ ಬೋಧಿರತ್ನ ಬಂತೇಜಿ, ಚಾಮುಲ್ ನಿರ್ದೇಶಕ ಹೆಚ್.ಎಸ್.ನಂಜುಂಡ ಪ್ರಸಾದ್, ತಾ.ಪಂ. ಮಾಜಿ ಅಧ್ಯಕ್ಷ ಹೆಚ್.ಎನ್.ಬಸವರಾಜು, ಬೆಂಗಳೂರಿನ ಐಎಎಸ್ ಅಕಾಡೆಮಿ ನಿರ್ದೇಶಕ ಡಾ.ಶಿವಕುಮಾರ್, ವೀರಶೈವ ಲಿಂಗಾಯಿತ ಮಹಾಸಭಾ ತಾಲೂಕು ಅಧ್ಯಕ್ಷ ರವಿ ಕಮರಹಳ್ಳಿ, ಮುಖಂಡರಾದ ಮಹದೇವಸ್ವಾಮಿ, ರಂಗಸ್ವಾಮಿ, ಡಾ. ನವೀನ್ ಮೌರ್ಯ, ಗೋಪಾಲ್, ಸುಭಾಷ್ ಮಾಡ್ರಹಳ್ಳಿ ಸೇರಿದಂತೆ ಹಲವರು ಇದ್ದರು.



ಕೋಟೆಕೆರೆ ಗ್ರಾಮದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಪುತ್ಥಳಿ ಲೋಕಾರ್ಪಣೆ ಕಾರ್ಯಕ್ರಮವನ್ನು ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್ ಉದ್ಘಾಟಿಸಿದರು.

ಹೊರೆಯಾಲ ಕೃಷ್ಣ ನಿಧನ



ಬೇಗೂರು, ಜ.17–ತಾಲೂಕು ಪಂಚಾಯಿತಿ ಮಾಜಿ ಉಪಾಧ್ಯಕ್ಷರಾದ ಹೊರೆಯಾಲ ಕೃಷ್ಣ(ಟಿ.ನಾಗರಾಜು)(65) ನಿಧನ ಹೊಂದಿದ್ದಾರೆ. ಮೃತರು ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಸೊಸೆ, ಅಳಿಯಂದಿರು ಹಾಗೂ ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ವರ್ಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಸ್ವಗ್ರಾಮ ಹೊರೆಯಾಲ ಜಮೀನಿನಲ್ಲಿ ನೆರವೇರಿತು.

ಸಂತಾಪ : ಮಾಜಿ ಶಾಸಕ ಸಿ.ಎಸ್ ನಿರಂಜನ್ ಕುಮಾರ್, ಮಾಜಿ ಮಂಡಲ ಅಧ್ಯಕ್ಷ ಹೆಚ್.ಜಿ ನಾರಾಯಣಸ್ವಾಮಿ, ಎಪಿಎಂಸಿ ಮಾಜಿ ಅಧ್ಯಕ್ಷ ರವಿ, ದೊಡ್ಡುಂಡಿ ಜಗದೀಶ್, ಜಿ.ಪಂ ಸದಸ್ಯ ಶಿವಸ್ವಾಮಿ ಸೇರಿದಂತೆ ಬಿಜೆಪಿ ಮುಖಂಡರು ಸಂತಾಪ ಸೂಚಿಸಿದರು.


ಸಿದ್ದರಾಜು



ಚಾಮರಾಜನಗರ, ಜ.17–ತಾಲೂಕಿನ ಪಣ್ಯದಹುಂಡಿ ಗ್ರಾಮದ ನಿವಾಸಿಯೂ ಆದ ಸೆಸ್ಕಾಂ ರಾಮಸಮುದ್ರ ಶಾಖೆಯಲ್ಲಿ ಮೀಟರ್ ರೀಡರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದ ಸಿದ್ದರಾಜು (38) ಶನಿವಾರ ಮಧ್ಯಾಹ್ನ ನಿಧನರಾದರು.

ಮೃತರು ತಂದೆ, ತಾಯಿ, ಪತ್ನಿ ಹಾಗೂ ಮೂರು ವರ್ಷದ ಮಗುವನ್ನು ಅಗಲಿದ್ದಾರೆ. ಶನಿವಾರ ಸಂಜೆ ಪಣ್ಯದಹುಂಡಿ ಗ್ರಾಮದಲ್ಲಿ ಅಂತ್ಯಕ್ರಿಯೆ ನಡೆಯಿತು ಎಂದು ಕುಟುಂಬದ ಮೂಲ ತಿಳಿಸಿದೆ.

ಸಾಹಿತ್ಯ ಸಾಧನೆ ಅಂಬರದಷ್ಟು ಕಂಬಾರರದ್ದು



ಲೇಖನಿಯಿಂದಲೇ ಕನ್ನಡದ ಕೀರ್ತಿಯನ್ನು ಉನ್ನತ ಸ್ಥಾನಕ್ಕೆ ಕೊಂಡೊಯ್ದು, ಕನ್ನಡ ಸಾಹಿತ್ಯದ ಕಂಪನ್ನು ಜಗದಗಲ ಹರಡಿದ ಡಾ. ಚಂದ್ರಶೇಖರ ಕಂಬಾರ ಅವರು ಸಾಹಿತ್ಯ ದಿಗಂತದ ಶಿಖರ ಸೂರ್ಯನೇ ಸರಿ! ಅಂದ ಹಾಗೆ ಕಂಬಾರರ ಮಹತ್ವಾಕಾಂಕ್ಷೆಯ ಕಾದಂಬರಿಯೊಂದರ ಹೆಸರೂ ಶಿಖರ ಸೂರ್ಯ. ಇದು ಗದ್ಯ ರೂಪಿ ಮಹಾ ಕಾವ್ಯ. ಇಂದಿನ ಮತ್ತು ಹಿಂದಿನ ಅನೇಕನೇಕ ಕಥನಗಳನ್ನು ದೇಸಿ ಶೈಲಿಯಲ್ಲಿ ಜಾನಪದ ಬೇರುಗಳಿಂದ ಕಾವ್ಯಮಯವಾಗಿ ಒಟ್ಟಿಗೆ ಕಟ್ಟಿಕೊಡುವ ಈ ಮಹಾಕಾದಂಬರಿಯ ಪರಿ ಇದೆಯಲ್ಲ ಅದೇ ಒಂದು ಅದ್ಭುತ! ಇಂಥ ಅನೇಕ ಅದ್ಭುತಗಳನ್ನು ಸಾಹಿತ್ಯ ಲೋಕದಲ್ಲಿ ಸೃಷ್ಟಿಸಿರುವ ಕಂಬಾರ ದೇಸಿ ಕಸುಬುದಾರ.

ತವರೀ ಹೂವರಳಿ, ಹೂ ಹೂವಿನೊಳಗೊಂದು ಕೈಲಾಸವರಳ್ಯಾವು. ಕೈಲಾಸ ಕೈ ಮುಗಿದು ಭೂ ಲೋಕಕಿಳಿದಾವು. ಸಾವಿರದ ಶರಣವ್ವ ಕನ್ನಡ ತಾಯೇ..... ಎಂದು ತಮ್ಮ ಚಿತ್ತದ ತುಂಬ ಕನ್ನಡದವ್ವನನ್ನು ತುಂಬಿಕೊಂಡು ಸಾವಿರದ ಸಾಹಿತ್ಯವನ್ನು ಸೃಜಿಸುತ್ತಾ ಬಂದಿರುವ ಕನ್ನಡಮ್ಮನ ಸುಪುತ್ರ ಡಾ. ಚಂದ್ರಶೇಖರ ಕಂಬಾರರು ಕನ್ನಡಮ್ಮನ ಮಡಿಲಿಗೆ 48 ಮಹದದ್ಭುತ ಕೃತಿರತ್ನಗಳನ್ನು ತುಂಬಿದವರು. ಈ ಕೃತಿ ರತ್ನಗಳ ಒಟ್ಟಾರೆ ಸಾಧನೆಯಿಂದಲೇ ಕನ್ನಡಕ್ಕೆ ಗಿರೀಶ್ ಕಾರ್ನಾಡರ ನಂತರ 12 ವರ್ಷಗಳ ಸುದೀರ್ಘ ಕಾಲದ ಬಳಿಕ 8ನೇ 'ಜ್ಞಾನಪೀಠ ಪ್ರಶಸ್ತಿ'ಯನ್ನು ಹೊತ್ತು ತಂದು

> **ವಿದ್ಯಾರ್ಥಿ ದೆಸೆಯಲ್ಲೇ ಬರವಣಿಗೆಯಲ್ಲಿ ತೊಡಗಿದ್ದ ಕಂಬಾರರು ಪ್ರೌಢಶಾಲೆಯಲ್ಲಿದ್ದಾಗಲೇ ನಾಟಕವೊಂದನ್ನು ರಚಿಸಿ ಸೈ ಎನಿಸಿಕೊಂಡಿದ್ದರು. ನಂತರದ ದಿನಗಳಲ್ಲಿ ಬರವಣಿಗೆಯಲ್ಲಿ ತಮ್ಮನ್ನು ಗಂಭೀರವಾಗಿ ತೊಡಗಿಸಿಕೊಂಡ ಅವರು ಸಾಹಿತ್ಯವನ್ನು ಉಸಿರಿನಷ್ಟೆ ಸರಾಗವಾಗಿಸಿಕೊಂಡರು. ಪರಿಣಾಮ ಕನ್ನಡ ಸಾಹಿತ್ಯ ಲೋಕಕ್ಕೆ ಕಂಬಾರರಂಥ ಅನನ್ಯ ಪ್ರತಿಭೆ ದೊರೆಯುವಂತಾಯ್ತು. ಭಾರತೀಯ ಸಾಹಿತ್ಯದ ಅತ್ಯುನ್ನತ ಗೌರವವಾದ ಜ್ಞಾನಪೀಠ ಪ್ರಶಸ್ತಿಯು ಕನ್ನಡಕ್ಕೆ ದೊರೆತು ಏಳರಿಂದ ಎಂಟನೇ ಸ್ಥಾನಕ್ಕೇರಿ ದಾಖಲೆ ನಿರ್ಮಿಸುವಂತಾದದ್ದು ಈಗ ಇತಿಹಾಸ.**

ಕನ್ನಡಮ್ಮನನ್ನು ಸಿಂಗರಿಸಿದವರು. ತಮ್ಮ ಸಾಹಿತ್ಯದ 'ಸಿರಿಸಂಪಿಗೆ'ಯಿಂದ ಕನ್ನಡ ಘಮ ಘಮಿಸುವಂತೆ ಮಾಡಿದ್ದ ಅವರು, 'ಜ್ಞಾನ ಪೀಠ'ದ ಹಿರಿಸಂಪಿಗೆಯಿಂದ ಕನ್ನಡಿಗರೆಲ್ಲಾ ಹಿರಿಹಿರಿ ಹಿಗ್ಗುವಂತೆ ಮಾಡಿದವರು.

ಕಂಬಾರರ ಸಾಹಿತ್ಯವೆಂದರೆ ಕರ್ದಾಲು ಕರ್ದಂತೆ ಕೊಡುವ ಗಟ್ಟಿ ಹಾಲಿನಂತಹ ಗಟ್ಟಿ ಸಾಹಿತ್ಯ. ದೇಸಿ ಸೊಗಡಿನ, ಜಾನಪದ ಸೊಗಸಿನ, ಗ್ರಾಮು ಜೀವಾಳದ ಜೀವ ದ್ರವ್ಯದ ದೈತ್ಯ ಪ್ರತಿಭೆ ಅವರದು. ಆಡು ಮುಟ್ಟದ ಸೊಪ್ಪಿಲ್ಲವೆಂಬಂತೆ ಕಂಬಾರರು ಕೈಯಾಡಿಸದ ಸಾಹಿತ್ಯ ಪ್ರಕಾರವಿಲ್ಲ. ಕಾವ್ಯ, ಮಹಾಕಾವ್ಯ, ಕಥೆ, ಕಾದಂಬರಿ, ವಿಮರ್ಶೆ, ಸಂಪಾದನೆ, ಸಂಶೋಧನೆ, ನಾಟಕ... ಹೀಗೆ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಅವರು ಕೃಷಿ ಮಾಡಿದ್ದರೂ ನಾಟಕ ಕಾರರಾಗಿಯೇ ಬಹುಜನಪ್ರಿಯರು. ಅವರದು ಬಹುಮುಖ ಪ್ರತಿಭೆ. ಬಹು ಮುಖ್ಯ ಪ್ರತಿಭೆಯೂ ಹೌದು. ಚೆನ್ನಾಗಿ ಬರೆಯುತ್ತಾರೆ. ಅಷ್ಟೇ ಚೆನ್ನಾಗಿ ಭಾಷಣ ಮಾಡುತ್ತಾರೆ. ಮತ್ತಷ್ಟೂ ಚೆನ್ನಾಗಿ ಅವರದೇ ಪದ್ಯಗಳನ್ನು ಹಾಡುತ್ತಾರೆ. ಇನ್ನೂ ಅಷ್ಟು ಚೆನ್ನಾಗಿ ಸಿನಿಮಾ ತೆಗೆಯುತ್ತಾರೆ ಮತ್ತು ಅಭಿನಯಿಸುತ್ತಾರೆ. ಅದೇ ಕಂಬಾರರ ವೈಶಿಷ್ಟ್ಯ.

ಕಂಬಾರರು ತಮ್ಮ ಬಾಲ್ಯದ ಶಿಕ್ಷಣವನ್ನು ಹುಟ್ಟಿದೂರು ಘೋಡಗೇರಿ ಮತ್ತು ಗೋಕಾಕ್‌ನಲ್ಲಿ ಕಲಿತು, ಬೆಳಗಾವಿಯ ಲಿಂಗರಾಜ ಕಾಲೇಜಿನಲ್ಲಿ ಬಿ.ಎ. ಮುಗಿಸಿ, 1962ರಲ್ಲಿ ಧಾರವಾಡದ ಕರ್ನಾಟಕ ವಿಶ್ವವಿದ್ಯಾನಿಲಯದಿಂದ ಎಂ.ಎ. ಪದವಿ ಪಡೆದರು. ತದನಂತರ ಅದೇ ವಿಶ್ವ ವಿದ್ಯಾನಿಲಯದಲ್ಲಿ ಪಿಹೆಚ್.ಡಿ. ಮಾಡಿ ಉತ್ತರ ಕರ್ನಾಟಕದ ಜನಪದ ರಂಗಭೂಮಿ ಎಂಬ ಸಂಶೋಧನಾ ಮಹಾ ಪ್ರಬಂಧವನ್ನು ನಾಡಿಗೆ ನೀಡಿದರು. ವಿದ್ಯಾರ್ಥಿ ದೆಸೆಯಲ್ಲೇ ಬರವಣಿಗೆಯಲ್ಲಿ ತೊಡಗಿದ್ದ ಕಂಬಾರರು ಪ್ರೌಢಶಾಲೆಯಲ್ಲಿದ್ದಾಗಲೇ ನಾಟಕವೊಂದನ್ನು ರಚಿಸಿ ಸೈ ಎನಿಸಿಕೊಂಡಿದ್ದರು. ನಂತರದ ದಿನಗಳಲ್ಲಿ ಬರವಣಿಗೆಯಲ್ಲಿ ತಮ್ಮನ್ನು ಗಂಭೀರವಾಗಿ ತೊಡಗಿಸಿಕೊಂಡ ಅವರು ಸಾಹಿತ್ಯವನ್ನು ಉಸಿರಿನಷ್ಟೆ ಸರಾಗವಾಗಿಸಿ ಕೊಂಡರು. ಪರಿಣಾಮ ಕನ್ನಡ ಸಾಹಿತ್ಯ ಲೋಕಕ್ಕೆ ಕಂಬಾರರಂಥ ಅನನ್ಯ ಪ್ರತಿಭೆ ದೊರೆಯು ವಂತಾಯ್ತು. ಭಾರತೀಯ ಸಾಹಿತ್ಯದ ಅತ್ಯುನ್ನತ ಗೌರವವಾದ ಜ್ಞಾನಪೀಠ ಪ್ರಶಸ್ತಿಯು ಕನ್ನಡಕ್ಕೆ ದೊರೆತು ಏಳರಿಂದ ಎಂಟನೇ ಸ್ಥಾನಕ್ಕೇರಿ ದಾಖಲೆ ನಿರ್ಮಿಸು ವಂತಾದದ್ದು ಈಗ ಇತಿಹಾಸ.



ಬನ್ನೂರು ಕೆ.ರಾಜು
ಸಾಹಿತಿ, ಪತ್ರಕರ್ತ
ಮೊ: 94815 33167

ವೃತ್ತಿ ಮತ್ತು ಅಲಂಕರಿಸಿದ ಸ್ಥಾನಗಳು

1970ರಲ್ಲಿ ಬೆಂಗಳೂರು ವಿಶ್ವ ವಿದ್ಯಾನಿಲಯದಲ್ಲಿ ಅಧ್ಯಾಪಕರಾಗಿ ವೃತ್ತಿ ಜೀವನ ಆರಂಭಿಸಿದ ಕಂಬಾರರು ಇದಕ್ಕೂ ಮುನ್ನ ಸಾಗರ, ಉಡುಪಿ, ಧಾರವಾಡ ಮುಂತಾದ ಕಡೆ ಕಾಲೇಜು ಅಧ್ಯಾಪಕರಾಗಿದ್ದು. 1968 ರಿಂದ 1969 ರವರೆಗೆ ಅಮೇರಿಕಾದ ಚಿಕಾಗೊ ವಿಶ್ವವಿದ್ಯಾನಿಲಯದಲ್ಲಿ ಕನ್ನಡ ವಿಭಾಗದ ಅಧ್ಯಾಪಕರೂ ಆಗಿದ್ದರು. ಹಂಪಿ ಕನ್ನಡ ವಿಶ್ವ ದ್ಯಾನಿಲಯದ ಮೊದಲ ಕುಲಪತಿಯಾಗಿ 1991ರಿಂದ 1998ರವರೆಗೆ ಎರಡು ಅವಧಿಗೆ ಅಮೂಲ್ಯ ಸೇವೆ ಸಲ್ಲಿಸಿದ್ದರು. 1983ರಿಂದ 1987ರವರೆಗೆ ಕರ್ನಾಟಕ ನಾಟಕ ಅಕಾಡೆಮಿಯ ಅಧ್ಯಕ್ಷರಾಗಿದ್ದ ಕಂಬಾರರು 1996ರಿಂದ 2000ದವರೆಗೆ ದೆಹಲಿಯ ನ್ಯಾಷನಲ್ ಸ್ಕೂಲ್ ಆಫ್ ಡ್ರಾಮಾ ಸೊಸೈಟಿಯ ಅಧ್ಯಕ್ಷರಾಗಿದ್ದ ರಲ್ಲದೆ 1986ರಲ್ಲಿ ಉಪಾಧ್ಯಕ್ಷರಾಗಿದ್ದರು. 2004ರಲ್ಲಿ ವಿಧಾನ ಪರಿಷತ್ ಸದಸ್ಯರಾಗಿದ್ದ ಅವರು, ಕರ್ನಾಟಕ ನಾಟಕ ಅಕಾಡೆಮಿ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಮೈಸೂರಿನ ರಂಗಾಯಣ, ನವದೆಹಲಿಯ ರಾಷ್ಟ್ರೀಯ ನಾಟಕ ಅಕಾಡೆಮಿ, ಕೇಂದ್ರ ಸಾಹಿತ್ಯ ಅಕಾಡೆಮಿ, ಕೇಂದ್ರ ಸಂಗೀತ ಅಕಾಡೆಮಿಗಳ ಕಾರ್ಯ ನಿರ್ವಾಹಕ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದಾರೆ.

ಕಂಬಾರರ ಕೃತಿಗಳು

ಕವನ ಸಂಕಲನಗಳು: ಮುಗುಳು(1958), ಹೇಳತೇನ ಕೇಳ(1964), ತಕರಾರಿನವರು(1971), ಸಾವಿರದ ನೆರಳು(1979), ಆಯ್ದ ಕವನಗಳು(1980), ಬೆಳ್ಳಿಮೀನು (1989), ಅಕ್ಕಕ್ಕ ಹಾಡುಗಳೆ(1993), ಈವರೆಗಿನ ಹೇಳತೇನ ಕೇಳಿ(1994), ಚಕೋರಿ (ಮಹಾಕಾವ್ಯ–1996), ಎಲ್ಲಿದೆ ಶಿವಪುರ?, ಇದು ದೇಸಿ (2010).

ನಾಟಕಗಳು: ಬೆಂಬತ್ತಿದ ಕಣ್ಣು(1961), ನಾರ್ಸಿಸಸ್ (1969), ಋಷ್ಯಶೃಂಗ(1970), ಜೋಕುಮಾರ ಸ್ವಾಮಿ(1972), ಕಿಟ್ಟಿಯಕಥೆ(1974), ಚಾಳೇಶ, ಸಂಗ್ಯಾಬಾಳ್ಯಾ ಅನಬೇಕೋ ನಾಡೊಳಗ, ಜೈಸಿದ ನಾಯಕ (1975), ಖರೋಖರ(1977), ಮತಾಂತರ (1978), ಕಾಡುಕುದುರೆ(1979), ಹುಲಿಯ ನೆರಳು, ಆಲಿಬಾಬ(1980), ಹರಕೆಯ ಕುರಿ(1983), ಕಂಬಾರ ಅವರ ನಾಟಕಗಳು(1984), ಸಾಂಬಶಿವ ಪ್ರಹಸನ (1987), ತುಕ್ರನ ಕನಸು(1989), ಪುಷ್ಪರಾಶಿ (1990), ಸಿರಿಸಂಪಿಗೆ, ಬೆಪ್ಪುತಕ್ಕಡಿ ಬೋಳೇಶಂಕರ, ಮಹಾಮಾಯಿ (1991), ಶಿವರಾತ್ರಿ (2009).

ಕಥೆ–ಕಾದಂಬರಿಗಳು: ಅಣ್ಣ ತಂಗಿ(1956), ಕರಿಮಾಯಿ(1975), ಸಿಂಗಾರವ್ವ ಮತ್ತು ಅರಮನೆ (1982), ಜೀಕೆ ಮಾಸ್ತರರ ಪ್ರಣಯ ಪ್ರಸಂಗ (1986), ಶಿಖರ ಸೂರ್ಯ (ಗದ್ಯ ರೂಪಿ ಮಹಾಕಾವ್ಯ).

ಸಂಶೋಧನಾ ಪ್ರಬಂಧಗಳು: ಉತ್ತರ ಕರ್ನಾಟಕದ ಜನಪದ ರಂಗಭೂಮಿ (ಪಿಹೆಚ್.ಡಿ. ಮಹಾ ಪ್ರಬಂಧ–1965), ಸಂಗ್ಯಾಬಾಳ್ಯಾ(1966), ಬಣ್ಣಿಸಿ ಹಾಡವ್ವ ನನ್ನ ಬಳಗ(1968), ಬಯಲಾಟಗಳು, ಮಾತಾಡು ಲಿಂಗವೇ(1973), ನಮ್ಮ ಜನಪದ(1980), ಬಂದಿರೆ ನನ್ನ ಜೋಳಗೆ(1981), ಕನ್ನಡ ಜಾನಪದ ವಿಶ್ವಕೋಶ (ಎರಡು ಸಂಪುಟಗಳಲ್ಲಿ–1985), ಲಕ್ಷಾಪತಿ ರಾಜನ ಕಥೆ (1986), ಕಾಸಿಗೊಂದು ಸೇರು, ಬೇಡರ ಹುಡುಗ ಮತ್ತು ಗಿಲ್ಲಿ(1989), ನೆಲದ ಮರೆಯ ನಿಧಾನ(1993), ಬೃಹದ್ದೇಸೀಯ ಚಿಂತನ(2001), ನ್ಯಾಷನಲ್ ಸ್ಕೂಲ್ ಆಫ್ ಡ್ರಾಮಾಗಾಗಿ ಆಧುನಿಕ ಭಾರತದ ಸಮಗ್ರ ನಾಟಕಗಳ ರಚನೆ(2000).


ಕಂಬಾರರ ಸಿರಿಸಂಪಿಗೆ, ಜೋಕುಮಾರಸ್ವಾಮಿ, ಕಾಡುಕುದುರೆ, ಸಂಗ್ಯಾಬಾಳ್ಯಾ, ಸಿಂಗಾರವ್ವ ಮತ್ತು ಅರಮನೆ ಅತ್ಯಂತ ಜನಪ್ರಿಯ ಕೃತಿಗಳಾಗಿದ್ದು 'ಜೋಕುಮಾರಸ್ವಾಮಿ' ನಾಟಕ ಭಾರತೀಯ ಹವ್ಯಾಸಿ ರಂಗಭೂಮಿಯ ಇತಿಹಾಸದಲ್ಲೇ ಒಂದು ದಾಖಲೆ ನಿರ್ಮಿಸಿದೆ. 'ಸಿರಿಸಂಪಿಗೆ' ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದು ಕನ್ನಡಕ್ಕೊಂದು ಸಿರಿತಂದಿದ್ದರೆ, 'ಸಿಂಗಾರವ್ವ' ಚಲನಚಿತ್ರವಾಗಿ ರಾಷ್ಟ್ರ ಪ್ರಶಸ್ತಿಯ ಗರಿ ತಂದಿತ್ತಿದೆ. ಇವರು ನೂರಾರು ಪ್ರಬಂಧ ಮತ್ತು ವಿವಿಧ ಬಿಡಿ ಲೇಖನಗಳನ್ನು ಬರೆದಿದ್ದು, ಚಿಕಾಗೊ, ನ್ಯೂಯಾರ್ಕ್, ಬರ್ಲಿನ್, ಮಾಸ್ಕೊ ಮುಂತಾದ ವಿದೇಶಿ ವಿಶ್ವ ವಿದ್ಯಾನಿಲಯಗಳಲ್ಲಿ ಭಾರತೀಯ ಜಾನಪದ ರಂಗಭೂಮಿ ಕುರಿತಾದ ತಮ್ಮ ವಿದ್ವತ್ ಪೂರ್ಣ ಪ್ರಬಂಧಗಳನ್ನು ಮಂಡಿಸಿದ್ದಾರೆ. ಇದಕ್ಕಾಗಿ ಇವರು 1998ರಲ್ಲಿ ವಿಶೇಷವಾಗಿ ಫ್ರಾನ್ಸ್‌ಗೆ ಆಹ್ವಾನಿಸಲ್ಪಟ್ಟಿದ್ದರು. ಇವರು ಎರಡು ಸಂಪುಟಗಳಲ್ಲಿ ಪ್ರಕಟಿಸಿರುವ ಜಾನಪದ ವಿಶ್ವಕೋಶವಂತೂ ವಿಶ್ವ ಜಾನಪದ ಕ್ಷೇತ್ರಕ್ಕೆ ಮಹತ್ತರ ಕಾಣಿಕೆ. ನವ್ಯ ಸಾಹಿತ್ಯ ಉತ್ತುಂಗ ಸ್ಥಿತಿಯಲ್ಲಿದ್ದ ಕಾಲದಲ್ಲಿ ಕಂಬಾರರು ಸಾಹಿತ್ಯ ಲೋಕ ಪ್ರವೇಶಿಸಿದರೂ ಸಹ ನವ್ಯಕ್ಕಷ್ಟೇ ಜೋತು ಬೀಳದೆ, ಗ್ರಾಮೀಣ ಜನಪದ ಸಾಹಿತ್ಯಕ್ಕೇ ನವ್ಯದ ಕಿರೀಟ ತೊಡಿಸಿ ಸೃಜನ ಶೀಲತೆಯನ್ನು ಅಭಿವ್ಯಕ್ತಿಸಿದ ಅಪರೂಪದ ಸಾಧಕರಿವರು. ಇವರ ಹಲವಾರು ಕೃತಿಗಳು ತಮಿಳು, ಪಂಜಾಬಿ, ಹಿಂದಿ, ಮರಾಠಿ, ಇಂಗ್ಲಿಷ್ ಮುಂತಾದ ಭಾಷೆಗಳಿಗೂ ಅನುವಾದಗೊಂಡಿವೆ.

ಸಿನಿಮಾದಲ್ಲೂ ಸಾಧನೆ: ಕಂಬಾರರು ತಮ್ಮದೇ ಕೃತಿಗಳನ್ನಾಧರಿಸಿದ ಕರಿಮಾಯಿ, ಕಾಡುಕುದುರೆ, ಸಂಗೀತ... ಮುಂತಾದ ಚಿತ್ರಗಳನ್ನು ನಿರ್ಮಿಸಿ ನಿರ್ದೇಶಿಸಿದ್ದಾರೆ. ಅವರದೇ ನಾಟಕ 'ಋಷ್ಯಶೃಂಗ'ವನ್ನು ವಿ.ಆರ್.ಕೆ ಪ್ರಸಾದ್ ನಿರ್ದೇಶಿಸಿದ್ದಾರೆ. ಒಂದಾನೊಂದು ಕಾಲದಲ್ಲಿ, ವಂಶವೃಕ್ಷ ಮೊದಲಾದ ಚಿತ್ರಗಳಿಗೆ ಗೀತೆಗಳನ್ನು ಒದಗಿಸಿದ್ದಾರೆ. ಅವರ ಅತ್ಯಂತ ಜನಪ್ರಿಯ ಚಿತ್ರಗೀತೆಗಳಲ್ಲಿ ಕಾಡುಕುದುರೆ ಓಡಿ ಬಂದಿತ್ತಾ... ಒಂದಾಗಿದೆ. ಇದು ಕನ್ನಡಕ್ಕೆ ಮೊಟ್ಟ ಮೊದಲ ರಾಷ್ಟ್ರ ಪ್ರಶಸ್ತಿಯನ್ನು ತಂದು ಕೊಟ್ಟ ಹೆಗ್ಗಳಿಕೆ ಹೊಂದಿದೆ. ಮಹಾನವಮಿ, ಟಿ.ವಿ. ಧಾರಾವಾಹಿಗಾಗಿ ಕೈಯ ಮುಗಿಯುವೆ... ಎಂಬ ಶೀರ್ಷಿಕೆ ಗೀತೆಯನ್ನೂ ಬರೆದಿದ್ದಾರೆ. ಕಾಡು ಕುದುರೆ, ಕರಿಮಾಯಿ, ಹರಕೆಯಕುರಿ, ಹುಲಿಯ ನೆರಳು, ಋಷ್ಯಶೃಂಗ, ಸಿಂಗಾರವ್ವ ಮತ್ತು ಅರಮನೆ ಮುಂತಾದ ಕೃತಿಗಳು ಚಲನಚಿತ್ರಗಳಾಗಿ ಜನಪ್ರಿಯಗೊಂಡಿವೆ. ಅಲ್ಲದೆ ಹಲವಾರು ಪ್ರತಿಷ್ಠಿತ ಪ್ರಶಸ್ತಿಗಳನ್ನು ಪಡೆದು ಕೊಂಡಿವೆ. ಕಂಬಾರರ 'ನಾಯಿ ಕಥೆ' ಸಂಗೀತ ಎಂಬ ಹೆಸರಿನಲ್ಲಿ ಚಲನಚಿತ್ರವಾಗಿ ಐದು ರಾಜ್ಯ ಪ್ರಶಸ್ತಿಗಳನ್ನು ಬಾಚಿಕೊಂಡಿದೆ. ಸಿಂಗಾರವ್ವ ಮತ್ತು ಅರಮನೆ 'ರಾಷ್ಟ್ರಪ್ರಶಸ್ತಿಗೆ ಭಾಜನವಾಗಿದೆ. 'ಜೀಕೆ ಮಾಸ್ತರ ಪ್ರಣಯ ಪ್ರಸಂಗ' ಕಿರು ತೆರೆಯಲ್ಲಿ ಧಾರವಾಹಿಯಾಗಿ ಹೆಸರು ಮಾಡಿದೆ. ಸಾಮಾಜಿಕ ಕಳಕಳಿಯ ಹಲವಾರು ಸಾಕ್ಷ್ಯಚಿತ್ರಗಳನ್ನೂ ಕಂಬಾರರು ನಿರ್ದೇಶಿಸಿದ್ದಾರೆ.

ಪ್ರಮುಖ ಪ್ರಶಸ್ತಿ–ಪುರಸ್ಕಾರಗಳು: ಐದು ಬಾರಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಗೆ ಭಾಜನ ರಾಗಿರುವ ಹಿರಿಮೆಯ ಕಂಬಾರರಿಗೆ 1975 ರಲ್ಲಿ ವರ್ಧಮಾನ ಪ್ರಶಸ್ತಿ ಕಮಲಾ ದೇವಿ ಚಟ್ಟೋಪಾಧ್ಯಾಯ ಪ್ರಶಸ್ತಿ, 1982 ರಲ್ಲಿ ಕೇರಳ ರಾಜ್ಯದ ಕುಮಾರನ್ ಆಶಾನ್ ಪ್ರಶಸ್ತಿ, 1983ರಲ್ಲಿ ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ, 1991ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ, ಕನ್ನಡ ರಾಜ್ಯೋತ್ಸವ ಪ್ರಶಸ್ತಿ, 2001ರಲ್ಲಿ ಭಾರತ ಸರ್ಕಾರದ ಪದ್ಮಶ್ರೀ ಪ್ರಶಸ್ತಿ, ಟಾಗೋರ್ ಸಾಹಿತ್ಯ ಪ್ರಶಸ್ತಿ, ಕಾಳಿದಾಸ್ ಸಮ್ಮಾನ್ ಪ್ರಶಸ್ತಿ, 2002ರಲ್ಲಿ ಕಬೀರ್ ಸಮ್ಮಾನ ಪ್ರಶಸ್ತಿ, ಮಾಸ್ತಿ ಪ್ರಶಸ್ತಿ, ಆಂಧ್ರ ಪ್ರದೇಶದ ಜಷುವಾ ಪ್ರಶಸ್ತಿ, 2003ರಲ್ಲಿ ಕರ್ನಾಟಕ ಸರ್ಕಾರದ ಪಂಪ ಪ್ರಶಸ್ತಿ, 2004ರಲ್ಲಿ ಕನ್ನಡ ವಿಶ್ವವಿದ್ಯಾನಿಲಯದಿಂದ ನಾಡೋಜ ಪ್ರಶಸ್ತಿ, ಕಾಡುಕುದುರೆ ಚಿತ್ರಕ್ಕೆ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಸೇರಿದಂತೆ ದೇಶಾದ್ಯಂತ ನೂರಾರು ಪ್ರಶಸ್ತಿ ಪುರಸ್ಕಾರಗಳು ಕಂಬಾರರನ್ನು ಅರಸಿಕೊಂಡು ಬಂದು ಅವರನ್ನು ಅಲಂಕರಿಸಿ ಧನ್ಯವಾಗಿವೆ. ಇವೆಲ್ಲಕ್ಕೂ ಕಳಶಪ್ರಾಯವಾಗಿ ಭಾರತದ ನೊಬೆಲ್ ಎಂದೇ ಕರೆಯಲ್ಪಡುವ 2010ನೇ ಸಾಲಿನ ಭಾರತೀಯ 'ಜ್ಞಾನಪೀಠ ಪ್ರಶಸ್ತಿ' ಕಂಬಾರರ ಕೊರಳನ್ನು ಧರಿಸಿ, ತನ್ಮೂಲಕ ಕನ್ನಡ ಕೀರ್ತಿಯ 'ಸಿರಿಸಂಪಿಗೆ' ಯ ಸುವಾಸನೆಯನ್ನು ವಿಶ್ವವ್ಯಾಪಿ ಹರಡಿದೆ ಇದಿಷ್ಟೇ ಅಲ್ಲದೆ ಇತ್ತೀಚೆಗಷ್ಟೇ ಇವರು ಜೀವಮಾನ ಸಾಧನೆಗಾಗಿ ಪ್ರತಿಷ್ಠಿತ ದಿ ನ್ಯೂ ಇಂಡಿಯನ್ ಎಕ್ಸ್ ಪ್ರೆಸ್ ಗ್ರೂಪ್ ನ ರಾಮನಾಥ್ ಗೊಯಂಕಾ ರಾಷ್ಟ್ರೀಯ ಸಾಹಿತ್ಯ ಸಮ್ಮಾನ್ ಪ್ರಶಸ್ತಿಗೂ ಭಾಜನರಾದರು.

ಮಕ್ಕಳ ಚಿತ್ರಕಥೆ — 'ಟೋಪಿ ಮಾರುವವ'

■ ಹೆಚ್.ಜಿ.ಎನ್.ಪ್ರಸಾದ್
ಮೊ. 98453 76199




ಒಂದೂರಿನಲ್ಲಿ ಒಬ್ಬ ಟೋಪಿ ಮಾರುವವನಿದ್ದ. ಒಂದು ದಿನ ಆತನಿಗೆ ಟೋಪಿಗಳನ್ನು ಮಾರಾಟ ಮಾಡುತ್ತಾ ಬಹಳ ಆಯಾಸಗೊಂಡಿದ್ದ.




ಸ್ವಲ್ಪ ವಿಶ್ರಾಂತಿ ಪಡೆಯಲು ಒಂದು ದೊಡ್ಡ ಮರದ ಕೆಳಗೆ ಕುಳಿತುಕೊಂಡ. ಹಾಗೆಯೇ ನಿದ್ರೆ ಮಾಡಿಬಿಟ್ಟ.




ಆ ಮರದ ಮೇಲೆ ಬಹಳಷ್ಟು ಕೋತಿಗಳಿದ್ದವು. ಟೋಪಿ ಮಾರುವವ ಮರದ ಕೆಳಗೆ ಮಲಗಿದ್ದನ್ನು ನೋಡಿದವು. ಬಣ್ಣ-ಬಣ್ಣದ ಟೋಪಿಗಳನ್ನು ಕಂಡ ಕೋತಿಗಳು ಆಕರ್ಷಿತವಾಗಿ ಮರದಿಂದ ಕೆಳಗೆ ಜಿಗಿದವು..



ಅವನ ಬುಟ್ಟಿಯಿಂದ ಟೋಪಿಗಳನ್ನು ತೆಗೆದು, ಹಾಕಿಕೊಂಡು ಮತ್ತೆ ಮರದ ಮೇಲೇರಿಬಿಟ್ಟವು. ಸ್ವಲ್ಪ ಸಮಯದ ನಂತರ ಟೋಪಿ ಮಾರುವವ ಎಚ್ಚರಗೊಂಡ ಮೇಲೆ ಬುಟ್ಟಿ ಖಾಲಿಯಾಗಿರುವುದನ್ನು ಕಂಡು ಗಾಬರಿಯಾದ.



ತಲೆ ಎತ್ತಿ ಮರ ನೋಡಿದಾಗ ಅಲ್ಲಿದ್ದ ಕೋತಿಗಳೆಲ್ಲಾ ಟೋಪಿಗಳನ್ನು ಹಾಕಿಕೊಂಡು ಚೇಷ್ಟೆ ಮಾಡುತ್ತಿದ್ದವು. ಟೋಪಿ ಮಾರುವವ 'ತನ್ನ ಟೋಪಿಗಳನ್ನು ವಾಪಸ್ ಕೊಡಿ... ಕೊಡಿ...' ಎಂದು ಎಷ್ಟೇ ಕೇಳಿಕೊಂಡರೂ ಕೋತಿಗಳು ನಗು-ನಗುತ್ತಾ ಆಟವಾಡಿಕೊಳ್ಳುತ್ತಿದ್ದವು. ಟೋಪಿಗಳನ್ನು ವಾಪಸ್ ಪಡೆಯಲು ಒಂದು ಉಪಾಯ ಮಾಡಿದ. ಮೊದಲಿಗೆ ಅವನು ತನ್ನ ಟೋಪಿಯನ್ನು ತೆಗೆದು ಮತ್ತೆ ಹಾಕಿಕೊಂಡ. ಎಲ್ಲಾ ಕೋತಿಗಳೂ ಹಾಗೆಯೇ ಮಾಡಿದವು.



ನಂತರ ಅವನು ತನ್ನ ಟೋಪಿಯನ್ನು ನೆಲಕ್ಕೆ ಎಸೆದ. ಇದನ್ನು ಕಂಡ ಕೋತಿಗಳು, ತಾವೂ ಕೂಡ ಧರಿಸಿದ್ದ ಟೋಪಿಗಳನ್ನು ನೆಲಕ್ಕೆ ಎಸೆದುಬಿಟ್ಟವು. 'ಹಾಗೆ ಬನ್ನಿ...ದಾರಿಗೆ..!' ಎನ್ನುತ್ತಾ ಅವನು ಕೆಳಗೆ ಎಸೆದಿದ್ದ ಟೋಪಿಗಳನ್ನೆಲ್ಲಾ ಆಯ್ದುಕೊಂಡು ವಾಪಸ್ ತನ್ನ ಬುಟ್ಟಿಗೆ ಹಾಕಿಕೊಂಡು ಸಂತೋಷದಿಂದ ಹೊರಟ.

ನೀತಿ :– ಶಕ್ತಿಗಿಂತ ಯುಕ್ತಿ ಮೇಲು

ವಾರಭವಿಷ್ಯ

18.01.2026 ರಿಂದ 24.01.2026

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:– ರವಿ–ಮಕರ, ಚಂದ್ರ–ಧನುಸ್ಸು, ಮಕರ, ಕುಂಭ, ಮೀನ, ಕುಜ–ಮಕರ, ಬುಧ–ಮಕರ, ಗುರು–ಮಿಥುನ, ಶುಕ್ರ–ಮಕರ, ಶನಿ–ಮೀನ, ರಾಹು–ಕುಂಭ ಮತ್ತು ಕೇತು–ಸಿಂಹ.

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ್ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
'ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ'
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ: 9740973224, 9739548720



ಮೇಷ (ಚು,ಚೆ,ಲ,ಲಿ,ಲು,ಲೆ,ಲೂ,ಅ)
ಶೀಘ್ರವಾಗಿ ಯೋಚಿಸುವ ನೀವು ಯಾವುದನ್ನೂ ತಾಳ್ಮೆಯಿಂದ ಹಾಗೂ ಜಾಣ್ಮೆಯಿಂದ ಯೋಚಿಸಿ ಜಾರಿಗೊಳಿಸಿ. ವಾರದ ಆದಿಗೆ ಮನೆಯಲ್ಲಿ ಸಂತಸದ ವಾತಾವರಣ ಇರುತ್ತದೆ. ನೆಂಟರಿಷ್ಟರ ಆಗಮನ, ಅವರ ಉಪಚಾರಕ್ಕೆ ಹೇರಳ ಧನ ವ್ಯಯವಾಗುವುದು. ಶ್ರೀಮತಿಯ ಮುತುವರ್ಜಿಯಿಂದ ಮನೆಯಲ್ಲಿ ಎದುರಾಗುವ ಸಮಸ್ಯೆಯೊಂದು ನಿವಾರಣೆ ಆಗುವುದು. ಟೂರ್ಸ್ ಅಂಡ್ ಟ್ರಾವೆಲ್ಸ್ ಅವರಿಗೆ ಉತ್ತಮ ಸಮಯ.
ಶ್ರೀ ಕಾರ್ತಿಕೇಯ ಪೂಜೆ. ಶುಭ ಸಂಖ್ಯೆ–7

ವೃಷಭ (ಇ,ಉ,ಎ,ಒ,ವ,ವಿ,ವು,ವೆ,ವೊ)
ಶುಭ ಸ್ಥಿತಿಯಲ್ಲಿರುವ ಗುರುವಿನಿಂದ ಆಸ್ತಿ, ಸಂಪತ್ತು ಹೊಂದಲು ಅವಕಾಶವಿದೆ. ಪ್ರಯತ್ನಶೀಲರಾಗಿ ನಿಮ್ಮ ಕನಸುಗಳನ್ನು ಸಾಕಾರ ಮಾಡಿಕೊಳ್ಳಿ. ನಿಮ್ಮ ನೆರೆಹೊರೆಯವರಲ್ಲಿ ಸಕ್ಕರೆಯಂಥ ಮಾತನಾಡಿದರೆ ಅಕ್ಕರೆಯಿಂದ ಬರುತ್ತಾರೆ. ಕೃಷಿಕರಿಗೆ, ಕೃಷಿ ಮಿಷಿನರಿ ಮಾರಾಟಗಾರರಿಗೆ ಹೇರಳ ಧನಲಾಭವಾಗುವುದು. ಜಂಕ್ ಫುಡ್ ಸೇವನೆಯಿಂದ ಅನಾರೋಗ್ಯಕ್ಕೆ ಗುರಿಯಾಗುವಿರಿ. ನಾಲಿಗೆಗೆ ಗುಲಾಮರಾಗಬೇಡಿ.
ಶ್ರೀ ದೇವೀ ದರ್ಶನ. ಶುಭ ಸಂಖ್ಯೆ–6

ಮಿಥುನ (ಕ,ಕಿ,ಕು,ಘ,ಙ,ಛ,ಕೆ,ಕೊ,ಹ)
ಚಂದ್ರ ನಿಮ್ಮ ವದನದಲ್ಲಿ ಮಂದಹಾಸವನ್ನು ತರುವುದರ ಜೊತೆಗೆ ಗೆಳೆಯರ ನಡುವಿನ ಸ್ನೇಹ ಸೇತು ವೃದ್ಧಿಸುವುದು. ನೂತನ ಯೋಜನೆಗೆ ಪ್ರೇರಣೆ ಆಗುತ್ತದೆ. ಈ ವಾರವೆಲ್ಲ ಆದಾಯ–ಖರ್ಚುಗಳು ಸಮತೋಲನವಾಗಿ ಸಾಗುತ್ತವೆ. ಉದ್ಯೋಗ ನಿಮಿತ್ತ ಪ್ರಯಾಣಗಳಿಂದ ದೇಹ ಬಳಲುವುದು. ಅಷ್ಟಮ ಭಾವದಲ್ಲಿ ಪಂಚಗ್ರಹಗಳ 'ಗ್ರಹಯುದ್ಧ' ನಡೆದಿದೆ, ಎಚ್ಚರಿಕೆಯಿಂದಿರಿ.
ಶ್ರೀ ವಿಷ್ಣು ಸಹಸ್ರನಾಮ ಪಠಿಸಿ. ಶುಭ ಸಂಖ್ಯೆ–1

ಕಟಕ (ಹೊ,ಹು,ಹೆ,ಡ,ಡಿ,ಡು)
ವಾರದಾರಂಭಕ್ಕೆ ಶುಭ ಸಮಾಚಾರ ಹೊತ್ತ ಸಂದೇಶ ಒಂದು ಬರಬಹುದು. ಚಂದ್ರನ ನಡೆ ಶುಭವಿದ್ದು ಪ್ರೇಮ ಪ್ರಸಂಗಗಳು ಮನದಲ್ಲಿ ರೋಮಾಂಚನ ಉಂಟು ಮಾಡಲಿವೆ. ಹಣಕಾಸು ಹಾಗೂ ಲೆಕ್ಕ ಪತ್ರ ವಿಚಾರಗಳಲ್ಲಿ ಇತರರನ್ನು ನೆಚ್ಚಿಕೊಂಡರೆ ನಷ್ಟವನ್ನು ಅನುಭವಿಸಬೇಕಾದೀತು. ವಿದ್ಯಾಭ್ಯಾಸ ಖರ್ಚುಗಳು ಎದುರಾಗುವುದು. ನಿಮ್ಮ ಆರೋಗ್ಯದ ಬಗ್ಗೆ ಉದಾಸೀನ ಸಲ್ಲದು.
ಶ್ರೀ ಚಾಮುಂಡೇಶ್ವರಿ ದರ್ಶನ. ಶುಭ ಸಂಖ್ಯೆ–4

ಸಿಂಹ (ಮ,ಮಿ,ಮು,ಮೊ,ಮೆ,ಟ,ಟಿ,ಟು,ಟೆ)
ಲಾಭ ಸ್ಥಾನ ಸ್ಥಿತ ಗುರು ಹಾಗೂ ಅಷ್ಟಮ ಶನಿದೇವ ನಿಮ್ಮ ಅದೃಷ್ಟವನ್ನು ಸಮತೋಲನದಲ್ಲಿ ಇಟ್ಟಿದ್ದಾರೆ. ಈ ವಾರದಲ್ಲಿ ನೀವು ನಿಮ್ಮ ಸ್ವಂತ ಬುದ್ಧಿಯಿಂದ ನಡೆದುಕೊಳ್ಳುವುದು ಒಳ್ಳೆಯದು. ಮಾತೃಶ್ರೀಯವರ ಆಶೀರ್ವಾದದಿಂದ ಕಷ್ಟಕರ ಸಮಸ್ಯೆಯೊಂದು ಬಗೆಹರಿಯುವುದು. ಧನುರ್ಮಾಸ ಅಂತ್ಯಾನಂತರ ವಿವಾಹ ಯೋಗ್ಯರಿಗೆ ಕಂಕಣ ಬಲ ಕೂಡಿ ಬರಲಿದೆ. ಕರುಳು ಸಂಬಂಧಿ ಕಾಯಿಲೆ ಕಾಡಬಹುದು.
ಶ್ರೀ ಸೂರ್ಯಾಷ್ಟಕ ಪಠಿಸಿ. ಶುಭ ಸಂಖ್ಯೆ–3

ಕನ್ಯಾ (ಟೊ,ಪ,ಪಿ,ಪು,ಷ,ಣ,ಠ,ಪೆ,ಪೊ)
ಸದ್ಯದ ಪರಿಸ್ಥಿತಿಯಲ್ಲಿ ನಿಮ್ಮ ಯೋಜನೆಗಳು ಸಫಲವಾಗಬೇಕೆಂದರೆ ಚತುರತೆಯ ಅಗತ್ಯವಿದೆ. ದಶಮದಲ್ಲಿರುವ ಗುರು ಬಂಧುಗಳಿಂದ ದೂಷಣೆ, ವೃಥಾ ಸಂಚಾರಗಳನ್ನು ನೀಡಲಿದ್ದಾನೆ. ಹಣ ಸಂಪಾದನೆಯಾದರೂ ಖರ್ಚಿನ ಮೇಲೆ ಖರ್ಚುಗಳು ಬರುವುದು. ಕಾಂಟ್ರಾಕ್ಟರುಗಳಿಗೆ ಉತ್ತಮ ಯೋಜನೆಗಳು ದೊರೆಯುವುದು. ಫ್ಯಾಬ್ರಿಕೇಷನ್ ಉದ್ಯಮದವರಿಗೆ ಉತ್ತಮ ಮೊತ್ತದ ಆರ್ಡರ್ ದೊರೆಯಲಿದೆ.
ಶ್ರೀ ಅಷ್ಟಾಕ್ಷರಿ ಮಂತ್ರ ಜಪಿಸಿ. ಶುಭ ಸಂಖ್ಯೆ–8

ತುಲಾ (ರ,ರಿ,ರು,ರೆ,ರೊ,ತ,ತಿ,ತು,ತೆ)
ವಾರದಾರಂಭಕ್ಕೆ ಧಾರ್ಮಿಕ ಕೆಲಸ ಕಾರ್ಯಗಳಲ್ಲಿ ಭಾಗವಹಿಸುವಿರಿ. ಸಾಮಾಜಿಕ ಗೌರವ ದೊರೆಯುವುದು. ವ್ಯಾಪಾರ–ವ್ಯವಹಾರಗಳಲ್ಲಿ ಹೊಸ ಚೇತರಿಕೆ ಕಂಡು ಬರುವುದು, ಹಾಗೂ ಹೇರಳ ಧನಲಾಭವಾಗುವುದು. ಕೃಷಿಕರಿಗೆ ಉತ್ತಮ ಫಸಲು ಹಾಗೂ ಧಾರಣೆ ದೊರೆಯುವುದು. ಸ್ತ್ರೀಯರಿಗೆ ರಕ್ತದೋಷ ಕಾಡುವುದು. ಕಾರು ಚಾಲನೆ ನಿಧಾನವಾಗಿ ಮಾಡಿ ನೀವೂ ಕ್ಷೇಮವಾಗಿರಿ, ಇತರರೂ ಕ್ಷೇಮವಾಗಿರಲಿ.
ಶ್ರೀ ದುರ್ಗಾ ಪರಮೇಶ್ವರೀ ದರ್ಶನ. ಶುಭ ಸಂಖ್ಯೆ–5

ವೃಶ್ಚಿಕ (ತೊ,ನ,ನಿ,ನು,ನೆ,ನೊ,ಯ,ಯಿ,ಯ)
ಮಹತ್ವದ ಆಸ್ತಿ ಖರೀದಿಯ ವಿಷಯದಲ್ಲಿ ವಕೀಲರ ಸಲಹೆ ಪಡೆಯಿರಿ. ಈ ವಾರದಲ್ಲಿ ಮುಖ್ಯ ಕೆಲಸಗಳನ್ನು ಆದ್ಯತೆಯ ಆಧಾರದ ಮೇಲೆ ಪೂರೈಸಿಕೊಳ್ಳಿ. ಫ್ಯಾನ್ಸಿ ಪದಾರ್ಥ ಮತ್ತು ಪ್ರಸಾಧನ ಅಂಗಡಿಯವರಿಗೆ ಭರಪೂರ ವ್ಯಾಪಾರ ಹಾಗೂ ಧನಲಾಭವಾಗುವುದು. ಸರ್ಕಾರಿ ಅಧಿಕಾರಿಗಳು ದಾರಿತಪ್ಪಿ ನಡೆದು ತೊಂದರೆಗೆ ಸಿಲುಕುವರು. ಮೂತ್ರ ಸಂಬಂಧಿ ಕಾಯಿಲೆ ಕಾಡಬಹುದು.
ಶ್ರೀ ನೃಸಿಂಹ ಸ್ತೋತ್ರ ಪಠಿಸಿ. ಶುಭ ಸಂಖ್ಯೆ–9

ಧನುಸ್ಸು (ಯೆ,ಯೊ,ಬ,ಬಿ,ಬು,ಧ,ಭ,ಢ,ಬೆ)
ಈ ವಾರ ಗುರುಕೃಪೆ ಇದೆ. ಎನ್‌ಕ್ಯಾಷ್ ಮಾಡಿಕೊಳ್ಳಲು ಹಿಂಜರಿಯದಿರಿ. ವಿವಿಧ ಬಾಬ್ತುಗಳಿಂದ ಹಣ ದೊರೆತು ತಾಪತ್ರಯಗಳ ನಿವಾರಣೆ. ಮಹಿಳಾ ಉದ್ಯೋಗಿಗಳಿಗೆ ಪದೋನ್ನತಿಯ ಸಾಧ್ಯತೆ ಹಾಗೂ ಕಾರ್ಯಾನುಕೂಲ. ದ್ವಿತೀಯದಲ್ಲಿ ರಾಹು ಇರುವ ಕಾರಣ ಆತುರದ ಮನೋವೃತ್ತಿಯಿಂದ ಅನವಶ್ಯಕ ತಪ್ಪುಗಳು ನಡೆದು ಹೋಗುವುದು, ದುಡುಕದಿರಿ.
ಶ್ರೀ ದಕ್ಷಿಣಾಮೂರ್ತಿ ಸ್ತುತಿ. ಶುಭ ಸಂಖ್ಯೆ–2

ಮಕರ (ಬೊ,ಜ,ಜೆ,ಶಿ,ಶು,ಶೆ,ಶೊ,ಗ,ಗಿ)
ನೀವು ಅಂದುಕೊಂಡಿದ್ದೇ ಒಂದು ಈಗ ಆಗುತ್ತಿರುವುದೇ ಮತ್ತೊಂದು. ವಾರಮಧ್ಯೆ ನಿಮ್ಮ ರಾಶಿಗೆ ಬರುವ ಚಂದ್ರನಿಂದ ವ್ಯಾಪಾರದಲ್ಲಿ ನವೀನತೆಯನ್ನು ಹುಡುಕುವಿರಿ. ಹೊಸ ಯೋಜನೆ ಅಳವಡಿಕೆಯ ಜೋಡಣೆಗೆ ಸಿದ್ಧತೆ. ಸಹೋದರ ಸಂಬಂಧಿಗಳಲ್ಲಿ ಆಸ್ತಿ ಹಂಚಿಕೆ ವಿಚಾರವಾಗಿ ವಿವಾದಗಳು ಜರುಗುವುದು. ಅಷ್ಟಮ ಕೇತು ಕಾರಣ ವಿಷಾಹಾರಗಳಿಂದ ಜಾಗ್ರತರಾಗಿರಿ.
ಶ್ರೀ ಹನುಮಾನ್ ಸ್ತುತಿ. ಶುಭ ಸಂಖ್ಯೆ–3

ಕುಂಭ (ಗು,ಗೆ,ಗೊ,ಸ,ಸಿ,ಸು,ಸೆ,ಸೊ,ದ)
ಈ ವಾರ ನಿಮ್ಮ ಗೌರವ ಪ್ರತಿಷ್ಠೆಗಳು ಹೆಚ್ಚಾಗಲಿವೆ. ಮಗನಿಗೆ ನೌಕರಿ ದೊರೆಯುವ ಸಾಧ್ಯತೆ ಇದೆ. ನಂಬಿಕಸ್ಥ ಹಿರಿಯರೊಬ್ಬರ ಮಾರ್ಗದರ್ಶನದಿಂದ ಮಹತ್ವದ ಯೋಜನೆ ಕಾರ್ಯರೂಪಕ್ಕೆ ಬರುತ್ತದೆ. ಯಾರದೋ ಸಾಲಕ್ಕೆ ಜಾಮೀನು ಹಾಕುವ ಮುನ್ನ ನಾಲ್ಕು ಬಾರಿ ಯೋಚಿಸಿ. ವಾರದ ಕಡೆಗೆ ಪುಣ್ಯಕ್ಷೇತ್ರ ಸಂದರ್ಶನ. ಅಲ್ಲಿನ ಗೈಡ್‌ಗಳು ಮೋಸ ಮಾಡಬಹುದು.
ಶ್ರೀ ವೆಂಕಟೇಶ್ವರ ದರ್ಶನ. ಶುಭ ಸಂಖ್ಯೆ–3

ಮೀನ (ದಿ,ದು,ಖ,ಝ,ಥ,ತೆ,ದೊ,ಚ,ಚಿ)
ಈ ವಾರ ಅನಿವಾರ್ಯವಲ್ಲದ ಕೆಲಸಗಳನ್ನು ಮುಂದೂಡಿ. ಕೈಗೆ ಹಣ ಬಂದರೂ ಅನಾವಶ್ಯಕ ಖರ್ಚುಗಳಿಂದ ಜೇಬು ಖಾಲಿ. ಸರ್ಕಾರಿ ಅಧಿಕಾರಿಗಳು ನಿಮ್ಮ ಕೆಲಸಗಳಿಗೆ ಸ್ಪಂದಿಸುವರು. ವಾರದ ಉತ್ತರಾರ್ಧದಲ್ಲಿ ಸೌಖ್ಯ ಹೀನತೆ, ಶತ್ರುಗಳಿಂದ ಉಪದ್ರವ, ಮಾನಹಾನಿ. ಎಲ್ಲರನ್ನೂ ಸಾರಸಗಟಾಗಿ ನಂಬಬೇಡಿ. ಸಟ್ಟಾ–ಜೂಜುಗಳಿಂದ ಯಾರೂ ಶ್ರೀಮಂತರಾಗಿಲ್ಲ ಎಂಬ ಅರಿವಿರಲಿ.
ಶ್ರೀ ರಾಘವೇಂದ್ರ ದರ್ಶನ. ಶುಭ ಸಂಖ್ಯೆ–1



ಸಾಮಾಜಿಕ ಸುಧಾರಣೆಗೆ ಸುತ್ತೂರು ಮಠ ದಾರಿ ದೀಪ

ರಥೋತ್ಸವ, ಧಾರ್ಮಿಕ ಸಭೆಯಲ್ಲಿ ಸಚಿವ ಕೆ.ಹೆಚ್.ಮುನಿಯಪ್ಪ ಬಣ್ಣನೆ


ಶ್ರೀ ಕ್ಷೇತ್ರ ಸುತ್ತೂರಿನಲ್ಲಿ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವದ ಅಂಗವಾಗಿ ಜರುಗಿದ ರಥೋತ್ಸವ ಮತ್ತು ಧಾರ್ಮಿಕ ಸಭೆಯನ್ನು ಸಚಿವ ಕೆ.ಎಚ್.ಮುನಿಯಪ್ಪ ಉದ್ಘಾಟಿಸಿದರು.

ನಂಜನಗೂಡು: ಸುತ್ತೂರು ಮಠವು ಬುದ್ಧ ಬಸವ, ಅಂಬೇಡ್ಕರ್ ಗಾಂಧೀಜಿಯವರ ಚಿಂತನೆಗಳನ್ನು ನಿಜವಾಗಿಯೂ ಕಾರ್ಯ ರೂಪಕ್ಕೆ ತರುವ ಮೂಲಕ ಸಾಮಾಜಿಕ ಸುಧಾರಣೆಗೆ ದಾರಿ ದೀಪವಾಗಿ ಕೆಲಸ ಮಾಡುತ್ತಿದೆ ಎಂದು ಆಹಾರ ಮತ್ತು ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಸಚಿವ ಕೆ.ಎಚ್.ಮುನಿಯಪ್ಪ ಹೇಳಿದರು.

ಶ್ರೀ ಕ್ಷೇತ್ರ ಸುತ್ತೂರಿನಲ್ಲಿ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವದ ಅಂಗವಾಗಿ ಜರುಗಿದ ರಥೋತ್ಸವ ಮತ್ತು ಧಾರ್ಮಿಕ ಸಭೆಯನ್ನು ಉದ್ಘಾಟಿಸಿ ಮಾತನಾಡಿದರು.

ಬಸವಣ್ಣನವರ ಅನುಭವ ಮಂಟಪದಂತೆ ಎಲ್ಲಾ ಜಾತಿ, ಧರ್ಮ ವರ್ಗದ ಜನರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಜಾತ್ರಾ ಮಹೋತ್ಸವದಲ್ಲಿ ಸಮಾನ ಅವಕಾಶ ಕಲ್ಪಿಸಿ ಒಟ್ಟಾಗಿ ಕರೆದುಕೊಂಡು ಹೋಗುವ ಮೂಲಕ ಭಾವೈಕ್ಯತೆಯನ್ನು ಸಾರುತ್ತಿದೆ, ಅಲ್ಲದೆ ಧಾರ್ಮಿಕತೆಯನ್ನು ಹೊರತುಪಡಿಸಿ ಶ್ರೀಮಠದ ವಿದ್ಯಾಸಂಸ್ಥೆಗಳಲ್ಲಿ ಎಲ್ಲಾ ಜಾತಿ ಜನಾಂಗ, ಧರ್ಮದ ಬಡ ವಿದ್ಯಾರ್ಥಿಗಳಿಗೆ ಬಸವಣ್ಣನವರ ಹಾದಿಯಲ್ಲಿ ಸಂಸ್ಕಾರ, ಮಾನವೀಯ ಮೌಲ್ಯ, ಮಾನವನು ಹೇಗೆ ಸಾಮಾಜಿಕವಾಗಿ ಬದುಕು ಕಟ್ಟಿಕೊಳ್ಳಬೇಕು ಎಂಬ ಬಗ್ಗೆ ತಿಳಿಸಿಕೊಡುವುದಲ್ಲದೆ, ಎಲ್ಲರಿಗೂ ಸಮಾನ ಅವಕಾಶ ಕಲ್ಪಿಸಿ ಸಮಾಜದ ಸುಧಾರಣೆಗೆ ದಾರಿದೀಪವಾಗಿ ಕೆಲಸ ಮಾಡುತ್ತಿದೆ ಎಂದು ಹೇಳಿದರು.

> “ಬಸವಣ್ಣನವರು 12ನೇ ಶತಮಾನದಲ್ಲಿ ಅನುಭವ ಮಂಟಪದ ಮೂಲಕ ಸಮಾಜದಲ್ಲಿ ಸಮಾನತೆಯನ್ನು ತಂದುಕೊಟ್ಟರೋ ಅದೇ ಮಾದರಿಯಲ್ಲಿ ಎಲ್ಲಾ ಜಾತಿ, ಎಲ್ಲಾ ಧರ್ಮ, ಎಲ್ಲಾ ಪಂಥದವರನ್ನು ಒಟ್ಟಾಗಿ ಕರೆದುಕೊಂಡು ಸುತ್ತೂರು ಮಠವು ಬಸವಣ್ಣನವರ ಸಾಮಾಜಿಕ ಸಮಾನತೆಯ ಹಾದಿಯಲ್ಲಿ ಸಾಗಿ ಜಾತ್ರಾ ಮಹೋತ್ಸವದಲ್ಲಿ ದೇಶವನ್ನು ಅಭಿವೃದ್ಧಿಯ ಪಥದತ್ತ ನಡೆಸಿ ನಾಡನ್ನು ಕಟ್ಟುವಂತ ಜ್ಞಾನವನ್ನು ಜನರಲ್ಲಿ ಹಂಚುವ ಕೆಲಸವನ್ನು ಮಾಡುತ್ತಿದೆ. ಅಲ್ಲದೆ ಅವಸಾನದ ಸ್ಥಿತಿಗೆ ತಲುಪಿರುವ ರಾಗಿ ಬೀಸುವುದು, ಭತ್ತ ಕುಟ್ಟುವಂತಹ ಹಳ್ಳಿಗಾಡಿನ ನಮ್ಮ ಜಾನಪದ ಸೊಗಡಿನ ಇತಿಹಾಸವನ್ನು ಇಂದಿನ ಪೀಳಿಗೆಗೆ ತಿಳಿಸುವ ಕೆಲಸ ಮಾಡುತ್ತಿದೆ. – **ಜಿ.ಟಿ.ದೇವೇಗೌಡ, ಶಾಸಕ**

ಶಾಸಕ ಹಾಗೂ ಮಾಜಿ ಸಚಿವ ಜಿ.ಟಿ. ದೇವೇಗೌಡ ಮಾತನಾಡಿ, ಈ ಹಿಂದೆ ಸುಗ್ಗಿಯ ನಂತರ ಧರ್ಮ–ಅಧರ್ಮ, ಕೌಟುಂಬಿಕ ಮಹತ್ವವನ್ನು ಸಾರುವ ನಾಟಕಗಳು ಸಮಾಜದ ಒಂದು ಭಾಗವಾಗಿತ್ತು, ಶ್ರೀಗಳು ಜಾತ್ರಾ ಮಹೋತ್ಸವದ ಮೂಲಕ ಕಲೆ, ಸಾಹಿತ್ಯ, ಸಂಗೀತ, ದೇಸಿಯ ಆಟಗಳಿಗೆ ಉತ್ತೇಜನ ನೀಡುವ ಮೂಲಕ ಉಳಿಸಿ ಬೆಳೆಸುವ ಕೆಲಸವನ್ನು ಮಾಡುತ್ತಿದೆ. ಅಲ್ಲದೆ ಶಿಕ್ಷಣ, ಆರೋಗ್ಯ ಕ್ಷೇತ್ರಕ್ಕೆ ಸೀಮಿತವಾಗದೆ ಕೃಷಿ ಕಾಯಕ ಮತ್ತು ರೈತರನ್ನು ಉಳಿಸುವ ಸಲುವಾಗಿ ಕೃಷಿ ವಿಜ್ಞಾನ ತೆರೆದು ರೈತರಿಗೆ ಮಾರ್ಗದರ್ಶನ ನೀಡುತ್ತಿದೆ ಹಾಗೂ ಧಾರ್ಮಿಕತೆಯ ಮೂಲಕ ಜನರಲ್ಲಿ ಸದ್ಗುಣ ಸದ್ಭಕ್ತಿ ಮಾರ್ಗದಲ್ಲಿ, ನಡೆಸಿ ಪ್ರೀತಿ, ವಿಶ್ವಾಸದಿಂದ, ಸಮಾನತೆಯಿಂದ ಜನರಿಗೆ ಬದುಕು ಕಟ್ಟಿಕೊಳ್ಳಲು ಮಾರ್ಗದರ್ಶನ ನೀಡುತ್ತಿದೆ, ನೆರೆ ಸಂದರ್ಭದಲ್ಲಿ ಬದುಕು ಕಳೆದುಕೊಂಡ ಜನರಿಗೆ ಮನೆ ನಿರ್ಮಾಣ ಮಾಡುವ ಮೂಲಕ ಸಾಮಾಜಿಕ ಕಳಕಳಿಯನ್ನು ತೋರಿದ ಶ್ರೀ ಮಠದ ಸೇವಾ ಕಾರ್ಯ ಶ್ಲಾಘನೀಯ ಎಂದರು.

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಸಿ.ಸೋಮಶೇಖರ್ ಮಾತನಾಡಿ ಜಾತ್ರೆಗಳು ಬದುಕಿನ ಯಾತ್ರೆಯಿದ್ದಂತೆ, ಹೃದಯಗಳನ್ನು ಮಿಲನ ಮಾಡುವುದು, ಅಲ್ಲದೆ ಜಾತ್ರೆಯ ಮೂಲಕ ಜಾತ್ಯತೀತವಾಗಿ, ಪಕ್ಷಾತೀತವಾಗಿ, ಧಾರ್ಮಿಕ, ಸಾಂಸ್ಕೃತಿಕ, ಹೃದಯಗಳ ಮಿಲನದ ಸಂಸ್ಕೃತಿಯ ಹಬ್ಬವೇ ಜಾತ್ರೆ. ಎಲ್ಲರ ಹೃದಯವನ್ನು ಬೆಸುಗೆ ಹಾಕುವುದೇ ನಿಜವಾದ ಧರ್ಮದ ಆಶಯ. ಸುತ್ತೂರು ಮಠವು ಜಾತ್ರೆಯ ಆಚರಣೆಯ ಮೂಲಕ ಧರ್ಮದ ನೆಲೆಯಲ್ಲಿ ಸಾಂಸ್ಕೃತಿಕ ಸಂಸ್ಕೃತಿಯ ಸ್ಪರ್ಶವನ್ನು ನೀಡುವ ಮೂಲಕ ಭಾವೈಕ್ಯತೆಯ ಸಂಗಮವಾಗಿ ಕೆಲಸ ಮಾಡುತ್ತಿದೆ ಎಂದರು.

ಸಮಾರಂಭದಲ್ಲಿ ರಾಜಣ್ಣ ಕೊರಾವಿ, ನಾಸಾ ವಿಜ್ಞಾನಿ ಶಿವಾನಂದ್, ಮೈಸೂರಿನ ಪ್ರಾದೇಶಿಕ ಆಯುಕ್ತ ನಿತೇಶ್ ಪಾಟೀಲ್, ಶಂಕರ ಪಿಳ್ಳೆ, ಸಾಲಿ ಸಿದ್ದಯ್ಯ ಸ್ವಾಮಿ ಮಾತನಾಡಿದರು. ಸಮಾರಂಭದಲ್ಲಿ ಸುತ್ತೂರು ಶ್ರೀ ಶಿವರಾತ್ರಿ ದೇಶಿ ಕೇಂದ್ರ ಸ್ವಾಮೀಜಿ, ಹಾಗೂ ಸಿದ್ದಗಂಗಾ ಮಠದ ಶಿವಸಿದ್ದೇಶ್ವರ ಮಹಾ ಸ್ವಾಮೀಜಿ ದಿವ್ಯ ಸಾನಿಧ್ಯ ವಹಿಸಿದ್ದರು. ಕಾರ್ಯಕ್ರಮವನ್ನು ಡಾ.ಜೆ.ಲೋಹಿತ್ ನಿರೂಪಿಸಿದರು, ಪ್ರೊ.ಮೊರಬದ ಮಲ್ಲಿಕಾರ್ಜುನ್ ಎಲ್ಲರನ್ನು ಸ್ವಾಗತಿಸಿದರು. ಕೆ.ಪಿ.ಬಸವರಾಜು ವಂದಿಸಿದರು.

ತೊಗಲು ಬೊಂಬೆ ಆಟದ ಮೂಲಕ ಆರೋಗ್ಯ, ಮೂತ್ರ ಪಿಂಡದ ಬಗ್ಗೆ ಜಾಗೃತಿ



ನಂಜನಗೂಡು: ಸುತ್ತೂರು ಶ್ರೀ ಕ್ಷೇತ್ರದಲ್ಲಿ ನಡೆಯುತ್ತಿರುವ ಜಾತ್ರಾ ಮಹೋತ್ಸವದಲ್ಲಿ ನಶ್ವರ ಸ್ಥಿತಿಗೆ ತಲುಪಿರುವ ತೊಗಲು ಬೊಂಬೆ ಆಟದ ಮೂಲಕ ಜನರಿಗೆ ಆರೋಗ್ಯ ಕಾಳಜಿ ಮತ್ತು ಮೂತ್ರಪಿಂಡ(ಕಿಡ್ನಿ) ಆರೋಗ್ಯದ ಬಗ್ಗೆ ಜೆಎಸ್ಎಸ್ ಆಸ್ಪತ್ರೆಯ ವೈದ್ಯಕೀಯ ವಸ್ತು ಪ್ರದರ್ಶನದಲ್ಲಿ ಜನರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ.

ಕಳೆದ ಬಾರಿ ಹೃದಯದ ಆರೋಗ್ಯಕ್ಕೆ ಜಾಗೃತಿ ಮೂಡಿಸಲಾಗಿತ್ತು, ಈ ಬಾರಿ ಮನುಷ್ಯನ ಮೂತ್ರಪಿಂಡದ ಆರೋಗ್ಯ, ಮೂತ್ರಪಿಂಡದ ಆರೋಗ್ಯವನ್ನು ಕಾಪಾಡುವ ಆಹಾರಗಳು, ಜೀವನಶೈಲಿ, ಮತ್ತು ಮೂತ್ರಪಿಂಡದ ರೋಗಗಳು, ಚಿಕಿತ್ಸೆಯ ಬಗ್ಗೆ ಜನರಲ್ಲಿ ಅರಿವು ಮೂಡಿಸುವ ಮಾದರಿಗಳು ಜಾತ್ರಾ ಮಹೋತ್ಸವದಲ್ಲಿ ಭಾಗಿಯಾಗುವ ಜನರ ಆಕರ್ಷಣೆ ಕೇಂದ್ರವಾಗಿದೆ.

ಮೂತ್ರಪಿಂಡ ಕಳ್ಳತನದ ಬಗ್ಗೆ ಜಾಗೃತಿ ಮೂಡಿಸಲು ನೈಜ ಶವವನ್ನು ಇರಿಸಿ ಮಾನವನ ದೇಹದಲ್ಲಿ ಎಲ್ಲಿ ಮೂತ್ರಪಿಂಡಗಳು ಇರುತ್ತವೆ, ಹೇಗೆ ಮೂತ್ರಪಿಂಡ ಕಳ್ಳತನ ಮಾಡುತ್ತಾರೆ, ಎಂಬ ಬಗ್ಗೆ ಜನರಿಗೆ ತಿಳುವಳಿಕೆ ಮೂಡಿಸುತ್ತಿದೆ, ಜೊತೆಗೆ ತೊಗಲು ಬೊಂಬೆ ಆಟದ ಮೂಲಕ ಕಿಡ್ನಿಯ ಆರೋಗ್ಯ ಮತ್ತು ಮಾನವನ ಆರೋಗ್ಯವನ್ನು ಕಾಪಾಡಿಕೊಳ್ಳಲು ಹೇಗೆ ಜೀವನ ಶೈಲಿಯನ್ನು ಬದಲಾಯಿಸಿಕೊಳ್ಳಬೇಕು ಎಂಬ ಬಗ್ಗೆ ಅರಿವು ಮೂಡಿಸಲಾಗುತ್ತಿದೆ.

ಸುತ್ತೂರಿನಲ್ಲಿ ದೇಸಿ ಆಟಗಳ ಸಂಭ್ರಮ

ಗುಂಡು ಎತ್ತಿದ ಬಲ ಭೀಮರು: ಕೆಸರು ಗದ್ದೆಯಲ್ಲಿ ಗೆಲುವಿಗಾಗಿ ಸೆಣಸಾಟ


<u>ಸಹೋದರರ ಸವಾಲ್:</u> ಸುತ್ತೂರು ಜಾತ್ರಾ ಮಹೋತ್ಸವದ ಅಂಗವಾಗಿ ಏರ್ಪಡಿಸಿದ್ದ ಕಲ್ಲು ಗುಂಡು ಎತ್ತುವ ಸ್ಪರ್ಧೆಯಲ್ಲಿ ಚಾಮರಾಜನಗರ ತಾಲೂಕು ಉಡಿಗಾಲದ ಮಲ್ಲೇಶ್ ಪ್ರಥಮ, ಸಹೋದರ ಮಹೇಶ್ ಉಡಿಗಾಲ ಮೂರನೆಯ ಬಹುಮಾನ ಪಡೆದರು. ಚಿತ್ರ: ಸುತ್ತೂರು ನಂಜುಂಡನಾಯಕ

ನಂಜನಗೂಡು: ಆಧುನಿಕತೆಯ ಭರಾಟೆಯಲ್ಲಿ ಹಾಗೂ ಪಾಶ್ಚಿಮಾತ್ಯ ಕ್ರೀಡೆಗಳ ಅನುಸರಣೆಯಿಂದಾಗಿ ನಮ್ಮ ಗ್ರಾಮೀಣ ಸಂಸ್ಕೃತಿಯ ದೇಸಿ ಆಟಗಳು ಮರೆಯಾಗುತ್ತಿವೆ. ಆದರೆ ನಮ್ಮ ಗ್ರಾಮೀಣ ದೇಸಿ ಆಟಗಳನ್ನು ನೋಡಲು ಮತ್ತು ಆಡಲು ಸುತ್ತೂರು ಜಾತ್ರಾ ಮಹೋತ್ಸವದಲ್ಲಿ ಅವಕಾಶ ಕಲ್ಪಿಸಲಾಗಿದೆ.

ಇತ್ತೀಚಿನ ಯುವಕರು ದೈಹಿಕ ಕಸರತ್ತಿನ ಕ್ರೀಡೆಗಳಿಂದ ದೂರವಾಗಿ ಮೊಬೈಲ್ ಗೇಮ್, ಕಂಪ್ಯೂಟರ್ ಗೇಮ್ ಗಳಲ್ಲಿ ನಿರತರಾಗಿ ಹಲವಾರು ಕಾಯಿಲೆಗಳಿಗೆ ತುತ್ತಾಗುತ್ತಿದ್ದಾರೆ, ಇದನ್ನು ಅರಿತ ಶ್ರೀ ಮಠವು ದೈಹಿಕ ಕಸರತ್ತಿನ ದೇಸಿ ಕ್ರೀಡೆಗಳಿಗೆ ಉತ್ತೇಜನ ನೀಡಿ ಜನರ ಆರೋಗ್ಯವನ್ನು ಕಾಪಾಡುವ ನಿಟ್ಟಿನಲ್ಲಿ ದೇಸಿ ಆಟಗಳ ಸ್ಪರ್ಧೆಯನ್ನು ಏರ್ಪಡಿಸಿದೆ.

ಶನಿವಾರ ಗ್ರಾಮೀಣ ಭಾಗದ ಪುರುಷರಿಗೆ ಕೆಸರಗದ್ದೆ ಓಟ, ಹಗ್ಗ ಜಗ್ಗಾಟ, ಗುಂಡು ಎತ್ತುವ ಸ್ಪರ್ಧೆ, 50 ಕೆಜಿ ಭಾರದ ಚೀಲ ಹೊತ್ತು ಕೊಂಡು ಓಡುವ ಸ್ಪರ್ಧೆ ಏರ್ಪಡಿಸಲಾಗಿತ್ತು. ಹಾಗೆಯೇ ಭಾನುವಾರ ಮಹಿಳೆಯರಿಗಾಗಿ ಅಳಗುಳಿ ಮನೆ, ತುಂಬಿದ ಬಿಂದಿಗೆಯನ್ನು ತಲೆಯ ಮೇಲೆ ಹೊತ್ತು ಓಡುವುದು, ಕುಂಟೆಬಿಲ್ಲೆ, ಆಣೆಕಲ್ಲು, ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ, ಅಲ್ಲದೆ ಶಾಲಾ ಮಕ್ಕಳಿಗಾಗಿ ಎರಡು ದಿನವೂ ಸಹ ಹಗ್ಗ ಜಗ್ಗಾಟ ಕೆಸರು ಗದ್ದೆ ಊಟ ಮತ್ತು ಬುಗುರಿ, ಗೋಲಿಯಾಟ ಚದುರಂಗ ಚೌಕಾಬಾರ ಹೀಗೆ ಮೆದುಳಿಗೆ ಕಸರತ್ತು ನೀಡುವ ಹಲವಾರು ದೇಸಿ ಕ್ರೀಡೆಗಳ ಸ್ಪರ್ಧೆಯನ್ನು ಏರ್ಪಡಿಸಿ ಬಹುಮಾನಗಳನ್ನು ನೀಡಿ ಉತ್ತೇಜನ ನೀಡುವ ಮೂಲಕ ದೇಸಿ ಕ್ರೀಡೆಗಳನ್ನು ಪ್ರೋತ್ಸಾಹಿಸುವ ಕೆಲಸಕ್ಕೆ ಸುತ್ತೂರು ಮಠವು ಮುಂದಾಗಿದೆ. ಪುರುಷರ ದೇಸಿ ಆಟಗಳಲ್ಲಿ ದೈಹಿಕ ಕಸರತ್ತಿನ ಗ್ರಾಮೀಣ ಕ್ರೀಡೆಗಳಾದ 50 ಕೆಜಿ ಭಾರ ಎತ್ತಿ ಓಡುವ ಸ್ಪರ್ಧೆಯಲ್ಲಿ ಉತ್ಸಾಹದಿಂದ ಭಾಗಿಯಾಗಿ ಜನರಿಗೆ ಮನರಂಜನೆ ನೀಡಿದರಲ್ಲದೆ ವಿವಿಧ ತೂಕದ ಗುಂಡುಕಲ್ಲುಗಳನ್ನು ಎತ್ತುವ ಮೂಲಕ ತಾವೆಷ್ಟು ಬಲಭೀಮರು ಎಂದು ನೆರೆದಿದ್ದ ಪ್ರೇಕ್ಷಕರಿಗೆ ತೋರಿಸುವ ಮೂಲಕ ಜನರ ಶಿಳ್ಳೆ, ಚಪ್ಪಾಳೆ, ಮತ್ತು ಶಭಾಷ್ ಗಿರಿಯನ್ನು ಗಿಟ್ಟಿಸಿಕೊಂಡರು.

ಇನ್ನೊಂದೆಡೆ ಗದ್ದೆಯಲ್ಲಿ ತಮ್ಮ ಗೆಲುವಿಗಾಗಿ ಎದ್ದು ಬಿದ್ದು ಓಡುತ್ತಾ ಗುರಿ ಮುಟ್ಟಲು ಪರಿಪಾಡಲು ಪಡುತ್ತಾ ಪ್ರೇಕ್ಷಕರಿಗೆ ಮುದ ನೀಡಿದರು.

ಅಕ್ಷರ, ಅನ್ನ ದಾಸೋಹ ನೀಡುತ್ತಿರುವ ಸಿದ್ಧಗಂಗಾ, ಸುತ್ತೂರು ಮಠಗಳು ವಿಶ್ವಕ್ಕೆ ಮಾದರಿ



ಸುತ್ತೂರು, ಜ.17– ಅಕ್ಷರ ಮತ್ತು ಅನ್ನ ದಾಸೋಹವನ್ನು ನೀಡುತ್ತಿರುವ ಸಿದ್ಧಗಂಗಾ ಹಾಗೂ ಸುತ್ತೂರು ಮಠಗಳ ಕಾಯಕ ಇಡೀ ದೇಶಕ್ಕೆ ಮಾದರಿಯಾಗಿದೆ ಎಂದು ಮಲೆ ಮಹದೇಶ್ವರ ಬೆಟ್ಟದ ಸಾಲೂರು ಮಠದ ಶಾಂತ ಮಲ್ಲಿಕಾರ್ಜುನಸ್ವಾಮಿ ಅವರು ತಿಳಿಸಿದರು.

ಸುತ್ತೂರು ಜಾತ್ರಾ ಮಹೋತ್ಸವದ ಅಂಗವಾಗಿ ಏರ್ಪಡಿಸಿದ್ದ ಸ್ನೇಹ–ಸೌಹಾರ್ದ–ಶಾಂತಿ–ಪ್ರಾರ್ಥನಾ ಪಥ ಸಂಚಲನ ಧ್ವಜಾರೋಹಣ ಮತ್ತು ಧರ್ಮ ಸಂದೇಶ (ಪ್ರಭಾತ್ ಫೇರಿ) ಸಮಾರಂಭದಲ್ಲಿ ಮಾತನಾಡುತ್ತಿದ್ದ ಅವರು, ಸಾವಿರಾರು ವರ್ಷಗಳಿಂದ ಎಲ್ಲರೂ ಒಟ್ಟಿಗೆ ಬಾಳಿ ಬದುಕಲು ಧರ್ಮ ಶಾಂತಿ ಪಾಲನೆಯನ್ನು ನಡೆಸಿಕೊಂಡು ಬರುತ್ತಿರುವ ಧರ್ಮಕ್ಷೇತ್ರಗಳು ಇಡೀ ದೇಶಕ್ಕೆ ಮಾದರಿಯಾಗಿವೆ ಎಂದು ತಿಳಿಸಿದರು.

ಸಮಾರಂಭದಲ್ಲಿ ಸಕಲೇಶಪುರದ ಶ್ರೀಕಲ್ಲುಮಠದ ಶ್ರೀ ಶಾಂತವೀರ ಮಲ್ಲಿಕಾರ್ಜುನ ಸ್ವಾಮಿಗಳು, ದಂಡಿಕೆರೆ ಶ್ರೀಗಳು, ಗುರುಪ್ರಸಾದ್, ಸಂಚಾಲಕರಾದ ನಂದೀಶ್ ಹಾಗೂ ಮಂಜುನಾಥ್ ಜಿ.ಎನ್, ಗ್ರಾಮದ ಮುಖಂಡರಾದ ಪುಟ್ಟಬುದ್ಧಿ, ಮಾಜಿ ಮೇಯರ್ ದಕ್ಷಿಣ ಮೂರ್ತಿ, ಮಲೆ ಮಹದೇಶ್ವರ ಬೆಟ್ಟದ ಧರ್ಮದರ್ಶಿ ಮಂಡಲಿ ಸದಸ್ಯರಾದ ಕೀಳನಪುರ ಮಹದೇವಪ್ಪ, ಚೆನ್ನಬಸಪ್ಪ, ಗುರುಕುಲದ ಸಾಧಕರು, ಜೆಎಸ್ಎಸ್ ಸಂಸ್ಥೆಯ ಸಿಬ್ಬಂದಿವರ್ಗ ಹಾಗೂ ಗ್ರಾಮಸ್ಥರು ಹಾಜರಿದ್ದರು.

ಸುತ್ತೂರು ಜಾತ್ರೆಯಲ್ಲಿ ಡಾಲಿ ಧನಂಜಯ, ನೀನಾಸಂ ಸತೀಶ್, ವಾಸುಕಿ ವೈಭವ್, ನಾಗಭೂಷಣ್




ಸುತ್ತೂರು ಜಾತ್ರೆಗೆ ಆಗಮಿಸಿದ್ದ ಚಿತ್ರನಟರಾದ ಡಾಲಿ ಧನಂಜಯ ಮತ್ತು ನಿನಾಸಂ ಸತೀಶ್ ಅವರನ್ನು ಸುತ್ತೂರು ಶ್ರೀಗಳು ಅಭಿನಂದಿಸಿದರು.

ನಂಜನಗೂಡು: ಶ್ರೀ ಕ್ಷೇತ್ರ ಸುತ್ತೂರಿನಲ್ಲಿ ನಡೆಯುತ್ತಿರುವ ಜಾತ್ರಾ ಮಹೋತ್ಸವದಲ್ಲಿ ಚಿತ್ರನಟರಾದ ಡಾಲಿ ಧನಂಜಯ, ನೀನಾಸಂ ಸತೀಶ್, ನಾಗಭೂಷಣ್, ಹಿನ್ನೆಲೆ ಗಾಯಕ ವಾಸುಕಿ ವೈಭವ್ ಅವರುಗಳ ತಾರಾ ಮೆರುಗು ಜಾತ್ರೆಯನ್ನು ಕಳೆಕಟ್ಟಿಸಿತು.

ನೆಚ್ಚಿನ ಚಿತ್ರನಟರನ್ನು ಕಂಡು ಶಿಳ್ಳೆ, ಚಪ್ಪಾಳೆ, ಘೋಷಣೆಗಳನ್ನು ಕೂಗಿ ಸಂಭ್ರಮಪಟ್ಟರು, ಚಿತ್ರನಟರ ಮಾತುಗಳು ಮತ್ತು ಹಾಡಿಗೆ ಕುಣಿದು ಕುಪ್ಪಳಿಸಿ ಸಂತೋಷ ಪಟ್ಟರು. ಅಲ್ಲದೆ ನೆಚ್ಚಿನ ಚಿತ್ರನಟನ ಜೊತೆಗೆ ಸೆಲ್ಫಿ ಮತ್ತು ಫೋಟೋ ತೆಗೆದುಕೊಳ್ಳಲು ಮುಗಿಬಿದ್ದರು.

ಚಿತ್ರನಟ ಡಾಲಿ ಧನಂಜಯ ಮಾತನಾಡಿ ಸುತ್ತೂರು ಮಠದ ಶಿಕ್ಷಣ ಮತ್ತು ಆರೋಗ್ಯದ ಸೇವೆಗೆ ಎಂದಿಗೂ ಆಭಾರಿಯಾಗಿದ್ದೇನೆ, ಸಂಸ್ಥೆಯ ಮೂಲಕ ಶಿಕ್ಷಣ ಕಲಿತು ಈ ಹಂತಕ್ಕೆ ತಲುಪಿರುವುದಕ್ಕೆ ಶ್ರೀ ಮಠಕ್ಕೆ ಕೃತಜ್ಞನಾಗಿರುತ್ತೇನೆ ಎಂದರು.

ಕನ್ನಡ ಕಲಾವಿದರನ್ನು ಎಲ್ಲರೂ ಆಶೀರ್ವದಿಸಬೇಕು. ಬಡವರ ಮನೆ ಮಕ್ಕಳು ಬೆಳೆಯಬೇಕು ಎಂಬುದು ದೊಡ್ಡ ಆಶಯ, ಅದು ಹೇಳುವುದರಿಂದ ಆಗುವುದಿಲ್ಲ. ನಿರಂತರವಾಗಿ ಶ್ರದ್ಧೆಯಿಂದ ತ್ಯಾಗ, ಸಹನೆಯಿಂದ ಕೆಲಸ ಮಾಡುವುದರಿಂದ ಸಾಧ್ಯವಾಗುತ್ತದೆ, ಬಹಳ ಚೆನ್ನಾಗಿ ನೀವು ನಿಮ್ಮ ಬದುಕನ್ನು ಕಟ್ಟಿಕೊಳ್ಳಿ, ನಮಗಾಗಿ ಹೊಡೆದಾಟ ನಡೆಸಬೇಡಿ. ನಿಮ್ಮನ್ನು ಕೆರಳಿಸುವುದು ಬಹಳ ಸುಲಭ. ನೋಡಿದ್ದೆಲ್ಲವೂ, ಕೇಳಿದ್ದೆಲ್ಲವೂ ಸತ್ಯವಾಗುವುದಿಲ್ಲ ಪ್ರತಿಯೊಂದನ್ನು ಯೋಚಿಸಿ ಪ್ರತಿಕ್ರಿಯಿಸಿ, ನಿಮ್ಮ ಬದುಕು ಕಟ್ಟಿಕೊಳ್ಳಲು ಯೋಚನೆ ಮಾಡಿ ಎಂದು ಯುವಕರಿಗೆ ಕಿವಿಮಾತು ಹೇಳಿದರು.

ಹೆಸರಾಂತ ಚಿತ್ರನಟ ನೀನಾಸಂ ಸತೀಶ್ ಮಾತನಾಡಿ, ಬಸವಣ್ಣ ನವರು ಮನುಷ್ಯ ಕುಲ ಒಂದೇ ಎಂದಿದ್ದರು. ದೇವರು ನಮ್ಮಲ್ಲೇ ಇದ್ದಾರೆ. ನಾವು ಒಳ್ಳೆಯ ಕೆಲಸವನ್ನು ಮಾಡುವ ಮೂಲಕ, ಗುರು ಹಿರಿಯರು ಮತ್ತು ಮಕ್ಕಳಲ್ಲಿ ದೇವರನ್ನು ಕಾಣಬೇಕು ಎಂದು ಹೇಳಿದರು. ದಿ ರೈಸ್ ಆಫ್ ಅಶೋಕ ಚಿತ್ರದ ಹಾಡು ಏಳು.. ಏಳು ಮಾದೇವ ಕೇಳು..ಕೇಳು ಮಾದೇವ, ಹಾಡನ್ನು ಹೇಳಿ ಜನರಿಂದಲೂ ಹಾಡನ್ನು ಹೇಳಿಸಿ ನೆರೆದಿದ್ದ ಪ್ರೇಕ್ಷಕರನ್ನು ರಂಜಿಸಿದರು.

ಹಿನ್ನೆಲೆ ಗಾಯಕ ವಾಸುಕಿ ವೈಭವ್ ಹಾಡಿದ 'ಮನಸ್ಸಿಂದ ಯಾರೂ ಕೆಟ್ಟೋರಲ್ಲ... ಒಂದು ಮಾತು ಬತ್ತದೆ ಒಂದು ಮಾತು ಹೋಯ್ತದೆ...' ಸುಶ್ರಾವ್ಯವಾದ ಹಾಡು ಪ್ರೇಕ್ಷಕರಿಗೆ ಮುದ ನೀಡಿತು.

ನಾಗಭೂಷಣ್ ಮಾತನಾಡಿ ಬಸವಣ್ಣನವರನ್ನು ನಾಸ್ತಿಕರು ಒಪ್ಪುತ್ತಾರೆ. ಯಾವುದೇ ವ್ಯಕ್ತಿ ಮತ್ತು ಸಂಸ್ಥೆ ಅವರ ಕೆಲಸ ಸಮಾಜಮುಖಿಯಾದಾಗ ಎಲ್ಲರೂ ಒಪ್ಪಲೇಬೇಕು. ಅಂತೆಯೇ ಸುತ್ತೂರು ಮಠ ಮತ್ತು ಸುತ್ತೂರಿನ ಶ್ರೀಗಳು ಎಲ್ಲರೂ ಒಪ್ಪುವಂತಹ ಕ್ಷೇತ್ರವಾಗಿದೆ. ಎಂದರಲ್ಲದೇ ಇಂದಿನ ಮಕ್ಕಳಿಗೆ ಕನ್ನಡ ಓದಲು ಬರೆಯಲು ಬರುವುದೇ ಇಲ್ಲ. ನಮ್ಮ ಕನ್ನಡದ ಕವಿ ಕುವೆಂಪು, ಕಾರಂತರು ಗೊತ್ತಿರದೆ, ಇಂಗ್ಲಿಷ್ ಕವಿ ಶೇಕ್ಸ್‌ಪಿಯರ್, ಗೊತ್ತಾದರೆ ಏನು ಉಪಯೋಗ? ನಮ್ಮ ಮುಂದಿನ ಪೀಳಿಗೆಗೆ ನಮ್ಮತನವನ್ನು ರವಾನಿಸಬೇಕು ಆದ್ದರಿಂದ ಎಲ್ಲರೂ ಕನ್ನಡ ಸಾಹಿತ್ಯ ಓದಿ, ಕನ್ನಡ ಸಿನಿಮಾಗಳನ್ನು ನೋಡಿ, ನಿಮ್ಮ ಮಕ್ಕಳಿಗೆ ಕನ್ನಡವನ್ನು ಕಡ್ಡಾಯವಾಗಿ ಕಲಿಸಿ ಎಂದರು.

ಮೈಸೂರು ಗ್ರಾಮಾಂತರ

ವಿಜೃಂಭಣೆಯಿಂದ ನಡೆದ ಹುಲಿಕುರ ಶ್ರೀ ವೇಣುಗೋಪಾಲ ಸ್ವಾಮಿ ರಥೋತ್ಸವ


ಹುಲಿಕುರ ಶ್ರೀವೇಣುಗೋಪಾಲ ಸ್ವಾಮಿ ಜಾತ್ರಾ ಮಹೋತ್ಸವ ವಿಜೃಂಭಣೆಯಿಂದ ನಡೆಯಿತು.

ಸರಗೂರು: ಸಮೀಪದ ಹುಲಿಕುರ ಗ್ರಾಮದಲ್ಲಿ ಶುಕ್ರವಾರ ಶ್ರೀ ವೇಣುಗೋಪಾಲ ಸ್ವಾಮಿ ರಥೋತ್ಸವ ಹಾಗೂ ಜಾತ್ರಾ ಮಹೋತ್ಸವ ವಿಜೃಂಭಣೆಯಿಂದ ನೆರವೇರಿತು. ಸಾವಿರಾರು ಭಕ್ತರು ಜಾತ್ರೆಯಲ್ಲಿ ಪಾಲ್ಗೊಂಡು ದೇವರ ಕೃಪೆಗೆ ಪಾತ್ರರಾದರು.

ಜಾತ್ರಾ ಮಹೋತ್ಸವದ ಅಂಗವಾಗಿ ದೇವಸ್ಥಾನವನ್ನು ವಿವಿಧ ಬಣ್ಣ ಬಳಿದು ತಳಿರು ತೋರಣ ಕಟ್ಟಿ ಸಿಂಗಾರಿಸಲಾಗಿತ್ತು. ವಾದ್ಯಗೋಷ್ಠಿಗಳು ಮೊಳಗಿದವು. ಸತ್ತಿಗೆಗಳು ಮೆರವಣಿಗೆ ನಡೆಸಲಾಯಿತು. ದೇವರ ಉತ್ಸವ ಮೂರ್ತಿ ಮೆರವಣಿಗೆಯಲ್ಲಿ ಸಾಗಿ ಬಂತು. ಈ ವೇಳೆ ಭಕ್ತರು ಹಣ್ಣು, ದವನ ಎಸೆದರು. ನೂತನವಾಗಿ ಶುರುವಾದ ದ್ವೀಪಸ್ತಂಭದ ಬಳಿ ಭಕ್ತರು ವಿಶೇಷ ಪೂಜೆ ಸಲ್ಲಿಸಿದರು.

ಕೆಲವರು ದೇವರ ನಾಮ ಪಠಿಸಿದರು. ಸರತಿ ಸಾಲಿನಲ್ಲಿ ನಿಂತು ದೇವರ ದರ್ಶನ ಪಡೆದು ಪುನೀತರಾದರು. ಗೋವಿಂದ.. ಗೋವಿಂದ. ನಾಮ ಪಠಿಸುತ್ತಾ ದಾಸ ಗುಡ್ಡರು ದೊಣ್ಣೆ ವರಸೆ ಆಡಿದರು. ಇನ್ನು ಕೆಲವರು ದೇವರಿಗೆ ಹೊತ್ತ ಹರಕೆ ತೀರಿಸಿದರು. ಸರಗೂರು ಪೊಲೀಸರು ಯಾವುದೇ ಅಹಿತಕರ ಘಟನೆ ನಡೆಯದಂತೆ ಮುನ್ನೆಚ್ಚರಿಕೆ ಕ್ರಮ ವಹಿಸಿದ್ದರು.

ಜಾತ್ರೆಯ ಅನ್ನ ದಾಸೋಹ ಸ್ಥಳಕ್ಕೆ ತಾಲೂಕು ಆರೋಗ್ಯಾಧಿಕಾರಿ ಡಾ.ರವಿಕುಮಾರ್ ಭೇಟಿ ನೀಡಿ ಭಕ್ತರಿಗೆ ನೀಡುವ ದಾಸೋಹವನ್ನು ಪರಿಶೀಲಿಸಿ ನಂತರ ಭಕ್ತರಿಗೆ ನೀಡಲಾಯಿತು.

ದೇವಸ್ಥಾನದ ಪ್ರಧಾನ ಅರ್ಚಕ ವೇಣುಗೋಪಾಲ ಅವರ ನೇತೃತ್ವದಲ್ಲಿ ದೇವರಿಗೆ ವಿಶೇಷ ಪೂಜೆ ನಡೆಯಿತು.

ದೇವಸ್ಥಾನ ಸಮಿತಿ ಅಧ್ಯಕ್ಷ ಕೆ.ಜಿ.ಸ್ವಾಮಿ, ಕಾರ್ಯದರ್ಶಿ ಎಚ್.ಪಿ.ಬಾಲಕೃಷ್ಣ, ಖಜಾಂಚಿ ಕೆ.ಮೋಹನ್‌ರಾಜ್, ಗೌರವಾಧ್ಯಕ್ಷ ಚಿಕ್ಕವೀರನಾಯಕ, ನಿರ್ದೇಶಕ ವೇಣುಗೋಪಾಲ್, ಎಚ್.ಎಲ್.ನಂಜೇಗೌಡ, ಕೆ.ಗೋಪಾಲ್, ಬಿ.ಸಿ.ಬಸಪ್ಪ, ರವಿಕುಮಾರ್, ಚನ್ನನಾಯಕ, ಸುರೇಂದ್ರ, ರವಿ ಸೇರಿದಂತೆ ಹುಲಿಕುರ ಅಕ್ಕ ಪಕ್ಕದ ಗ್ರಾಮದ ಭಕ್ತಾದಿಗಳು ಹಾಜರಿದ್ದರು.

15 ವರ್ಷಗಳ ನಂತರ ನವೀಕರಣಗೊಂಡ ಗ್ರಾಪಂ ಕಟ್ಟಡ ಉದ್ಘಾಟನೆ


ತಿ.ನರಸೀಪುರ ತಾಲೂಕು ಸೋಸಲೆ ಗ್ರಾಮದಲ್ಲಿ ನವೀಕರಣಗೊಳಿಸಲಾದ ಗ್ರಾಮ ಪಂಚಾಯಿತಿ ಕಟ್ಟಡವನ್ನು ಉದ್ಘಾಟನೆ ಮಾಡಲಾಯಿತು.

ತಿ.ನರಸೀಪುರ, ಜ.17– ಪಂಚಾಯಿತಿಯಲ್ಲಿ ಸರ್ಕಾರದ ಅನುದಾನ ತಂದು ಸಾಕಷ್ಟು ಅಭಿವೃದ್ಧಿ ಕೆಲಸಗಳನ್ನು ಮಾಡಲಾಗಿದ್ದು, ಗ್ರಾಮಗಳಿಗೆ ಮತ್ತಷ್ಟು ಮೂಲ ಸೌಕರ್ಯ ಒದಗಿಸಿಕೊಟ್ಟಲ್ಲಿ ಸೋಸಲೆ ಗ್ರಾಮ ಪಂಚಾಯಿತಿ ಮಾದರಿ ಗ್ರಾಮ ಪಂಚಾಯಿತಿಯಾಗಿ ಹೊರ ಹೊಮ್ಮಲಿದೆ ಎಂದು ಜಿ.ಪಂ. ಮಾಜಿ ಅಧ್ಯಕ್ಷ ಎಸ್.ಎನ್.ಸಿದ್ದಾರ್ಥ ಹೇಳಿದರು.

15 ವರ್ಷಗಳ ನಂತರ ನವೀಕರಣಗೊಂಡ ಸೋಸಲೆ ಗ್ರಾಮ ಪಂಚಾಯ್ತಿ ಕಟ್ಟಡ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

15 ವರ್ಷಗಳ ನಂತರ ಪಂಚಾಯಿತಿ ಕಟ್ಟಡ ಸುಂದರವಾಗಿ ನವೀಕರಣಗೊಂಡಿದೆ ಪಂಚಾಯಿತಿಯಲ್ಲಿ ಸಾಕಷ್ಟು ಅಭಿವೃದ್ಧಿ ಕೆಲಸಗಳನ್ನು ಸರ್ಕಾರದಿಂದ ಅನುದಾನ ತಂದು ಮಾಡಲಾಗಿದೆ. ಸ್ವಚ್ಚತಾ ಆಂದೋಲನ ಅಭಿಯಾನದ ಸಂಧರ್ಭದಲ್ಲಿ ಕಸ ವಿಲೇವಾರಿ ಮಾಡುವುದು, ಪ್ಲಾಸ್ಟಿಕ್ ಮುಕ್ತ ಗ್ರಾಮವನ್ನಾಗಿಸುವ ಗುರಿ, ಕುಡಿಯುವ ನೀರಿನ ಸಂಪರ್ಕ ವ್ಯವಸ್ಥೆ, ಉತ್ತಮವಾದ ರಸ್ತೆ ಹಾಗು ವಿದ್ಯುತ್ ವ್ಯವಸ್ಥೆಗೆ ಪ್ರಾಮುಖ್ಯತೆ ನೀಡುವ ಮೂಲಕ ಪಂಚಾಯಿತಿ ಸದಸ್ಯರು ಹಾಗೂ ಅಧ್ಯಕ್ಷರು ಅಭಿವೃದ್ಧಿ ಮಾಡಿಕೊಂಡು ಹೋದರೆ ಈ ಗ್ರಾಮ ಪಂಚಾಯತಿ ಮಾದರಿ ಗ್ರಾಮ ಪಂಚಾಯಿತಿಯಾಗುವುದರಲ್ಲಿ ಯಾವುದೇ ಸಂಶಯವಿಲ್ಲ, ಹಾಗಾಗಿ ಅಧಿಕಾರದಲ್ಲಿರುವ ಜನಪ್ರತಿನಿಧಿಗಳು ಗ್ರಾಮದ ಜನರಿಗೆ ಅನುಕೂಲ ಕಲ್ಪಿಸಿಕೊಡುವ ನಿಟ್ಟಿನಲ್ಲಿ ಪ್ರಾಮಾಣಿಕ ಸೇವೆ ಮಾಡಬೇಕೆಂದು ಸಲಹೆ ನೀಡಿದರು.

ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ಸಂಘದ ಅಧ್ಯಕ್ಷ ಕರೋಹಟ್ಟಿ ಮಹದೇವಯ್ಯ ಮಾತನಾಡಿ ಪಂಚಾಯಿತಿಯಲ್ಲಿ ಆಡಳಿತ ನಡೆಸುವವರು ರಚನಾತ್ಮಕವಾದ ಗ್ರಾಮೀಣಾಭಿವೃದ್ಧಿ ಕೆಲಸಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಬಂದಿದ್ದಾರೆ. ಯಾವುದೇ ಪಂಚಾಯಿತಿಯಲ್ಲಿ ಸಭಾಂಗಣ ಸುವ್ಯವಸ್ಥಿತವಾಗಿದ್ದರೆ, ಆಡಳಿತ ಕೂಡ ಉತ್ತಮವಾಗಿ ನಡೆಯಲಿದೆ ಎಂದರು.

ಗ್ರಾ.ಪಂ. ಅಧ್ಯಕ್ಷೆ ಭಾಗ್ಯ ಶಿವಕುಮಾರ್ ಬಡ್ಡು, ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ ಅಮ್ಜದ್ ಪಾಷ, ದಲಿತ ಸಂಘರ್ಷ ಸಮಿತಿಯ ಜಿಲ್ಲಾ ಸಂಘದ ವಿಭಾಗೀಯ ಸಂಚಾಲಕ ಆಲಗೂಡು ಡಾ.ಚಂದ್ರಶೇಖರ್, ಅಂಬೇಡ್ಕರ್ ಅಭಿವೃದ್ಧಿ ಸಂಘದ ಅಧ್ಯಕ್ಷ ಕರೂಹಟ್ಟಿ ಮಹದೇವಯ್ಯ ಮಾತನಾಡಿದರು.

ಉಪಾಧ್ಯಕ್ಷೆ ಪ್ರೀತಿ ರಘುವೀರ್, ಸದಸ್ಯರುಗಳಾದ ಎಸ್. ಪುಟ್ಟಸ್ವಾಮಿ, ಸುವರ್ಣ ಲಿಂಗಯ್ಯ, ಎಂ.ನಾಗೇಂದ್ರ ಶೈಲಜಾ ಮಹೇಶ್, ಎಸ್.ಎನ್. ಮಧುಸೂದನ್, ಮಹೇಶ್, ರೇಖಾ ಪ್ರಭುಲಿಂಗ ರಾಜು, ಎಸ್.ವಿ. ಮಹೇಶ್ ಕುಮಾರ್, ನಾಗರತ್ನ ಸಿದ್ದರಾಜು, ಮಲ್ಲೇಶ್, ರಾಜಮ್ಮ ಮಾದೇಶ, ಪಿ.ಜ್ಞಾನೇಂದ್ರ, ಹೇಮಾ ಮಹದೇವ ಪ್ರಸಾದ್, ಸುಂದರ್, ಮಂಜುನಾಥ, ಸಿ.ನಾರಾಯಣ, ಚಾಂದಿನಿ, ಪ್ರಕಾಶ್, ಆಶಾಮಹದೇವಯ್ಯ, ನಂಜುಂಡಯ್ಯ, ಚಿನ್ನಸ್ವಾಮಿ, ಮಂಜುನಾಥ್, ಧರ್ಮ ರತ್ನಾಕರ, ಮಹಾದೇವ ಶೆಟ್ಟಿ, ರಾಜಣ್ಣ, ನಾಗರಾಜು, ಸಿಬಿ ಹುಂಡಿ ಸಿದ್ದು ಸೇರಿದಂತೆ ಮತ್ತಿತರರಿದ್ದರು.

ಕೋಮಲಾಪುರ ಡೇರಿಗೆ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ಬೆಟ್ಟದಪುರ: ಸಮೀಪದ ಕೋಮಲಾಪುರ ಹಾಲು ಉತ್ಪಾದಕ ಸಹಕಾರ ಸಂಘದ ಅಧ್ಯಕ್ಷ ಉಪಾಧ್ಯಕ್ಷರ ಚುನಾವಣೆ ನಡೆಯಿತು.

ಅಧ್ಯಕ್ಷ ಸ್ಥಾನಕ್ಕೆ ನಾಗರಾಜು, ಉಪಾಧ್ಯಕ್ಷ ಸ್ಥಾನಕ್ಕೆ ರತ್ನಮ್ಮ ಮಾತ್ರ ನಾಮಪತ್ರ ಸಲ್ಲಿಸಿದ್ದರಿಂದ ಅವಿರೋಧವಾಗಿ ಆಯ್ಕೆ ಮಾಡಲಾಗಿದೆ ಎಂದು ಚುನಾವಣಾಧಿಕಾರಿ ಗಿರೀಶ್ ಘೋಷಣೆ ಮಾಡಿದರು. ನಿರ್ದೇಶಕರಾದ ಸಂತೋಷ್, ಅಣ್ಣಪ್ಪಶೆಟ್ಟಿ, ಸ್ವಾಮಿಗೌಡ, ಕೆ.ಎಂ.ಶಿವಣ್ಣ, ಶಿವಣ್ಣ, ಹುಚ್ಚಯ್ಯ, ಬಸವೇಗೌಡ, ರತ್ನಮ್ಮ, ಪದ್ಮಮ್ಮ, ವಿಸ್ತರಣಾಧಿಕಾರಿ ಶ್ರೀಕಾಂತ್, ಮುಖ್ಯ ಕಾರ್ಯನಿರ್ವಹಣಾಧಿಕಾರಿ ದಿಲೀಪ್ ಕುಮಾರ್ ಭಾಗವಹಿಸಿದ್ದರು.

ಕಾಂಗ್ರೆಸ್‌ಗೆ ಗುಡ್‌ಬೈ

ಪಿರಿಯಾಪಟ್ಟಣ: ತಾಲೂಕು ಕಾಂಗ್ರೆಸ್ ಕಾನೂನು ಹಾಗೂ ಮಾನವ ಹಕ್ಕು ಘಟಕದ ಅಧ್ಯಕ್ಷರಾಗಿ ನೇಮಕಗೊಂಡಿದ್ದ ವಕೀಲ ಕೆ.ಬಿ.ಸುದೀಶ್ ಅವರು ತಮ್ಮ ವೈಯುಕ್ತಿಕ ಕಾರಣಗಳಿಂದಾಗಿ ಪಕ್ಷವನ್ನು ತೊರೆಯುವ ಇಂಗಿತ ವ್ಯಕ್ತಪಡಿಸಿದ್ದಾರೆ.

ಪತ್ರಿಕಾ ಹೇಳಿಕೆಯೊಂದನ್ನು ನೀಡಿರುವ ಅವರು ಪಕ್ಷದಲ್ಲಿ ತಾವು ಹಲವು ವರ್ಷಗಳಿಂದ ಪ್ರಾಮಾಣಿಕವಾಗಿ ಹಾಗೂ ನಿಷ್ಠೆಯಿಂದ ಸೇವೆ ಸಲ್ಲಿಸುತ್ತಿದ್ದು ಅದಕ್ಕೆ ಪ್ರತಿಫಲವಾಗಿ ನನ್ನ ಬಗ್ಗೆ ಪಕ್ಷದ ಕೆಲವು ಮುಖಂಡರು ತೆಗೆದುಕೊಂಡ ನಿರ್ಧಾರ, ನಿಲುವು ಹಾಗೂ ನಿರ್ಲಕ್ಷತನವೇ ನಾನು ಪಕ್ಷ ತೊರೆಯಲು ಕಾರಣವೆಂದು ಬೇಸರ ವ್ಯಕ್ತಪಡಿಸಿದ್ದಾರೆ.

ಶಾಲಾ ವಾರ್ಷಿಕೋತ್ಸವ


ಬನ್ನೂರು ಲಯನ್ಸ್ ವಿದ್ಯಾ ಸಂಸ್ಥೆಯ 46ನೇ ವರ್ಷದ ಶಾಲಾ ವಾರ್ಷಿಕೋತ್ಸವವನ್ನು ಖ್ಯಾತ ವಾಗ್ಮಿ ಪ್ರೊ.ಎಂ.ಕೃಷ್ಣೇಗೌಡರು ಉದ್ಘಾಟಿಸಿದರು. ಲಯನ್ಸ್ ವಿದ್ಯಾ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಹಾಗೂ ಮಾಜಿ ಶಾಸಕ ಲ.ಎಸ್.ಕೃಷ್ಣಪ್ಪ, ಅಧ್ಯಕ್ಷ ಲ.ಬಿ.ಬಸವರಾಜು, ಕಾರ್ಯದರ್ಶಿ ಲ.ಎಸ್.ರಾಮಚಂದ್ರ, ಖಜಾಂಚಿ ಲ.ಹೆಚ್.ಎಂ.ಸ್ವಾಮಿ ಹಾಗೂ ಎಲ್ಲಾ ಲಯನ್ಸ್ ಸದಸ್ಯರು ಭಾಗವಹಿಸಿದ್ದರು.

ಸಿಎಂ ಸಿದ್ದರಾಮಯ್ಯರ ಬಾಯೇ ಬಚ್ಚಲಾಗಿದೆ! ಅವರಂತೆ ಅವರ ಪಕ್ಷದವರು!!

ಪೌರಾಯುಕ್ತೆ ಅಮೃತಗೌಡಗೆ ಕಾಂಗ್ರೆಸ್ ಮುಖಂಡ ರಾಜೀವ್‌ಗೌಡ ಧಮ್ಕಿ ಪ್ರಕರಣಕ್ಕೆ ಪ್ರತಾಪ್ ಸಿಂಹ ಪ್ರತಿಕ್ರಿಯೆ

ಮೈಸೂರು, ಜ.17(ಬಿಎಲ್‌ಯು)– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಬಾಯೇ ಬಚ್ಚಲಾಗಿದೆ. ಅವರೇ ಯಾರಿಗೂ ಮರ್ಯಾದೆ ಕೊಡುವುದಿಲ್ಲ. ಅದನ್ನೆ ಅವರ ಪಕ್ಷದವರು ಅನುಸರಿಸುತ್ತಿದ್ದಾರೆ ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ಟೀಕಿಸಿದ್ದಾರೆ.



ಶಿಡ್ಲಘಟ್ಟದಲ್ಲಿ ಪೌರಾಯುಕ್ತೆ ಅಮೃತ ಗೌಡ ಅವರಿಗೆ ಕಾಂಗ್ರೆಸ್ ಮುಖಂಡ ರಾಜೀವ್‌ಗೌಡ ಧಮ್ಕಿ ಹಾಕಿರುವ ಪ್ರಕರಣದ ಬಗ್ಗೆ ಪ್ರತಿಕ್ರಿಯೆ ನೀಡಿದ ಅವರು, ಸಿದ್ದರಾಮಯ್ಯ ಅವರು ಬಳಸುವ ಭಾಷೆ ಸರಿ ಇದ್ದರೆ, ಅವರ ಪಕ್ಷದ ಕಾರ್ಯಕರ್ತರು ಕೂಡ ಅದನ್ನು ಪಾಲಿಸುತ್ತಿದ್ದರು. ಆದರೆ, ಅವರ ಸಿಎಂ ಹಗುರವಾಗಿ ಮಾತನಾಡುವುದರಿಂದ ಅವರ ಪಕ್ಷದ ಕಾರ್ಯಕರ್ತರು ಕೂಡ ಪಾಲಿಸುತ್ತಿದ್ದಾರೆ ಅಷ್ಟೆ, ಯಥಾ ರಾಜಾ, ತಥಾ ಪ್ರಜಾ ಎಂದು ಗೇಲಿ ಮಾಡಿದರು.

ಈ ಹಿಂದೆ ಮೈಸೂರು ಜಿಲ್ಲಾಧಿಕಾರಿ ಶಿಖಾ ಅವರಿಗೆ ಸಿದ್ದರಾಮಯ್ಯ ಅವರ ಭಂಟ ನಿಂದಿಸಿದ ಪ್ರಕರಣ ಈಗಲೂ ಮುಂದುವರೆದಿದೆ ಎಂದು ಪ್ರತಾಪ್ ಸಿಂಹ ಆರೋಪಿಸಿದರು.

ಮೈಸೂರಿನ ಚಾಮರಾಜ ವಿಧಾನಸಭಾ ಕ್ಷೇತ್ರದ ಜನರಿಗೆ ಉಪಕಾರ ಮಾಡದಿದ್ದರೂ ಪರ್ವಾಗಿಲ್ಲ, ಆದರೆ ಉಪದ್ರವ (ತೊಂದರೆ ಕೊಡುವವರು) ಬೇಕಿಲ್ಲ. ವಿದ್ಯಾವಂತರೆ ಇರುವ ಈ ಕ್ಷೇತ್ರದ ಜನರು ವಿದ್ಯಾವಂತ ಪ್ರತಿನಿಧಿಯನ್ನು ಆಯ್ಕೆ ಮಾಡಲು ಬಯಸುತ್ತಾರೆ. ಮಾಜಿ ಶಾಸಕರಾದ ಹೆಚ್.ಎಸ್. ಶಂಕರಲಿಂಗೇಗೌಡರು ಜನಸ್ನೇಹಿ, ವಾಸು ಅಮರು ಅಭಿವೃದ್ಧಿ ಸ್ನೇಹಿ. ಇವರಿಬ್ಬರು ನನಗೆ ಸದಾ ಸ್ಮರಣೀಯರು. ನಾನು ಚಾಮರಾಜ ಕ್ಷೇತ್ರದ ಟಿಕೆಟ್ ಆಕಾಂಕ್ಷಿಯಷ್ಟೆ ಅಭ್ಯರ್ಥಿ ಯಾರಾಗಬೇಕೆಂದು ಪಕ್ಷದ ಹೈಕಮಾಂಡ್ ತೀರ್ಮಾನ ಮಾಡುತ್ತದೆ ಆದರೆ ಕೆಲವರಿಗೆ ಆಕಾಂಕ್ಷಿಗೂ, ಅಭ್ಯರ್ಥಿಗೂ ವ್ಯತ್ಯಾಸ ಗೊತ್ತಿಲ್ಲದೆ ಏನೇನೋ ಮಾತನಾಡುತ್ತಾರೆ.
– ಪ್ರತಾಪ್ ಸಿಂಹ, ಮಾಜಿ ಸಂಸದ

ಸತ್ತ ಆಡಳಿತದ ಹೆಣವನ್ನು ಸಿದ್ದರಾಮಯ್ಯ ಮುಂದೆ ಹೊತ್ತಿದ್ದರೆ, ಡಿಕೆಶಿ ಹಿಂದೆ ಹೊತ್ತಿದ್ದಾರೆ!

ಸತ್ತ ಆಡಳಿತದ ಹೆಣವನ್ನು ಸಿದ್ದರಾಮಯ್ಯ ಮುಂದೆ ಹೊತ್ತು ಸಾಗುತ್ತಿದ್ದರೆ, ಡಿ.ಕೆ. ಶಿವಕುಮಾರ್ ಹಿಂದೆ ಹೊತ್ತಿದ್ದಾರೆ ಎಂದು ಪ್ರತಾಪ್ ಸಿಂಹ ಲೇವಡಿ ಮಾಡಿದರು.

ಸತ್ತ ಆಡಳಿತದ ಹೆಣವನ್ನು ಡಿ.ಕೆ.ಶಿವಕುಮಾರ್ ಹೊರಲು ಪ್ರಯತ್ನಿಸುತ್ತಿದ್ದಾರೆ. ಹೆಣವನ್ನು ಮುಂದೆ, ಹಿಂದೆ ಯಾರೇ ಹೊರಲಿ, ಅದರಲ್ಲಿ ಯಾವುದೇ ವ್ಯತ್ಯಾಸವಿರುವುದಿಲ್ಲ ಎಂದು ಹೇಳಿದರು. ಡಿ.ಕೆ.ಶಿವಕುಮಾರ್ ಅವರು ಸಿಎಂ ಸ್ಥಾನಕ್ಕಾಗಿ ಪೈಪೋಟಿ ಮಾಡುತ್ತಾ ಹೋದಷ್ಟು ಸಿದ್ದರಾಮಯ್ಯ ತಮ್ಮ ಸ್ಥಾನವನ್ನು ಭದ್ರವಾಗಿ ಉಳಿಸಿಕೊಳ್ಳುತ್ತಾರೆ ಎಂದು ಅಭಿಪ್ರಾಯಪಟ್ಟರು.

ಒಂದಂತೂ ಸತ್ಯ, ಸಿದ್ದರಾಮಯ್ಯ ಯಾವತ್ತಿಗೂ ದೇವರಾಜ ಅರಸ್ ಆಗಲು ಸಾಧ್ಯವಿಲ್ಲ, ಆದಷ್ಟು ಬೇಗ ಜನರ ಮನಸ್ಸಿನಿಂದ ದೂರವಾಗುತ್ತಾರೆ. ಅವರನ್ನು ಜನರು ಮರೆಯುವ ದಿನಗಳು ದೂರವಿಲ್ಲ ಎಂದು ಎಚ್ಚರಿಸಿದರು.

ಕಳೆದ ಬಾರಿಯ ಚುನಾವಣೆಯಲ್ಲಿ ರಾಜ್ಯದ ಜನರು ಮಾಡಿದ ತಪ್ಪಿನಿಂದ ಕಾಂಗ್ರೆಸ್ ಅಧಿಕಾರಕ್ಕೆ ಬಂದಿದೆ. ಇದರಿಂದ ಇನ್ನೂ ಎರಡೂವರೆ ವರ್ಷ ಸತ್ತ ಆಡಳಿತವನ್ನು ಸಹಿಸಿಕೊಳ್ಳಬೇಕಿದೆ. ಈ ಸರ್ಕಾರ ಬೀಳುವುದಿಲ್ಲ, ಆದರೆ ಕುರ್ಚಿಯಲ್ಲಿ ಕೂರುವವರು ಬದಲಾಗಬಹುದಷ್ಟೆ ಎಂದು ಪ್ರತಾಪ್ ಸಿಂಹ ಹೇಳಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಪರಾಶಕ್ತಿ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಮನ ಶಂಕರ ವರಪ್ರಸಾದಗಾರು (ತೆ)	3 ಪ್ರದರ್ಶನಗಳು
ಬಾಲಾಜಿ	(ದೂ: 2497199)
ತೇರಾ ಇಸ್ಕ್ ಮೈನ್ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
45 ಫೇಸ್ ದಿ ಇಯರ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ರಾಜಾ ಸಾಬ್ (ಕ)	2 ಪ್ರದರ್ಶನಗಳು
ರಾಜಕಮಲ್	
ವಾ ವಾಥಿಯಾರ್ (ತ)	4 ಪ್ರದರ್ಶನಗಳು
ಸಂಗಂ	
ಮಾರ್ಕ್ (ಕ)	4 ಪ್ರದರ್ಶನಗಳು
ಲಿಡೋ	
ಡೆವಿಲ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ರಾಜಾ ಸಾಬ್ (ಹಿಂ)	4 ಪ್ರದರ್ಶನಗಳು

ಮೈಸೂರು ಮೃಗಾಲಯದಲ್ಲಿ 'ಪ್ರೀತಿ' ಸಾವು!



ಮೈಸೂರು, ಜ.17(ಎಂಟಿವೈ)– ಮೈಸೂರಿನ ಚಾಮರಾಜೇಂದ್ರ ಮೃಗಾಲಯದ 'ಪ್ರೀತಿ' ಹೆಣ್ಣು ಹುಲಿ ಅನಾರೋಗ್ಯದಿಂದ ಮೃತಪಟ್ಟಿದೆ.

ಮೈಸೂರು ಮೃಗಾಲಯದಲ್ಲಿನ ತಾರ ಹಾಗೂ ರಾಕಿ ಜೋಡಿಗೆ 2022ರ ಏ.27ರಂದು 'ಪ್ರೀತಿ' ಜನಿಸಿತ್ತು. 3.9 ವರ್ಷದ ಪ್ರೀತಿಗೆ, ಇತ್ತೀಚೆಗೆ ಅರ್ನಿಯಾ ಶಸ್ತ್ರಚಿಕಿತ್ಸೆ ನಡೆಸಲಾಗಿತ್ತು. ಕಳೆದ 5 ದಿನದಿಂದ ಆಹಾರ ತ್ಯಜಿಸಿತ್ತು. ತೀವ್ರ ರಕ್ತ ಕಣದ ಸಮಸ್ಯೆಗೆ ತುತ್ತಾಗಿದ್ದ ಪ್ರೀತಿ ಹುಲಿ ಇಂದು ಮಧ್ಯಾಹ್ನ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದೆ. ಪ್ರೀತಿಯೊಂದಿಗೆ ಸ್ನೇಹ ಇದ್ದು, ಅದರ ಆರೋಗ್ಯದ ಮೇಲೆ ನಿಗಾ ಇಡಲಾಗಿದೆ. ಮೃತ ಹುಲಿಯ ಮರಣೋತ್ತರ ಪರೀಕ್ಷೆ ನಡೆಸಿ, ನಿಯಮಾನುಸಾರ ಅಂತ್ಯಕ್ರಿಯೆ ನೆರವೇರಿಸಲಾಗಿದೆ ಎಂದು ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕರಾದ ಪಿ.ಅನುಷಾ ತಿಳಿಸಿದ್ದಾರೆ.

ಇಂದು ಮುಖ್ಯಮಂತ್ರಿ ಮೈಸೂರು ಜಿಲ್ಲಾ ಪ್ರವಾಸ

ಮೈಸೂರು, ಜ.17– ಮುಖ್ಯಮಂತ್ರಿ ಸಿದ್ದರಾಮಯ್ಯರವರು ಜ.18 ರಂದು ಮೈಸೂರು ಜಿಲ್ಲಾ ಪ್ರವಾಸ ಕೈಗೊಳ್ಳಲಿದ್ದಾರೆ. ಅಂದು ಬೆಳಿಗ್ಗೆ 10.30 ಗಂಟೆಗೆ ವಿಶೇಷ ವಿಮಾನದ ಮೂಲಕ ಮೈಸೂರಿಗೆ ಆಗಮಿಸಲಿದ್ದಾರೆ.



ನಂತರ ಬೆಳಗ್ಗೆ 10.45 ಗಂಟೆಗೆ ಸುತ್ತೂರು ಜಾತ್ರಾ ಮಹೋತ್ಸವದ ಅಂಗವಾಗಿ ಕೃಷಿ ವಿಚಾರ ಸಂಕಿರಣದ ಉದ್ಘಾಟನೆಯನ್ನು ಮಾಡಲಿದ್ದು, ಕೃಷಿಯಲ್ಲಿ ಮಹಿಳೆ ಸುಸ್ಥಿರ ಅಭಿವೃದ್ಧಿ ಮತ್ತು ಆಹಾರ ಭದ್ರತೆ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

ಮಧ್ಯಾಹ್ನ 2.50 ಗಂಟೆಗೆ ಟಿ.ನರಸಿಪುರ ತಾಲೂಕಿನ ಕುಪ್ಯಾ ಗ್ರಾಮದಲ್ಲಿ ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ್ ವತಿಯಿಂದ ಆಯೋಜಿಸಿರುವ ವರುಣಾ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ವಿವಿಧ ಇಲಾಖೆಗಳ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ ಮತ್ತು ಉದ್ಘಾಟನಾ ಕಾರ್ಯಕ್ರಮವನ್ನು ಮಾಡಲಿದ್ದಾರೆ. ರಾತ್ರಿ 7.25ಕ್ಕೆ ವಿಶೇಷ ವಿಮಾನದ ಮೂಲಕ ಮೈಸೂರಿನಿಂದ ಬೆಂಗಳೂರಿಗೆ ತೆರಳಲಿದ್ದಾರೆ.

ಬಿಸಿಯೂಟ 'ಅಕ್ಷಯ ಪಾತ್ರ' ಉದ್ಘಾಟನೆ

ಮೈಸೂರು, ಜ.17– ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು ವಿಜಯನಗರ ವತಿಯಿಂದ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಶಾಸಕರು ಹಾಗೂ ಕಾಲೇಜು ಅಭಿವೃದ್ಧಿ ಸಮಿತಿ ಅಧ್ಯಕ್ಷ ಜಿ.ಟಿ.ದೇವೇಗೌಡ ಅವರ ನೇತೃತ್ವದಲ್ಲಿ ಹಾಗೂ ಇಸ್ಕಾನ್‌ನ (ISKCON) ಅಕ್ಷಯಪಾತ್ರ ಫೌಂಡೇಶನ್ ಸಹಕಾರದೊಂದಿಗೆ ಜ.19 ರಂದು ಬೆಳಗ್ಗೆ 11 ಗಂಟೆಗೆ ಕಾಲೇಜಿನ ವಿದ್ಯಾರ್ಥಿನಿಯರಿಗೆ 'ಅಕ್ಷಯ ಪಾತ್ರ' ಮಧ್ಯಾಹ್ನ ಬಿಸಿಯೂಟ ಪ್ರಾರಂಭಿಸುವ ಉದ್ಘಾಟನಾ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಸ್ಮೃತಿ 96 ರನ್ ಭರ್ಜರಿ ಆಟ: ಆರ್‌ಸಿಬಿ ಗೆಲುವಿನ ನಾಗಾಲೋಟ

ನವಿ ಮುಂಬೈ: ರಾಯಲ್ ಚಾಲೆಂಜರ್ಸ್ ಬೆಂಗಳೂರು 4ನೇ ಆವೃತ್ತಿಯ ಮಹಿಳಾ ಪ್ರೀಮಿಯರ್ ಲೀಗ್‌ನಲ್ಲಿ ನಾಲ್ಕನೇ ಗೆಲುವಿನ ನಗೆ ಬೀರಿದೆ. ಈ ಮೂಲಕ ಆರ್‌ಸಿಬಿ ಆಡಿದ ಎಲ್ಲ ಪಂದ್ಯಗಳನ್ನು ಗೆದ್ದು ಅಜೇಯ ಓಟವನ್ನು ಮುನ್ನಡೆಸಿದೆ. ಆರ್‌ಸಿಬಿ ಲೀಗ್ ಹಂತದ ನಾಲ್ಕನೇ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡವನ್ನು 8 ವಿಕೆಟ್‌ಗಳಿಂದ ಮಣಿಸಿದೆ. ಈ ಮೂಲಕ ಆರ್‌ಸಿಬಿ 8 ಅಂಕಗಳೊಂದಿಗೆ ಅಂಕ ಪಟ್ಟಿಯಲ್ಲಿ ಮೊದಲ ಸ್ಥಾನವನ್ನು ಭದ್ರ ಪಡಿಸಿಕೊಂಡಿದೆ.

167 ರನ್‌ಗಳ ಗುರಿಯನ್ನು ಬೆನ್ನತ್ತಿದ ಆರ್‌ಸಿಬಿ ತಂಡದ ಆರಂಭಿಕ ಆಟಗಾರ್ತಿ ಗ್ರೇಸ್ ಹ್ಯಾರಿಸ್ ಬಿಗ್ ಇನಿಂಗ್ಸ್ ಕಟ್ಟುವಲ್ಲಿ ವಿಫಲರಾದರು. ಇವರು ತಂಡ ಮೊತ್ತ 14 ಆಗಿದ್ದಾಗ ಪೆವಿಲಿಯನ್ ಸೇರಿದರು. ಸಂಕಷ್ಟದಲ್ಲಿದ್ದ ತಂಡಕ್ಕೆ ನಾಯಕಿ ಸ್ಮೃತಿ ಮಂಧಾನ ಹಾಗೂ ಜಾರ್ಜಿಯಾ ವೋಲ್ ಜೋಡಿ ಭರ್ಜರಿ ಜೊತೆಯಾಟದ ಪ್ರದರ್ಶನ ನೀಡಿತು. ಈ ಜೋಡಿಯನ್ನು ಕಟ್ಟಿ ಹಾಕುವಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡದ ಬೌಲರ್‌ಗಳು ವಿಫಲರಾದರು. ಪವರ್ ಪ್ಲೇನಲ್ಲಿ ವಿಕೆಟ್ ಕಳೆದುಕೊಳ್ಳದಂತೆ ಬ್ಯಾಟ್ ಮಾಡಿದ ಆರ್‌ಸಿಬಿ 37 ರನ್ ಸೇರಿಸಿತು.

ಆರಂಭದಲ್ಲಿ ತಾಳ್ಮೆಯಿಂದ ಬ್ಯಾಟ್ ಮಾಡಿದ ಸ್ಮೃತಿ ಮಂಧಾನ ಹಾಗೂ ಜಾರ್ಜಿಯಾ ವೋಲ್ ಸಮಯೋಚಿತ ಬ್ಯಾಟಿಂಗ್ ನಡೆಸಿ ತಂಡಕ್ಕೆ ಆಧಾರವಾಯಿತು. ಈ ಜೋಡಿ ಮಿಡ್ಲ್ ಓವರ್‌ಗಳಲ್ಲಿ ರನ್ ವೇಗಕ್ಕೆ ಚುರುಕು ಮುಟ್ಟಿಸಲು ನೆರವಾದರು. ಈ ಜೋಡಿ 92 ಎಸೆತಗಳಲ್ಲಿ 142 ರನ್ ಸೇರಿಸಿ ತಂಡವನ್ನು ಗೆಲುವಿನ ದಡಕ್ಕೆ ತಂದು ನಿಲ್ಲಿಸಿತು.

ಸ್ಮೃತಿ ಅಬ್ಬರ: ನಾಯಕಿ ಸ್ಮೃತಿ ಮಂಧಾನ ಅಮೋಘ ಬ್ಯಾಟಿಂಗ್‌ನಿಂದ 4 ರನ್‌ಗಳಿಂದ ಶತಕ ವಂಚಿತರಾದರು. ಸ್ಮೃತಿ 61 ಎಸೆತಗಳಲ್ಲಿ 13 ಬೌಂಡರಿ, 3 ಸಿಕ್ಸರ್ ಸಹಾಯದಿಂದ 96 ರನ್ ಬಾರಿಸಿ ನಂದಿನಿ ಶರ್ಮಾ ತೋಡಿದ ಖೆಡ್ಡಾಗೆ ಬಲಿಯಾದರು. ಇತ್ತ ಜಾರ್ಜಿಯಾ ವೋಲ್ 5 ಬೌಂಡರಿ, 2 ಸಿಕ್ಸರ್ ಸಹಾಯದಿಂದ ಅಜೇಯ 54 ರನ್ ಸಿಡಿಸಿ ಮಿಂಚಿದರು. ಅಂತಿಮವಾಗಿ ಆರ್‌ಸಿಬಿ 18.2 ಓವರ್‌ಗಳಲ್ಲಿ 2 ವಿಕೆಟ್ ನಷ್ಟಕ್ಕೆ 169 ರನ್ ಸೇರಿಸಿ ಮತ್ತೊಂದು ಜಯ ಸಾಧಿಸಿತು.

ಕಳಪೆ ಆರಂಭ: ಟಾಸ್ ಸೋತರೂ ಮೊದಲು ಬ್ಯಾಟ್ ಮಾಡುವ ಅವಕಾಶ ಪಡೆದ ಡೆಲ್ಲಿ ಕ್ಯಾಪಿಟಲ್ಸ್ ತಂಡದ ಆರಂಭ ಕಳಪೆಯಾಗಿತ್ತು. ಡೆಲ್ಲಿ ತಂಡದ ಪರ ಲಿಜೆಲ್ ಲೀ, ಲಾರಾ ವೋಲ್ವಾರ್ಡ್, ನಾಯಕಿ ಜೆಮಿಮಾ ರೊಡ್ರಿಗಸ್, ಮರಿಜಾನ್ನೆ ಕಪ್ ಜವಾಬ್ದಾರಿಯುತ ಬ್ಯಾಟಿಂಗ್ ಮಾಡುವಲ್ಲಿ ವಿಫಲರಾದರು. ಡೆಲ್ಲಿ ಕ್ಯಾಪಿಟಲ್ಸ್ ಮೊದಲ 1.3 ಓವರ್‌ಗಳಲ್ಲಿ 10 ರನ್‌ಗಳಿಗೆ ನಾಲ್ಕು ವಿಕೆಟ್ ಕಳೆದುಕೊಂಡು ಸಂಕಷ್ಟದಲ್ಲಿತ್ತು.

5ನೇ ವಿಕೆಟ್‌ಗೆ ಶಫಾಲಿ ವರ್ಮಾ ಹಾಗೂ ನಿಕಿ ಪ್ರಸಾದ್(12) ಜೋಡಿ ಸಮಯೋಚಿತ ಬ್ಯಾಟಿಂಗ್ ಪ್ರದರ್ಶನ ನೀಡಿತು. ಈ ಜೋಡಿ 35 ಎಸೆತಗಳಲ್ಲಿ 59 ರನ್ ಜೊತೆಯಾಟದ ಕಾಣಿಕೆ ನೀಡಿ ಅಬ್ಬರಿಸಿತು. ಆರಂಭಿಕ ಶಫಾಲಿ ವರ್ಮಾ 41 ಎಸೆತಗಳಲ್ಲಿ 5 ಬೌಂಡರಿ, 4 ಸಿಕ್ಸರ್ ಸಹಾಯದಿಂದ 62 ರನ್ ಸಿಡಿಸಿ ಔಟ್ ಆದರು. ಸ್ನೇಹಾ ರಾಣಾ 22, ಲೂಸಿ ಹ್ಯಾಮಿಲ್ಟನ್ 36, ಶ್ರೀ ಚರಣಿ 11 ರನ್ ಸಿಡಿಸಿ ತಂಡದ ಮೊತ್ತ ಹೆಚ್ಚಿಸಿದರು. ಅಂತಿಮವಾಗಿ ಡೆಲ್ಲಿ ಕ್ಯಾಪಿಟಲ್ಸ್ 20 ಓವರ್‌ಗಳಲ್ಲಿ 166 ರನ್‌ಗಳಿಗೆ ಆಲೌಟ್ ಆಯಿತು. ಆರ್‌ಸಿಬಿ ಪರ ವೇಗದ ಬೌಲರ್‌ಗಳಾದ ಲಾರೆನ್ ಬೆಲ್, ಸಯಾಲಿ ಸಾತ್ಘರೆ ತಲಾ 3 ವಿಕೆಟ್ ಕಬಳಿಸಿದರು.

ಮೈಸೂರಲ್ಲಿ ಡ್ರಗ್ಸ್ ಜಪ್ತಿ

ಮೈಸೂರು, ಜ.17(ಆರ್‌ಕೆ)– ಮೈಸೂರಿನ ಅಭಿಷೇಕ್ ಸರ್ಕಲ್ ಬಳಿ ಡ್ರಗ್ಸ್ ಮಾರಾಟ ಮಾಡಲು ಯತ್ನಿಸುತ್ತಿದ್ದ ವ್ಯಕ್ತಿಯೊರ್ವನನ್ನು ಸಿಸಿಬಿ ಪೊಲೀಸರು ಶನಿವಾರ ಬಂಧಿಸಿ, ಈತನಿಂದ ಅಂದಾಜು 30 ಸಾವಿರ ಮೌಲ್ಯದ 11 ಗ್ರಾಂ ಎಂಡಿಎಂಎ ಡ್ರಗ್ಸ್ ವಶಕ್ಕೆ ಪಡೆದಿದ್ದಾರೆ.

ಕೊಡಗಿನ ಸೋಮವಾರಪೇಟೆ ತಾಲೂಕಿನ ಸುಂಟಿಕೊಪ್ಪ ನಿವಾಸಿ ಶೋಯೆಬ್ ಬಂಧಿತ ಆರೋಪಿ. ಈತನಿಗೆ ಉದಯಗಿರಿ ವ್ಯಕ್ತಿಯೋರ್ವ 11 ಗ್ರಾಂನಿಂದ ಎಂಡಿಎಂಎ ಡ್ರಗ್ಸ್ ಪಡೆದು ಬೇರೆಯವರಿಗೆ ಮಾರಾಟ ಮಾಡಲು ಯತ್ನಿಸುತ್ತಿದ್ದೆ ಎಂದು ಸಿಸಿಬಿ ಪೊಲೀಸರ ವಿಚಾರಣೆಯಲ್ಲಿ ತಪ್ಪೊಪ್ಪಿಗೆ ಹೇಳಿಕೆ ನೀಡಿದ್ದಾನೆ.

ಬಳಿಕ ಸಿಸಿಬಿ ಪೊಲೀಸರು ಆರೋಪಿಯನ್ನು ವಿಜಯನಗರ ಪೊಲೀಸ್ ಇನ್ಸ್‌ಪೆಕ್ಟರ್ ಸುರೇಶ್ ಕುಮಾರ್ ವಶಕ್ಕೆ ನೀಡಿದ್ದಾರೆ. ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ನ್ಯಾಯಾಂಗ ಬಂಧನಕ್ಕೊಪ್ಪಿಸಲಾಗಿದೆ. ಮೈಸೂರಿನ ಎನ್.ಆರ್.ಠಾಣೆ ವ್ಯಾಪ್ತಿಯಲ್ಲಿ ಹಲವು ತಿಂಗಳ ಹಿಂದೆ ಎಂಡಿಎಂಎ ಡ್ರಗ್ಸ್ ತಯಾರಿಕಾ ಘಟಕದ ಮೇಲೆ ಮಹಾರಾಷ್ಟ್ರದ ಪೊಲೀಸರು ದಾಳಿ ನಡೆಸಿ ಕೋಟ್ಯಾಂತರ ಮೌಲ್ಯದ ಡ್ರಗ್ಸ್ ವಶಪಡಿಸಿಕೊಂಡಿದ್ದನ್ನು ಸ್ಮರಿಸಬಹುದು.

ಶನಿವಾರ ಪೊಲೀಸ್ ಅಧಿಕಾರಿಗಳ ಸಭೆಯಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿ ಸಿಎಂ ಸಿದ್ದರಾಮಯ್ಯ ತರಾಟೆಗೆ ತೆಗೆದುಕೊಂಡಿದ್ದಾರೆ.

ಓಂ ಶಕ್ತಿ ಯಾತ್ರೆಗೆ 16 ಬಸ್ಸುಗಳಲ್ಲಿ ಹೊರಟ ಯಾತ್ರಾರ್ಥಿಗಳು

ಶಾಸಕ ಹರೀಶ್‌ಗೌಡರಿಂದ ಶುಭ ಹಾರೈಸಿ ಬೀಳ್ಕೊಡುಗೆ



ಮೈಸೂರಿನ ಚಾಮರಾಜ ಕ್ಷೇತ್ರದಿಂದ ಓಂ ಶಕ್ತಿ ಯಾತ್ರೆಗೆ ಹೊರಟ ಯಾತ್ರಾರ್ಥಿಗಳ ಬಸ್‌ಗೆ ಶಾಸಕ ಕೆ.ಹರೀಶ್‌ಗೌಡ ಹಸಿರು ನಿಶಾನೆ ತೋರಿದರು.

ಮೈಸೂರು, ಜ.17(ಜಿಎ)–ಮೈಸೂರಿನ ಚಾಮರಾಜ ಕ್ಷೇತ್ರದಿಂದ ಓಂ ಶಕ್ತಿ ಯಾತ್ರೆಗೆ ಹೊರಟ ಯಾತ್ರಾರ್ಥಿಗಳ ಬಸ್‌ಗೆ ಶಾಸಕ ಕೆಹರೀಶ್‌ಗೌಡ ಹಸಿರು ನಿಶಾನೆ ತೋರಿದರು.

ಶಾಸಕರ ನೇತೃತ್ವದಲ್ಲಿ ಚಾಮರಾಜ ವಿಧಾನಸಭಾ ಕ್ಷೇತ್ರದ ವಿವಿಧ ವಾರ್ಡ್‌ಗಳಿಂದ ಇಂದು ಒಟ್ಟು 16 ಬಸ್ಸುಗಳಲ್ಲಿ ಮಹಿಳೆಯರು ಓಂ ಶಕ್ತಿ ಯಾತ್ರೆಗೆ ತೆರಳಿದ್ದು ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಮುಂಭಾಗ ವಿಶೇಷ ಪೂಜೆ ಸಲ್ಲಿಸಿ, ಯಾತ್ರೆ ಆರಂಭಿಸಿದರು.

ಹರೀಶ್‌ಗೌಡ ಮಾತನಾಡಿ, ಕ್ಷೇಮವಾಗಿ ಹೋಗಿ ದೇವರ ದರ್ಶನ ಮಾಡಿಕೊಂಡು ಬನ್ನಿ, ನಿಮ್ಮ ಪ್ರಯಾಣ ಸುಖಕರವಾಗಿರಲಿ, ದೇವರು ಎಲ್ಲರಿಗೂ ಒಳಿತು ಮಾಡಲಿ ಎಂದು ಶುಭಹಾರೈಸಿ ಬೀಳ್ಕೊಟ್ಟರು.

ಈ ಸಂದರ್ಭದಲ್ಲಿ ಮೈಸೂರು ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್, ಮಾಜಿ ಮೇಯರ್‌ಗಳಾದ ಬಿ.ಕೆ.ಪ್ರಕಾಶ್, ಪುಷ್ಪಲತಾ ಚಿಕ್ಕಣ್ಣ, ಅನಂತು, ಮಾಜಿ ಪಾಲಿಕೆ ಸದಸ್ಯರಾದ ಶಿವಮಾದು, ಪೈಲ್ವಾನ್ ಶ್ರೀನಿವಾಸ್, ನಂದ ಕುಮಾರ್, ಜೆ.ಗೋಪಿ, ಬ್ಲಾಕ್ ಅಧ್ಯಕ್ಷ ರವಿ ಮಂಚೇಗೌಡನಕೊಪ್ಪಲು, ಡಿ.ನಾಗಭೂಷಣ್, ಚಂದ್ರಕಲಾ, ಕುರುಬರ ಸಂಘದ ಮಾಜಿ ಅಧ್ಯಕ್ಷರಾದ ಸುಬ್ಬಣ್ಣ, ಮೈಸೂರು ಕೋ ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಜೆ.ಯೋಗೇಶ್, ಮೈಸೂರು ವಿವಿ ಸಿಂಡಿಕೇಟ್ ಸದಸ್ಯ ಮಹದೇಶ್,ಯುವ ಕಾಂಗ್ರೆಸ್ ಅಧ್ಯಕ್ಷ ನಿಶಾಂತ್ ಪಟೇಲ್, ಮುಖಂಡರಾದ ಭಾಸ್ಕರ್ ಗೌಡ, ವಾರ್ಡ್ ಅಧ್ಯಕ್ಷರುಗಳು, ವಿವಿಧ ಘಟಕಗಳ ಪದಾಧಿಕಾರಿಗಳು ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರಿನಲ್ಲಿ ಎರಡು ದಿನಗಳ ಚಿತ್ರ ಸಂತೆ ಆರಂಭ

ಕಣ್ಮನ ಸೆಳೆಯುವ ಮೈಸೂರು ಸಾಂಪ್ರದಾಯಿಕ ಕಲೆ, ಕುಂದಣ ಕಲೆಗೆ 500 ರಿಂದ 5 ಲಕ್ಷದವರೆಗೆ ಬೆಲೆ ನಿಗದಿ

● 24 ಕ್ಯಾರೆಟ್ ಚಿನ್ನದ ಲೇಪನದ ವಿಶಿಷ್ಟ ಕಲೆ ● ಕುಂಚದಲ್ಲಿ ಅರಳಿದ ಮೈಸೂರಿನ ಪಾರಂಪರಿಕ ಕಟ್ಟಡಗಳು ● ಕಣ್ಮನ ಸೆಳೆದ ದೇವರು, ಪ್ರಕೃತಿ, ಪ್ರಾಣಿ–ಪಕ್ಷಿಗಳ ಚಿತ್ರಪಟಗಳು



ಮೈಸೂರಿನ ವಿಜಯನಗರದ ಜಗನ್ನಾಥ ಕಲೆ ಮತ್ತು ಸಾಂಸ್ಕೃತಿಕ ಕೇಂದ್ರದಲ್ಲಿ ಶನಿವಾರ ಆರಂಭವಾದ ಎರಡು ದಿನಗಳ ಚಿತ್ರ ಸಂತೆಯಲ್ಲಿ ಪ್ರದರ್ಶನಗೊಂಡ ಚಿತ್ರಗಳನ್ನು ಆಸಕ್ತಿಯಿಂದ ವೀಕ್ಷಿಸುತ್ತಿರುವ ಗಣ್ಯರು.

ಮೈಸೂರು, ಜ.17(ಬಿಎಲ್‌ಯು)– ಕುಂಚದಲ್ಲಿ ಅರಳಿದ ಅಪರೂಪದ ಚಿತ್ರಗಳ ಹೂರಣ, 24 ಕ್ಯಾರೆಟ್ ಚಿನ್ನದ ಗೆರೆಯಲ್ಲಿ ರೂಪುಗೊಂಡ ಮೈಸೂರಿನ ಸಾಂಪ್ರದಾಯಿಕ ಚಿತ್ರ ಕಲೆ, ಚಿತ್ರ ಕಲಾ ಕ್ಷೇತ್ರಕ್ಕೆ ಶ್ರೀಮಂತಿಕೆ ತುಂಬುವ ಮೈಸೂರು ಕುಂದಣ ಕಲೆ, ಒಂದಕ್ಕಿಂತ ಒಂದು ಭಿನ್ನ, ವಿಭಿನ್ನ, ಮನೋಜ್ಞ.

ಮೈಸೂರಿನ ವಿಜಯನಗರದ ಜಗನ್ನಾಥ ಕಲೆ ಮತ್ತು ಸಾಂಸ್ಕೃತಿಕ ಕೇಂದ್ರದಲ್ಲಿ ಎರಡು ದಿನಗಳ ಚಿತ್ರ ಸಂತೆಯಲ್ಲಿ ಪ್ರದರ್ಶನಗೊಂಡಿರುವ ಚಿತ್ರ ಕಲೆಗಳ ವೈಶಿಷ್ಟತೆ ಇದು.

ಸಾಂಸ್ಕೃತಿಕ ಕೇಂದ್ರದ ಸುಮಾರು 30 ಸ್ಟಾಲ್‌ಗಳಲ್ಲಿ ಕರ್ನಾಟಕ, ಕೇರಳ, ತಮಿಳುನಾಡು ಸೇರಿದಂತೆ ಇತರೆ ರಾಜ್ಯಗಳ ಚಿತ್ರ ಕಲಾವಿದರು ತಾವು ರಚಿಸಿರುವ ಚಿತ್ರ ಕಲೆಗಳನ್ನು ಪ್ರದರ್ಶನ ಹಾಗೂ ಮಾರಾಟಕ್ಕಿಟ್ಟಿದ್ದಾರೆ.

ಮೈಸೂರಿನವರೇ ಆದ ಲೀಲಾವತಿ ಅವರು 24 ಕ್ಯಾರೆಟ್ ಚಿನ್ನ ಬಳಸಿ ರೂಪಿಸಿದ ಮೈಸೂರಿನ ಸಾಂಪ್ರದಾಯಿಕ ಚಿತ್ರಗಳು ಗಮನ ಸೆಳೆಯುತ್ತಿವೆ. ಮೈಸೂರು ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರು ಸ್ವತಃ ಕಲಾವಿದರಾಗಿದ್ದರು. ಈ ಹಿನ್ನೆಲೆಯಲ್ಲಿ ಚಿತ್ರ ಕಲೆಗೆ ಸಂಪೂರ್ಣ ಪ್ರೋತ್ಸಾಹ ನೀಡಿದ್ದರು. ಅವರ ಕಾಲದ ಚಿತ್ರ ಕಲೆಗಳು ಮೈಸೂರು ಸಾಂಪ್ರದಾಯಿಕ ಕಲೆ ಎಂದೇ ಪ್ರಸಿದ್ಧಿ ಪಡೆದಿದ್ದು, ಲೀಲಾವತಿ ಅವರು ಅದನ್ನು ಪ್ರದರ್ಶನಕ್ಕಿಟ್ಟಿದ್ದರು.

ಮೈಸೂರು ಆಸ್ಥಾನದಲ್ಲಿ ಕಲಾವಿದರಾಗಿದ್ದ ರಾಮನರಸಯ್ಯ ಅವರ ಶಿಷ್ಯರಾಗಿರುವ ಲೀಲಾವತಿ ಅವರು ಹತ್ತಾರು ಮೈಸೂರು ಸಾಂಪ್ರದಾಯಿಕ ಚಿತ್ರಗಳಿಗೆ ರೂಪ ನೀಡಿದ್ದಾರೆ. ಚಿನ್ನದ ಗೆರೆಯಲ್ಲಿ ವಿಶಿಷ್ಟ ರೂಪ ತಳೆದಿರುವ ಚಿತ್ರ ಪಟಗಳು 50 ರಿಂದ 60 ಸಾವಿರ ಬೆಲೆ ನಿಗದಿಯಾಗಿದೆ.

ಇನ್ನು ಮೈಸೂರಿನವರೇ ಆದ ಮೋಹನ್ ಕುಮಾರ್ ಅವರು ಮೈಸೂರು ಕುಂದಣ ಕಲೆಯನ್ನು ಪ್ರದರ್ಶನಕ್ಕಿಟ್ಟಿದ್ದರು. ವಿವಿಧ ಮರಗಳನ್ನು ಕೊರೆದು ರೂಪಿಸಿರುವ ಕುಂದಣ ಕಲೆಗೆ ಸುದೀರ್ಘ ಇತಿಹಾಸವಿದ್ದು, ಮೈಸೂರು ಮಹಾರಾಜರ ಕಾಲದಲ್ಲಿ ಅಂಬಾವಿಲಾಸ ಅರಮನೆಯ ಸೌಂದರ್ಯ ಹೆಚ್ಚಿಸಲು ಇದನ್ನು ಪರಿಚಯಿಸಲಾಯಿತು.

ಮೈಸೂರು ಕುಂದಣ ಕಲೆಯ ಚಿತ್ರಗಳು 500 ರೂಪಾಯಿಯಿಂದ 5 ಲಕ್ಷ ರೂಪಾಯಿವರೆಗೆ ಬೆಲೆ ನಿಗದಿಯಾಗಿವೆ. ಚಿತ್ರ ಕಲೆಯಲ್ಲಿ ಆಸಕ್ತಿ ಹೊಂದಿದವರು ಚಿತ್ರ ಸಂತೆಯಲ್ಲಿ ಇಂತಹ ಹಲವು ಚಿತ್ರಕಲೆಗಳನ್ನು ಖರೀದಿಸಿದ್ದಾರೆ.

ಮೈಸೂರಿನ ಚಿತ್ರ ಕಲಾವಿದರಾದ ಕಿರಣ್ ಆದಿತ್ಯ ಅವರು ಮೈಸೂರು ಅರಮನೆ, ಜಗನ್ಮೋಹನ ಅರಮನೆ, ದೇವರಾಜ ಮಾರುಕಟ್ಟೆ, ಮಹಾರಾಜ ಕಾಲೇಜು, ಜಿಲ್ಲಾಧಿಕಾರಿ ಹಳೆ ಕಚೇರಿ ಸೇರಿದಂತೆ ಮೈಸೂರಿನ ಪಾರಂಪರಿಕ ಶ್ರೀಮಂತಿಕೆಯನ್ನು ಇಮ್ಮಡಿಗೊಳಿಸುವ ಕಟ್ಟಡಗಳಿಗೆ ಕುಂಚದಲ್ಲಿ ನೈಜ ರೂಪ ನೀಡಿದ್ದಾರೆ.

ವಾಟರ್ ಕಲರ್, ಆಕ್ರ್ಯಾಲಿಕ್ ಪೈಂಟ್, ಕ್ಯಾನ್ವಸ್, ಆಯಿಲ್ ಪೈಂಟ್, ಪೆನ್ಸಿಲ್ ಕಲೆ ಸೇರಿದಂತೆ ವಿವಿಧ ರೀತಿಯ ಚಿತ್ರ ಕಲೆಗಳು ಚಿತ್ರ ಸಂತೆಯಲ್ಲಿ ಕಣ್ಮನ ಸೆಳೆದವು. ದೇವರು, ಪ್ರಕೃತಿ, ಪ್ರಾಣಿ, ಪಕ್ಷಿಗಳು, ಪಾರಂಪರಿಕ ಕಟ್ಟಡಗಳು ಕಲಾವಿದರ ಕುಂಚದಲ್ಲಿ ನೈಜ ರೂಪ ಪಡೆದಿದೆ.



ವಿವಿಧ ರೀತಿಯ ಚಿತ್ರ ಕಲೆಗಳು

ಮೈಸೂರು ಸಾಂಪ್ರದಾಯಿಕ ಕಲೆ ಬೆಳೆಸಿ, ಪ್ರೋತ್ಸಾಹಿಸಿ

ಮೈಸೂರು ಮಹಾರಾಜರು ಪೋಷಿಸಿದ ಮೈಸೂರು ಸಾಂಪ್ರದಾಯಿಕ ಕಲೆಗಳನ್ನು ಮರೆಯಾಗಿಸದೆ ಮುಂದುವರೆಸಿಕೊಂಡು ಹೋಗಬೇಕು ಎಂದು ಸಿಐಐ ಮೈಸೂರು ವಲಯದ ಅಧ್ಯಕ್ಷ ನಾಗರಾಜ ಗರ್ಗೇಶ್ವರಿ ಸಲಹೆ ನೀಡಿದರು. ಅನಾದಿ ಕಾಲದಿಂದಲೂ ವಿವಿಧ ಮಜಲುಗಳನ್ನು ಪಡೆದಿರುವ ಕಲೆಯನ್ನು ಆರಾಧಿಸಿ, ಆನಂದಿಸಿ, ಪ್ರೋತ್ಸಾಹಿಸಿ. ಈ ಮೂಲಕ ಚಿತ್ರ ಕಲಾವಿದರಿಗೆ ಎಲ್ಲಾ ರೀತಿಯ ಸಹಕಾರ ನೀಡಬೇಕು. ನಮ್ಮ ಮೈಸೂರಿನ ಸಾಂಪ್ರದಾಯಿಕ ಚಿತ್ರ ಕಲೆಯನ್ನು ಉಳಿಸಬೇಕು, ಬೆಳೆಸಬೇಕು ಎಂದು ಅವರು ಕಿವಿಮಾತು ಹೇಳಿದರು.

ಇದೇ ವೇಳೆ ಮಾತನಾಡಿದ ಮೈಸೂರಿನ ಸಿಎಫ್‌ಟಿಆರ್‌ಐ ಮಾಜಿ ನಿರ್ದೇಶಕ ಡಾ.ವಿ.ಪ್ರಕಾಶ್, ಮೈಸೂರು ಸಾಂಸ್ಕೃತಿಕ ರಾಜಧಾನಿ ಮಾತ್ರವಲ್ಲದೆ ಕಲೆಗಳ ರಾಜಧಾನಿ ಕೂಡ. ಇಂತಹ ವಿಶಿಷ್ಟ ಕಲೆಯನ್ನು ಬೆಳೆಸಲು, ಸಂರಕ್ಷಿಸಲು ಎಲ್ಲರೂ ಸಹಕಾರ ನೀಡಬೇಕು ಎಂದರು.

ಮೈಸೂರು ಮಹಾರಾಜರ ಪರಂಪರೆಯನ್ನು ಗೌರವಿಸುವಂತೆ ಜಗನ್ನಾಥ್ ಶೆಣೈ ಅವರು ಆಧುನಿಕ ಕಲಾ ಕ್ಷೇತ್ರ ನಿರ್ಮಾಣ ಮಾಡಿದ್ದಾರೆ ಎಂದು ಪ್ರಶಂಸಿಸಿದರು.

ನಂತರ ಮಾತನಾಡಿದ ಸಾಂಸ್ಕೃತಿಕ ಕೇಂದ್ರದ ಸಂಸ್ಥಾಪಕ ಡಾ.ಜಗನ್ನಾಥ ಶೆಣೈ ಅವರು, ಕಲಾ ಕ್ಷೇತ್ರದ ಬೆಳವಣಿಗೆ ಹಾಗೂ ಸಂರಕ್ಷಣೆಗಾಗಿ ಇದನ್ನು ಸ್ಥಾಪನೆ ಮಾಡಲಾಗಿದೆ. ಮೈಸೂರಿನ ಎಲ್ಲಾ ಜನರು ಇದನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಅಪರ ಜಿಲ್ಲಾಧಿಕಾರಿ ಡಾ.ಬಿ.ಶಿವರಾಜ್, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣ ಗೌಡ, ಫೋರಂ ಮೈಸೂರು ಅಧ್ಯಕ್ಷ ಬಿ.ಎಸ್.ಪ್ರಶಾಂತ್ ಸೇರಿದಂತೆ ಇತರೆ ಗಣ್ಯರು ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು.







ಚಿತ್ರ ಸಂತೆಯ ಮಳಿಗೆಗಳಲ್ಲಿ ಕಂಡುಬಂದ ಕಲಾಕೃತಿಗಳು

ಫೆ.1ರಿಂದ ಮೂರು ದಿನಗಳ ಉತ್ತನಹಳ್ಳಿ ಅಮ್ಮನವರ ಉತ್ಸವ

ಮೈಸೂರು, ಜ.17– ಮೈಸೂರಿನ ಸರ್ಕಾರಿ ಉತ್ತನಹಳ್ಳಿಯ ಶ್ರೀ ಜ್ವಾಲಾಮುಖಿ ತ್ರಿಪುರಸುಂದರಿ ಅಮ್ಮನವರ ಜಾತ್ರಾ ಮಹೋತ್ಸವವು ಫೆಬ್ರವರಿ 1ರಿಂದ 3ರವರೆಗೆ ಜರುಗಲಿದೆ.



ಫೆ.1ರಂದು ಶ್ರೀ ಜ್ವಾಲಾಮುಖಿ ತ್ರಿಪುರ ಸುಂದರಿ ಅಮ್ಮನವರಿಗೆ ಏಕಾದಶವಾರ, ರುದ್ರಾಭಿಷೇಕ, ಸುವರ್ಣಾಲಂಕಾರ ಸಹಸ್ರ ನಾಮಾರ್ಚನೆ ನಿವೇದನೆ, ಮಹಾಮಂಗಳಾರತಿ ರಾಜೋಪಚಾರ, ರಾಷ್ಟ್ರಾಶೀರ್ವಾದ, ತೀರ್ಥಪ್ರಸಾದ ವಿನಿಯೋಗ, ಪ್ರದೋಷಕಾಲದ ಪೂಜೆ, ತ್ರಿಶತಿ ನಾಮಾರ್ಚನೆ ಮಹಾಮಂಗಳಾರತಿಯೊಂದಿಗೆ ರಾತ್ರಿ 8.30ಕ್ಕೆ ಅಮ್ಮನವರ ಕನ್ಯಾಕನ್ನಡಿ ಉತ್ಸವ ಪುಣ್ಯಾಹ ಮಂಟಪೋತ್ಸವ ನಡೆಯಲಿದೆ.

ಫೆ.2ರಂದು ಪ್ರಥಮಾ ಆಶ್ಲೇಷ ನಕ್ಷತ್ರ ಶ್ರೀಯವರಿಗೆ ಏಕಾದಶವಾರ ರುದ್ರಾಭಿಷೇಕ ಸಹಸ್ರ ನಾಮಾರ್ಚನೆ ವಿಶೇಷ ಪೂಜೆಗಳು, ಕದಲಿ ಅಲಂಕಾರ, ಫೆ.3ರಂದು ದ್ವಿತೀಯಾ ಮಖ ನಕ್ಷತ್ರ ಶ್ರೀಯವರಿಗೆ ಏಕಾದಶವಾರ ರುದ್ರಾಭಿಷೇಕ ಪಂಚೋಪಚಾರ ಪೂಜೆ ಮಹಾಮಂಗಳಾರತಿ ನಡೆಯಲಿದೆ. ಮೂರೂ ದಿನಗಳು ಮಧ್ಯಾಹ್ನ 12.30ಕ್ಕೆ ಪ್ರಸಾದ ವಿನಿಯೋಗ ಇರಲಿದೆ ಎಂದು ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ತಿಳಿಸಿದೆ.

ಭಾರತೀಯ ವಿದ್ಯಾಭವನದಲ್ಲಿ ಮನಸೂರೆಗೊಂಡ ಕಥಕ್ ನೃತ್ಯ





ಹರಿ ಮತ್ತು ವಿದುಷಿ ಚೇತನಾ ಪ್ರಸ್ತುತಪಡಿಸಿದ ಕಥಕ್ ನೃತ್ಯದ ದೃಶ್ಯ

ಮೈಸೂರು, ಜ.17(ಎಸ್‌ಪಿಎನ್)– ಮೈಸೂರು ವಿಜಯನಗರ ಮೊದಲನೇ ಹಂತದಲ್ಲಿರುವ ಭಾರತೀಯ ವಿದ್ಯಾಭವನ ಮೈಸೂರು ಕೇಂದ್ರದ ತಾತಾಚಾರಿ ಸಭಾಂಗಣದಲ್ಲಿ ಶನಿವಾರ ಬಿವಿಬಿ ಮಾಸಿಕ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಬೆಂಗಳೂರಿನ ನೂಪುರ ಪ್ರದರ್ಶನ ಕಲಾ ಕೇಂದ್ರದ ವಿದ್ವಾನ್ ಹರಿ ಮತ್ತು ವಿದುಷಿ ಚೇತನಾ ತಂಡದಿಂದ ಪ್ರಸ್ತುತ ಪಡಿಸಿದ ಕಥಕ್ ನೃತ್ಯ ನೋಡುಗರ ಮನಸೂರೆಗೊಂಡಿತು.

ಇದಕ್ಕೂ ಮುನ್ನ ಭಾರತೀಯ ವಿದ್ಯಾಭವನ ಮೈಸೂರು ಕೇಂದ್ರದ ಛೇರ್ಮನ್ ಡಾ.ಸಿ.ನಾಗಣ್ಣ ಹಾಗೂ ಬೆಂಗಳೂರಿನ ನೂಪುರ ಪ್ರದರ್ಶನ ಕಲಾ ಕೇಂದ್ರದ ನಿರ್ದೇಶಕರಾದ ವಿದ್ವಾನ್ ಹರಿ ಮತ್ತು ವಿದುಷಿ ಚೇತನಾ ಕಾರ್ಯಕ್ರಮ ಉದ್ಘಾಟಿಸಿದರು.

ಈ ವೇಳೆ ಬಿವಿಬಿ ಗೌರವ ಕಾರ್ಯದರ್ಶಿ ಪಿ.ಎಸ್.ಗಣಪತಿ, ಖಜಾಂಚಿ ಡಾ.ಎ.ಟಿ.ಭಾಷ್ಯಂ, ಸಮಿತಿ ಸದಸ್ಯರಾದ ಟಿ.ಎಸ್.ಗಂಗಾಧರ್, ಭಾರತೀಯ ವಿದ್ಯಾ ಭವನ ಶಾಲೆಯ ಪ್ರಾಂಶುಪಾಲರಾದ ಎಸ್.ಲೇಖಾನಾಯರ್, ಉಪಪ್ರಾಂಶುಪಾಲರಾದ ಎಚ್.ಎನ್.ಪ್ರಫುಲ್ಲಾ, ಆಡಳಿತಾಧಿಕಾರಿ ರವಿಕುಮಾರ್ ಉಪಸ್ಥಿತರಿದ್ದರು.


ರವಿ ಸ್ನೇಹ ಬಳಗ ಸೇವಾ ಟ್ರಸ್ಟ್(ರಿ)ವತಿಯಿಂದ ನಿರ್ಮಿಸಿರುವ
ಬಸ್ ತಂಗುದಾಣ ಉದ್ಘಾಟನಾ ಸಮಾರಂಭ
ಡಿ. ಮಾದೇಗೌಡ ಸರ್ಕಲ್, ಅಂಬರೀಶ್ ರಸ್ತೆ, ಹೆಬ್ಬಾಳ್, ಮೈಸೂರು
ದಿನಾಂಕ 18-01-2026 ಭಾನುವಾರ ದಂದು ಸಮಯ ಸಂಜೆ 4.ಗಂಟೆಗೆ ಸಮಾರಂಭಕ್ಕೆ
ಆಗಮಿಸುತ್ತಿರುವ ಕೃಷಿ ಸಚಿವರಾದ ಎನ್. ಚೆಲುವರಾಯಸ್ವಾಮಿ ರವರು ಮತ್ತು
ಚಾಮರಾಜ ವಿಧಾನಸಭಾ ಕ್ಷೇತ್ರ ಶಾಸಕರಾದ ಕೆ. ಹರೀಶ್ ಗೌಡ ರವರಿಗೆ ಸುಸ್ವಾಗತ
ಬಸ್ಸು ತಂಗುದಾಣ
ಡಿ. ಮಾದೇಗೌಡ ಸರ್ಕಲ್ ಡಾ॥ ಎಂ ಹೆಚ್. ಅಂಬರೀಷ್ ರಸ್ತೆ, ವಾರ್ಡ್ ನಂ.2 ಎಂ.ಜಿ. ಕೊಪ್ಪಲು, ಹೆಬ್ಬಾಳ್, ಮೈಸೂರು-570016
ಕೊಡುಗೆ: ರವಿ ಸ್ನೇಹ ಬಳಗ ಸೇವಾ ಟ್ರಸ್ಟ್ (ರಿ.)
ಟ್ರಸ್ಟ್ ಅಧ್ಯಕ್ಷರು: ಶ್ರೀಮತಿ ದಿವ್ಯ ಎಂ. ರವಿ ಆರ್. (ಡೆಲ್ಲಿ)
ಸರ್ವರಿಗೂ ಸುಸ್ವಾಗತ


ಎರಡನೇ ವರ್ಷದ ಸವಿನೆನಪು
ಶ್ರೀ ಮರವೇಗೌಡರು
ಜಯನಗರ ಕೆಜಿ ಕೊಪ್ಪಲ್ ವಿವೇಕಾನಂದ ಸರ್ಕಲ್ ಮೈಸೂರ್
ಸದಾ ನಿಮ್ಮ ಸ್ಮರಣೆಯಲ್ಲಿರುವ
ದುಃಖತಪ್ತರು: ಪತ್ನಿ ಸರಸ್ವತಮ್ಮ, ಮಕ್ಕಳು, ಸೊಸೆಯಂದಿರು,
ಮೊಮ್ಮಕ್ಕಳು ಹಾಗೂ ಕುಟುಂಬ ವರ್ಗ


ದಿನಾಂಕ: 18.01.2026ನೇ ಭಾನುವಾರ
ಕುಪ್ಯ ಗ್ರಾಮದ ವಿವಿಧ ಕಾಮಗಾರಿಗಳ
ಶಂಕುಸ್ಥಾಪನೆ ಮತ್ತು ಉದ್ಘಾಟನೆ ಹಾಗೂ
ಸಂಗೊಳ್ಳಿ ರಾಯಣ್ಣ, ಬಾಬು ಜಗಜೀವನ್
ರಾಮ್ ಪ್ರತಿಮೆ ಅನಾವರಣಕ್ಕೆ
ಆಗಮಿಸುತ್ತಿರುವ ಮಾನ್ಯ
ಮುಖ್ಯಮಂತ್ರಿಗಳಾದ
ಸನ್ಮಾನ್ಯ
ಶ್ರೀ ಸಿದ್ದರಾಮಯ್ಯ
ಅವರಿಗೆ ಆತ್ಮೀಯ ಸುಸ್ವಾಗತ